# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಮಂಗಳವಾರ, ಜುಲೈ 19, 2022

ಸಂಪುಟ : 49 ಸಂಚಿಕೆ : 66 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಸಿದ್ದರಾಮಯ್ಯ ಅಮೃತ ಮಹೋತ್ಸವಕ್ಕೆ 10 ಲಕ್ಷ ಜನ

### ವೇದಿಕೆ ನಿರ್ಮಾಣದ ಭೂಮಿ ಪೂಜೆ ನೆರವೇರಿಸಿದ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್



wದಾವಣಗೆರೆ, ಜು. 18 – ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರ 75ನೇ ವರ್ಷದ ಜನ್ಮ ದಿನಾಚರಣೆ ಸಮಾರಂಭಕ್ಕೆ ಐದರಿಂದ ಹತ್ತು ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಬರುವ ಆಗಸ್ಟ್ 3ರಂದು ನಗರದ ಬೈಪಾಸ್‌ನಲ್ಲಿರುವ ಶಾಮನೂರು ಅರಮನೆಯ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದ ವೇದಿಕೆ ಕಾಮಗಾರಿಗೆ ಗುದ್ದಲಿ ಪೂಜೆ ಮೂಲಕ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಸಿದ್ದರಾಮಯ್ಯನವರ ಸಂಪುಟದಲ್ಲಿ ಸಚಿವರಾಗಿದ್ದವರು ಮುಂಚೂಣಿಯಲ್ಲಿ ನಿಂತು ಈ ಕಾರ್ಯಕ್ರಮವನ್ನು ನೆರವೇರಿಸುತ್ತಿದ್ದೇವೆ. ರಾಜ್ಯದ ಮಧ್ಯ ಭಾಗದಲ್ಲಿರುವ ದಾವಣಗೆರೆ ಎಲ್ಲೆಡೆಯಿಂದ ಜನರು ಬರಲು ಅನುಕೂಲಕರವಾಗಿದೆ. ಹತ್ತು ಲಕ್ಷದವರೆಗೆ ಜನ ಬಂದರೂ ಅಚ್ಚರಿ ಪಡಬೇಕಿಲ್ಲ ಎಂದರು.

ಸಿದ್ದರಾಮಯ್ಯ ಅವರ ಕಾಲದಲ್ಲಿ ಬಿಗಿ ಆಡಳಿತ ಇತ್ತು. ಜನಪರ ಯೋಜನೆಗಳನ್ನು ಜಾರಿಗೆ ತರಲಾಗಿತ್ತು. ಮತ್ತೆ ಅಂಥದೇ ಜನಪರ ಆಡಳಿತ ತರಬೇಕು ಎಂಬುದು ನಮ್ಮ ಆಶಯ. ಅದಕ್ಕಾಗಿಯೇ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದವರು ತಿಳಿಸಿದರು.

ಕಾರ್ಯಕ್ರಮದ ಖರ್ಚು-ವೆಚ್ಚಗಳ ಬಗ್ಗೆ ಇನ್ನೂ ಅಂದಾಜಿಸಿಲ್ಲ. ಸಿದ್ದರಾಮಯ್ಯ ಅವರ ಅಭಿಮಾನಿಗಳೇ ಹಣ ನೀಡುತ್ತಿದ್ದಾರೆ. ಇಂದೇ 1 ಲಕ್ಷ ರೂ.ಗಳವರೆಗೆ ಹಣ ಹಾಗೂ ಹಣ ನೀಡುವ ಭರವಸೆ ನೀಡಲಾಗಿದೆ ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಾರ್ಯಕ್ರಮದ ಪ್ರಧಾನ ವೇದಿಕೆ 50x200 ಅಡಿ ಗಾತ್ರದ್ದಾಗಿರಲಿದೆ. ಇದರ ಜೊತೆಗೆ ಪ್ರತ್ಯೇಕ ಚಿಕ್ಕ ವೇದಿಕೆಯೂ ಇರಲಿದೆ. ಪ್ರಧಾನ ವೇದಿಕೆಯ ಮೇಲೆ 100 ಜನ ಗಣ್ಯರಿಗೆ ಆಗುವಷ್ಟು ಜಾಗ ಇರಲಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬರಲಿದ್ದಾರೆ. ಅವರು ಎಸ್.ಪಿ.ಜಿ. ಭದ್ರತೆ ಹೊಂದಿರುವುದನ್ನು ಪರಿಗಣಿಸಿ ಅದಕ್ಕೆ ಅನುಗುಣವಾಗಿ ವೇದಿಕೆ ಮೇಲೆ ಗಣ್ಯರಿಗೆ ಸ್ಥಾನ ಕಲ್ಪಿಸಲಾಗುವುದು ಎಂದು ಮಲ್ಲಿಕಾರ್ಜುನ್ ತಿಳಿಸಿದರು.

ಕಾರ್ಯಕ್ರಮಕ್ಕೆ ಬರುವ ಜನರಿಗೆ 3 ಅಡುಗೆ ಮನೆಗಳನ್ನು ರೂಪಿಸಲಾಗುವುದು. ಪ್ರತಿ ಅಡುಗೆ ಮನೆಯಲ್ಲಿ 10 ಸಾವಿರ ಜನ ನಿಲ್ಲುವಷ್ಟು ಜಾಗ ಇರಲಿದೆ ಎಂದವರು ವಿವರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, (2ನೇ ಪುಟಕ್ಕೆ)

**ಮುಂದಿನ ಚುನಾವಣೆಯಲ್ಲಿ ಸ್ಪರ್ಧೆ ಬಗ್ಗೆ ನಿರ್ಧಾರವಾಗಿಲ್ಲ**

**ಪ್ರಭಾ ಮಲ್ಲಿಕಾರ್ಜುನ್ ಸದ್ಯಕ್ಕೆ ರಾಜಕೀಯಕ್ಕೆ ಬರಲ್ಲ**

## ಜಿಲ್ಲೆಯಲ್ಲಿ 40% ಕೊಟ್ರೆ ಮಾತ್ರ ಕೆಲಸ

ದಾವಣಗೆರೆ, ಜು. 18 – ಜಿಲ್ಲೆಯಲ್ಲಿ 40 ಪರ್ಸೆಂಟ್ ಕೊಟ್ಟರೆ ಮಾತ್ರ ಕೆಲಸವಾಗುತ್ತದೆ ಎಂಬ ಪರಿಸ್ಥಿತಿ ಇದೆ ಎಂದು ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಬಿಜೆಪಿ ಸರ್ಕಾರದಲ್ಲಿ ಕಾಮಗಾರಿಗಳು ವಿಳಂಬವಾಗುತ್ತಿವೆ. ಕಚೇರಿಗಳಿಗೆ ಅಲೆದಾಡಿದರೂ ಕೆಲಸ ಆಗುತ್ತಿಲ್ಲ ಎಂದರು.

ಹರಿಹರದಲ್ಲಿ ಕುಡಿಯುವ ನೀರಿನ ಚೆಕ್‌ಡ್ಯಾಂ ಯೋಜನೆ ಸ್ಥಗಿತವಾಗಿರುವುದನ್ನು ಉದಾಹರಿಸಿದ ಅವರು, ಯೋಜನೆ ಸಮರ್ಪಕ ಮತ್ತು ಆಸಕ್ತಿ ಇದ್ದಾಗ ಮಾತ್ರ ಜಾರಿಗೆ ಬರುತ್ತದೆ ಎಂದರು.

ಗಾಜಿನ ಮನೆಯ ಕುರಿತು ಮಾತನಾಡಿದ ಅವರು, ತಮ್ಮ ಅವಧಿಯಲ್ಲಿ ರೂಪಿಸಲಾದ ಗಾಜಿನ ಮನೆ ಈಗ ದೂಳು ಹಿಡಿದಿದೆ. ನಿರ್ವಹಣೆ ಆಗುತ್ತಿಲ್ಲ. ಇವರು (ಬಿಜೆಪಿ) ಮಜಾ ಮಾಡುವುದಕ್ಕೆ ಸೀಮಿತ ಆಗಿದ್ದಾರೆ ಎಂದರು.

ತಮ್ಮ ಅವಧಿಯಲ್ಲಿ ವಿದೇಶಿ ಗಿಡ ತರಿಸಿ ಗಾಜಿನ ಮನೆ ಆವರಣದಲ್ಲಿ ನೆಡೆಸಿದ್ದೆವು. ಇವರು ಜಾಲಿ ಗಿಡ, ಇಲ್ಲವೇ ಪೇರಲ ಗಿಡ ಹಾಕುತ್ತೇವೆ ಎಂದರೆ ಏನು ಮಾಡಬೇಕು? ಎಂದು ಪ್ರಶ್ನಿಸಿದರು.

ಮುಂಬರುವ ಚುನಾವಣೆಯಲ್ಲಿ ಜಿಲ್ಲೆಯ ಏಳೂ (3ನೇ ಪುಟಕ್ಕೆ)

## ರಾಷ್ಟ್ರಪತಿ ಚುನಾವಣೆಗೆ ಶೇ.99ರಷ್ಟು ಮತದಾನ

### ಕರ್ನಾಟಕ ಸೇರಿ ಹತ್ತು ರಾಜ್ಯಗಳಲ್ಲಿ ಪೂರ್ಣ ಮತದಾನ



**ಎನ್.ಡಿ.ಎ. ಅಭ್ಯರ್ಥಿ ದ್ರೌಪದಿ ಮುರ್ಮು ಪರ ಹಲವು ರಾಜ್ಯಗಳಲ್ಲಿ ಅಡ್ಡ ಮತದಾನ, ಮೂರನೇ ಎರಡರಷ್ಟು ಬಹುಮತದೊಂದಿಗೆ ಗೆಲುವಿನ ಸಾಧ್ಯತೆ**

ನವದೆಹಲಿ, ಜು. 18 – ರಾಷ್ಟ್ರಪತಿ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಶೇ.99ರಷ್ಟು ಮತದಾನವಾಗಿದೆ. ಹತ್ತು ರಾಜ್ಯಗಳು ಹಾಗೂ ಪುದುಚೆರಿ ಕೇಂದ್ರಾಡಳಿತ ಪ್ರದೇಶದಲ್ಲಿ ಶೇ.100ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಸಂಸತ್ ಭವನ ಹಾಗೂ 30 ರಾಜ್ಯ ವಿಧಾನಸಭಾ ಕೇಂದ್ರಗಳಲ್ಲಿ ಮುಕ್ತ, ನ್ಯಾಯೋಚಿತ ಹಾಗೂ ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆದಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.


ಒಟ್ಟು 4,796 ಸಂಸದರು ಹಾಗೂ ವಿಧಾನಸಭಾ ಸದಸ್ಯರು ಮತದಾನಕ್ಕೆ ಅರ್ಹತೆ ಪಡೆದಿದ್ದರು. ಇವರ ಪೈಕಿ ಶೇ.99ರಷ್ಟು ಸದಸ್ಯರು ಮತ ಚಲಾಯಿಸಿದ್ದಾರೆ.

ಛತ್ತೀಸ್‌ಘಡ, ಗೋವ, ಗುಜರಾತ್, ಹಿಮಾಚಲ ಪ್ರದೇಶ, ಕೇರಳ, ಕರ್ನಾಟಕ, ಮಧ್ಯ ಪ್ರದೇಶ, ಮಣಿಪುರ, ಸಿಕ್ಕಿಂ, ತಮಿಳುನಾಡು ಹಾಗೂ ಪುದುಚೆರಿಗಳಲ್ಲಿ ಶೇ.100ರಷ್ಟು ಮತದಾನವಾಗಿದೆ.

44 ಸಂಸದರು ತಮ್ಮ ರಾಜ್ಯಗಳ ವಿಧಾನಸಭೆಗಳಲ್ಲಿ ಮತ ಚಲಾಯಿಸಿದ್ದಾರೆ. ಒಂಭತ್ತು ಶಾಸಕರು ಸಂಸತ್ತಿನಲ್ಲಿ ಹಾಗೂ ಇನ್ನಿಬ್ಬರು ಬೇರೆ ರಾಜ್ಯಗಳಲ್ಲಿ ಮತ ಚಲಾಯಿಸಿದ್ದಾರೆ.

ಬಿಜೆಪಿ ನೇತೃತ್ವದ ಎನ್.ಡಿ.ಎ. ಅಭ್ಯರ್ಥಿ ದ್ರೌಪದಿ ಮುರ್ಮು ಹಾಗೂ ಪ್ರತಿಪಕ್ಷಗಳ ಅಭ್ಯರ್ಥಿಯಾದ ಯಶವಂತ್ ಸಿನ್ಹಾ ನಡುವೆ ಸ್ಪರ್ಧೆ ಇದೆ. ಮುರ್ಮು ಗೆಲ್ಲುವುದು ಖಚಿತವಾಗಿದೆ. ಬಿ.ಜೆ.ಡಿ., ಬಿ.ಎಸ್.ಪಿ., ಶಿರೋಮಣಿ ಅಕಾಲಿ ದಳ, ಶಿವಸೇನೆ ಹಾಗೂ ಜೆ.ಎಂ.ಎಂ. ಪಕ್ಷಗಳು ಮುರ್ಮು ಅವರಿಗೆ ಬೆಂಬಲಿಸಿದ್ದವು. ಹೀಗಾಗಿ ಅವರು ಚುನಾವಣೆಯಲ್ಲಿ ಮೂರನೇ ಎರಡರಷ್ಟು ಬಹುಮತ ಪಡೆಯುವ ಅವಕಾಶ ಇದೆ. ಮುರ್ಮು ಅವರು ರಾಷ್ಟ್ರಪತಿ ಯಾಗುವ ದೇಶದ ಮೊದಲ ಬುಡಕಟ್ಟು ನಾಯಕಿ ಹಾಗೂ ಈ ಹುದ್ದೆಗೆ ಬರುತ್ತಿರುವ ಎರಡನೇ (3ನೇ ಪುಟಕ್ಕೆ)

## ಯುರೋಪ್‌ನಾದ್ಯಂತ ಏರಿದ ತಾಪಮಾನ: ಸ್ಪೇನ್‌ನಲ್ಲಿ ನೂರಾರು ಸಾವು



ಲಂಡನ್, ಜು. 18 – ಯುರೋಪಿನಲ್ಲೀಗ ಬಿಸಿಲ ಪ್ರಕೋಪ ಭುಗಿಲೆದ್ದಿದೆ. ಬ್ರಿಟನ್‌ನಲ್ಲಿ ಹಿಂದೆಂದೂ ಕಾಣದಂತಹ ತಾಪಮಾನ ಉಂಟಾಗಿದ್ದರೆ, ಸ್ಪೇನ್ ಹಾಗೂ ಫ್ರಾನ್ಸ್‌ಗಳಲ್ಲಿ ಕಾಡ್ಗಿಚ್ಚು ಹರಡಿದೆ.

ಸ್ಪೇನ್‌ನಲ್ಲಿ ಹೊತ್ತಿ ಉರಿದ ಕಾಡ್ಗಿಚ್ಚಿಗೆ ಸಿಲುಕಿ ಇಬ್ಬರು ಸಾವನ್ನಪ್ಪಿದ್ದಾರೆ. ಇದು ಪರಿಸರ ಬದಲಾವಣೆಯ ಪರಿಣಾಮ ಎನ್ನಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಯುರೋಪಿನಾದ್ಯಂತ ಅಸಾಧಾರಣ ಬಿಸಿಲು ಕಂಡು ಬರುತ್ತಿದೆ. ಪೋರ್ಚುಗಲ್‌ನಿಂದ ಬಾಲ್ಕನ್ ವಲಯದವರೆಗೆ ಹಲವೆಡೆ ಕಾಡ್ಗಿಚ್ಚು ಹರಡಿದೆ. ಇನ್ನು ಕೆಲ ಪ್ರದೇಶಗಳಲ್ಲಿ ಬರದ ಬೇಗೆ ತೀವ್ರವಾಗಿದೆ. (4ನೇ ಪುಟಕ್ಕೆ)

## ಭಿಕ್ಷಾಟನೆ ನಿಷೇಧ ಸಂಪೂರ್ಣ ಜಾರಿ

### ಮದ್ದು ಬಳಸಿ ಮಕ್ಕಳ ಭಿಕ್ಷಾಟನೆಗೆ ಬಳಕೆ ಮಾಡಲಾಗುತ್ತಿದೆ : ಪೂಜಾರಿ

ಬೆಂಗಳೂರು, ಜು. 18 - ಭಿಕ್ಷಾಟನೆ ನಿಷೇಧ ಕಾಯ್ದೆಯನ್ನು ಸಂಪೂರ್ಣವಾಗಿ ಜಾರಿಗೆ ತರಲಾಗುವುದು ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಭಿಕ್ಷಾಟನೆ ನಿರ್ಮೂಲನೆ ಸಂಬಂಧ ಗೃಹ ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು, ಕಾರ್ಮಿಕ ಇಲಾಖೆ ಸಚಿವರು, ಕಾನೂನು ಸೇವಾ ಪ್ರಾಧಿಕಾರ ಸೇರಿದಂತೆ, ವಿವಿಧ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಭಿಕ್ಷಾಟನೆ ಹೆಸರಿನಲ್ಲಿ ವಿವಿಧ ಕಾನೂನು ಬಾಹಿರ ಕೃತ್ಯಗಳು ನಡೆಯುವುದನ್ನು ಇಲಾಖೆ ಗುರುತಿಸಿದೆ. ವಿಶೇಷವಾಗಿ ಮಕ್ಕಳಿಗೆ ನಿಷೇಧಿತ ಮತ್ತು ಬರುವ ಮದ್ದು ನೀಡಿ ಭಿಕ್ಷಾಟನೆಗೆ ಬಳಸಿಕೊಳ್ಳುವುದು, ಅಂಗವಿಕಲರನ್ನಾಗಿ ಮಾಡಿ ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿರುವುದು ಕಂಡು ಬಂದಿದ್ದು, ಇದನ್ನು ಸಂಪೂರ್ಣವಾಗಿ ನಿಯಂತ್ರಿಸಲು ಭಿಕ್ಷಾಟನೆ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲಾಗುವುದು ಎಂದರು.

ಭಿಕ್ಷಾಟನೆಯಲ್ಲಿ ತೊಡಗಿದವರನ್ನು ರಕ್ಷಿಸಿ, ಅವರಿಗೆ ಪುನರ್ವಸತಿ ಕಲ್ಪಿಸುವ ಸಂಬಂಧ ಹಾಗೂ ಈ ಚಟುವಟಿಕೆಯಲ್ಲಿ ಗೃಹ ಇಲಾಖೆ, ಮಹಿಳಾ ಮತ್ತು ಮಕ್ಕಳ ಇಲಾಖೆ, ಕಾರ್ಮಿಕ ಇಲಾಖೆಗಳ ಪಾತ್ರ ಹಾಗೂ ಸಹಕಾರದ ಬಗ್ಗೆ ಸಭೆಯಲ್ಲಿ ವಿಸ್ತೃತ ಚರ್ಚೆ ( 4ನೇ ಪುಟಕ್ಕೆ)

## ಹಾಲು, ಮೊಸರಿನ ದರ ಹೆಚ್ಚಳವಿಲ್ಲ



ಬೆಂಗಳೂರು, ಜು. 18 - ಹಾಲು, ಮೊಸರಿನ ದರ ಹೆಚ್ಚಳವಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ.

ರಾಷ್ಟ್ರಪತಿ ಅಭ್ಯರ್ಥಿ ದ್ರೌಪದಿ ಮುರ್ಮು ಅವರಿಗೆ ಮತ ಚಲಾಯಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬ್ರಾಂಡೆಡ್ ಹಾಗೂ ಪ್ಯಾಕೇಜ್ಡ್ ಹಾಲು, ಮೊಸರು ಮಾರುವವವರಿಗೆ ಮಾತ್ರ 5% ಜಿ.ಎಸ್.ಟಿ ಹಾಕಲಾಗಿದೆ. ಇದನ್ನು ಅವರು ಮರುಪಾವತಿ ಮಾಡಲು ಅವಕಾಶವಿದೆ ಎಂದರು. ಈಗಿನ ದರಕ್ಕಿಂತ ಹೆಚ್ಚಾಗಲು (2ನೇ ಪುಟಕ್ಕೆ)

## ಛತ್ತೀಸ್‌ಘಡದಲ್ಲಿ ಸರ್ಕಾರದಿಂದ ಗೋ ಮೂತ್ರ ಖರೀದಿ

ರಾಯಪುರ, ಜು. 18 – ಬರುವ ಜುಲೈ 28ರಿಂದ ಛತ್ತೀಸ್‌ಘಡದ ಕಾಂಗ್ರೆಸ್ ಸರ್ಕಾರ, ಗೋ ಮೂತ್ರವನ್ನು ಲೀಟರ್‌ಗೆ 4 ರೂ.ಗಳಂತೆ ಖರೀದಿ ಮಾಡಲಿದೆ.

ಗೋಧನ ನ್ಯಾಯ ಯೋಜನೆ ಮೂಲಕ ಗೋ ಮೂತ್ರದ ಖರೀದಿ ಕೈಗೊಳ್ಳಲಾಗುವುದು. ಈ ಯೋಜನೆಯಡಿ (4ನೇ ಪುಟಕ್ಕೆ)

## ಹರಿಹರ : ಜಲಸಿರಿ ಸಂಪರ್ಕ ಕಾಮಗಾರಿ ಬೇಗ ಸರಿಪಡಿಸಿ



**ಅಧಿಕಾರಿಗಳಿಗೆ ಪೌರಾಯುಕ್ತ ಐಗೂರು ಬಸವರಾಜ್ ಸೂಚನೆ**

ಹರಿಹರ, ಜು. 18- ನಗರದ 31 ವಾರ್ಡ್‌ಗಳ ಜಲಸಿರಿ ಸಂಪರ್ಕದ ನಲ್ಲಿಗಳನ್ನು ಸರಿಪಡಿಸುವಂತೆ ಜಲಸಿರಿ ಅಧಿಕಾರಿಗಳಿಗೆ ಪೌರಾಯುಕ್ತ ಐಗೂರು ಬಸವರಾಜ್ ಸೂಚಿಸಿದರು.

ನಗರದ 8 ನೇ ವಾರ್ಡಿನ ತೆಗ್ಗಿನಕೇರಿಗೆ ಭೇಟಿ ನೀಡಿದ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸ್ಥಳೀಯ ನಿವಾಸಿಗಳು ಜಲಸಿರಿ ಯೋಜನೆಯ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸುವಂತೆ ಮನವಿ ನೀಡಿದ್ದಾರೆ ಎಂದರು.

8-10 ಮನೆಗಳ ನೀರಿನ ಸಂಪರ್ಕ ಸರಿಯಾಗಿ ಅಳವಡಿಕೆಯಾಗಿಲ್ಲ. ತಕ್ಷಣ ಇವುಗಳನ್ನು ಸರಿಪಡಿಸಬೇಕು ಮತ್ತು ನಗರದ ಉಳಿದ 31 ವಾರ್ಡ್‌ಗಳಲ್ಲಿ ಒಂದು ತಿಂಗಳ ಅವಧಿಯಲ್ಲಿ ಎಲ್ಲಾ ಜಲಸಿರಿ ಸಂಪರ್ಕಗಳನ್ನು ಸರಿಪಡಿಸಬೇಕು ಎಂದು ಹೇಳಿದರು.

ಈ ಭಾಗವನ್ನೂ ಸಹ ಪ್ರವಾಹ ಪೀಡಿತ ಪ್ರದೇಶವೆಂದು ಸೇರ್ಪಡೆಗೊಳಿಸಲು ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಅವರ ಗಮನಕ್ಕೆ ತರಲಾಗುವುದು ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ನದಿಯ ದಡದಲ್ಲಿ ಮೆಟ್ಟಿಲುಗಳ ನಿರ್ಮಾಣಕ್ಕೆ ನಗರೋತ್ಥಾನ ಅನುದಾನದಲ್ಲಿ ಈಗಾಗಲೇ ಸುಮಾರು 5 ಲಕ್ಷ ರೂಪಾಯಿ ಮೀಸಲಿರಿಸಲಾಗಿದೆ. ಶೀಘ್ರವಾಗಿ ಟೆಂಡರ್ ಪ್ರಕ್ರಿಯೆ ನಡೆಸಿ ಕಾಮಗಾರಿ ಆರಂಭಿಸಲಾಗುವುದು ಎಂದು ಸ್ಥಳೀಯ ನಿವಾಸಿಗಳಿಗೆ ಭರವಸೆ ನೀಡಿದರು. ಜಲಸಿರಿ ಕಾರ್ಯಪಾಲಕ (2 ನೇ ಪುಟಕ್ಕೆ)

## ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾಗಿ ಮಹಾಂತೇಶ್ ಬೀಳಗಿ



ಬೆಂಗಳೂರು, ಜು. 18 - ರಾಜ್ಯ ಸರ್ಕಾರ 7 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಮಹಾಂತೇಶ್ ಬೀಳಗಿ ಅವರನ್ನು ನೇಮಿಸಲಾಗಿದೆ. ಅವರು ಈವರೆಗೂ ದಾವಣಗೆರೆ ಜಿಲ್ಲಾಧಿಕಾರಿಯಾಗಿದ್ದರು.

ಬಿಬಿಎಂಪಿಯ ಹಣಕಾಸು ವಿಭಾಗದ ವಿಶೇಷ ಕಮೀಷನರ್ ಆಗಿದ್ದ ತುಳಸಿ ಮದ್ದಿನೇನಿ ಅವರನ್ನು ಹಿಂದುಳಿದ ವರ್ಗಗಳ ಇಲಾಖೆಯ ಕಾರ್ಯದರ್ಶಿಯಾಗಿ ನೇಮಿಸಿದೆ. ಈ ಹುದ್ದೆಯಲ್ಲಿದ್ದ ಮೇಜರ್ ಮಣಿವಣ್ಣನ್ ಪಿ ಅವರನ್ನು ವರ್ಗಾವಣೆ ಮಾಡಿದೆ.

ಬೆಸ್ಕಾಂ ಎಂಡಿಯಾಗಿದ್ದ ರಾಜೇಂದ್ರ ಚೋಳನ್ ಅವರನ್ನು ವರ್ಗಾವಣೆ ಮಾಡಿ, ಬೆಂಗಳೂರು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಿದೆ.

## ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ ಹೇರಿಕೆ

**ಕರಾಳ ಕ್ರಮ ಎಂದು ಆಕ್ಷೇಪಿಸಿರುವ ಪ್ರತಿಪಕ್ಷಗಳು**

ಕೊಲಂಬೊ, ಜು. 18 – ಹಂಗಾಮಿ ಅಧ್ಯಕ್ಷ ರಾಣಿಲ್ ವಿಕ್ರಮ ಸಿಂಘೆ ಅವರು ಶ್ರೀಲಂಕಾದ ಮೇಲೆ ತುರ್ತು ಪರಿಸ್ಥಿತಿ ಹೇರಿರುವುದಾಗಿ ಘೋಷಿಸಿದ್ದಾರೆ. ಇದರಿಂದಾಗಿ ಬುಧವಾರ ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೆ ಮುಂಚೆ ಅವರಿಗೆ ಹೆಚ್ಚಿನ ಅಧಿಕಾರ ದೊರೆತಂತಾಗಿದೆ.

ವಿಕ್ರಮಸಿಂಘೆ ಕ್ರಮ ಪ್ರಜಾ ಪ್ರಭುತ್ವಕ್ಕೆ ವಿರುದ್ಧವಾದ ಕರಾಳ ಕ್ರಮ ಎಂದು ಆಕ್ಷೇಪಿಸಿರುವ ಪ್ರತಿಪಕ್ಷಗಳ ನಾಯಕರು, ಅವರ ರಾಜೀನಾಮೆಗೆ ಒತ್ತಾಯಿಸಿದ್ದಾರೆ.

ಕಳೆದ ಶುಕ್ರವಾರ ವಿಕ್ರಮಸಿಂಘೆ ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು. ನಂತರ ಆದೇಶವೊಂದನ್ನು ಹೊರಡಿಸಿರುವ ಸರ್ಕಾರ, ತುರ್ತು ಪರಿಸ್ಥಿತಿ ಹೇರಿರುವುದಾಗಿ ತಿಳಿಸಿದೆ.

ಸಾರ್ವಜನಿಕರ ರಕ್ಷಣೆ, ಕಾನೂನು ಸುವ್ಯವಸ್ಥೆ ಹಾಗೂ ಸರಕು ಸೇವೆಗಳ ಪೂರೈಕೆಗಾಗಿ ತುರ್ತು ಪರಿಸ್ಥಿತಿಯ ಅಗತ್ಯವಿದೆ ಎಂದು ವಿಕ್ರಮಸಿಂಘೆ ಹೇಳಿದ್ದಾರೆ.

225 ಸದಸ್ಯರ ಸಂಸತ್ತು ಜುಲೈ 20ರಂದು ಸಭೆ ಸೇರಿ ನೂತನ ಅಧ್ಯಕ್ಷರ ಆಯ್ಕೆ ನಡೆಸಲಿದೆ. ಗೊಟಬಯ ರಾಜಪಕ್ಷೆ ಅವರು ದೇಶ ಬಿಟ್ಟು ಹೋದ ನಂತರ, ಅಧ್ಯಕ್ಷ ಸ್ಥಾನಕ್ಕೆ ಸಿಂಗಪುರದಿಂದ ರಾಜೀನಾಮೆ ಸಲ್ಲಿಸಿದ್ದಾರೆ. ಆಗಿನಿಂದ ಈ ಹುದ್ದೆ ಖಾಲಿ ಇದೆ. ತುರ್ತು ಪರಿಸ್ಥಿತಿ ಹೇರಿಕೆಯಿಂದಾಗಿ ಭದ್ರತಾ ಪಡೆಗಳಿಗೆ ಜನರ ನಿವಾಸಗಳಿಗೆ ನುಗ್ಗಿ ಶೋಧಿಸುವ, ಬಂಧಿಸುವ ಹಾಗೂ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವ ಅಧಿಕಾರ ದೊರೆತಿದೆ.

ವಿಕ್ರಮಸಿಂಘೆ ಸೇರಿದಂತೆ ನಾಲ್ವರು ಅಧ್ಯಕ್ಷ ಸ್ಥಾನದ ಸ್ಪರ್ಧೆಯಲ್ಲಿದ್ದಾರೆ. ಅಧ್ಯಕ್ಷರಾಗಿ ಆಯ್ಕೆಯಾಗುವವರು ನವೆಂಬರ್ 2024ರವರೆಗೆ ಅಧಿಕಾರದಲ್ಲಿ ಇರಲಿದ್ದಾರೆ.

ಆಡಳಿತಾರೂಢ ಎಸ್.ಎಲ್.ಪಿ.ಪಿ. ಪಕ್ಷ ವಿಕ್ರಮಸಿಂಘೆ ಅವರನ್ನು ಬೆಂಬಲಿಸುವುದಾಗಿ ಈಗಾಗಲೇ ತಿಳಿಸಿದೆ. 2020ರಲ್ಲಿ ನಡೆದ ಚುನಾವಣೆಯಲ್ಲಿ ವಿಕ್ರಮಸಿಂಘೆ ಅವರ ಯು.ಎನ್.ಪಿ. ಪಕ್ಷ ದೂಳೀಪಟವಾಗಿತ್ತು. ಪ್ರಸಕ್ತ ವಿಕ್ರಮಸಿಂಘೆ ಅವರೊಬ್ಬರೇ ಆ ಪಕ್ಷದಿಂದ ಶಾಸನಸಭೆಗೆ ಆಯ್ಕೆಯಾಗಿದ್ದಾರೆ.

## ಬೂಸ್ಟರ್ ಡೋಸ್ ಲಸಿಕಾ ಕಾರ್ಯಕ್ರಮಕ್ಕೆ ಡಿಸಿ ಚಾಲನೆ



ದಾವಣಗೆರೆ, ಜು. 18- ಇದೇ 15 ರಿಂದ ಸೆ.30 ರವರೆಗೆ 75 ದಿನಗಳ ಕಾಲ 18 ವರ್ಷ ಮೇಲ್ಪಟ್ಟ ಫಲಾನುಭವಿಗಳಿಗೆ ಉಚಿತ ಬೂಸ್ಟರ್ ಡೋಸ್ ಲಸಿಕೆ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಶಿವಾನಂದ್ ಕಪಾಸಿ ಚಾಲನೆ ನೀಡಿದರು.

ನಗರದ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ದಾವಣಗೆರೆ ಇವರ ವತಿಯಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಡಾ. ಚನ್ನಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ, ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಷಣ್ಮುಖಪ್ಪ, ಆರ್‌ಸಿಹೆಚ್ ಡಾ. ಮೀನಾಕ್ಷಿ, ಡಾ. ರೇಣುಕಾರಾಧ್ಯ, ಡಾ. ನಟರಾಜ್, ಡಾ.ಗಂಗಾಧರ್, ಡಾ. ಮುರಳೀಧರ್, ಡಾ. ಮಂಜುನಾಥ ಪಾಟೀಲ್, ಡಾ. ಸುರೇಶ್ ಬಾರ್ಕಿ ಸೇರಿದಂತೆ ಇತರರು ಉಪಸ್ಥಿತರಿದ್ದರು.


## ಶಾಮನೂರು ಶೇಖರಪ್ಪ ನಿಧನ



ದಾವಣಗೆರೆ ತಾಲ್ಲೂಕು ಶಾಮನೂರು ಗ್ರಾಮದ ವಾಸಿ
ಕಂದಾಯ ಇಲಾಖೆಯ ನಿವೃತ್ತ ಗ್ರಾಮ ಸಹಾಯಕರಾದ

**ಶಾಮನೂರು ಶೇಖರಪ್ಪ**

ಅವರು, ದಿನಾಂಕ 17.7.2022ರಂದು ಭಾನುವಾರ ರಾತ್ರಿ 1:55ಕ್ಕೆ ನಿಧನರಾಗಿದ್ದಾರೆ. ಮೃತರಿಗೆ 67 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.7.2022ರಂದು ಭಾನುವಾರ ಮಧ್ಯಾಹ್ನ 1.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ಇಂತಿ ದುಃಖತಪ್ತ ಕುಟುಂಬ ವರ್ಗ**

## ಪಾಳ್ಯ - ಕೆ.ಎನ್.ಹಳ್ಳಿಯ ಹದಗೆಟ್ಟ ರಸ್ತೆಯಲ್ಲಿ ನಾಟಿ



### ಜನರಿಂದ ಪ್ರತಿಭಟನೆ

ಮಲೇಬೆನ್ನೂರು,ಜು.18- ರಸ್ತೆ ದುರಸ್ತಿ ಮಾಡದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ವರ್ತನೆಗೆ ಬೇಸತ್ತು ಸಹನೆ ಮೀರಿದ ಪಾಳ್ಯ ಗ್ರಾಮದ ಮಹಿಳಾ ಒಕ್ಕೂಟದ ಪದಾಧಿಕಾರಿಗಳು ಶನಿವಾರ ರಸ್ತೆಗೆ ಆಗಮಿಸಿ ಗುಂಡಿಗಳಲ್ಲಿ ಭತ್ತದ ಸಸಿ ನಾಟಿ ಮಾಡುವ ಮೂಲಕ ಪ್ರತಿಭಟನೆ ಮಾಡಿ ಆಕ್ರೋಶ ವ್ಯಕ್ತಪಡಿಸಿದರು. ಸೈಕಲ್ ಸಹಿತ ವಿದ್ಯಾರ್ಥಿಗಳು ಶಾಲೆಗೆ ರಜಾ ಹಾಕಿ ಆಗಮಿಸಿ ಮಹಿಳೆಯರಿಗೆ ಬೆಂಬಲ ನೀಡಿದರು.

ಕಡರನಾಯ್ಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಾಳ್ಯ ಗ್ರಾಮದ ಸಂಜೀವಿನಿ ಮತ್ತು ಸ್ವ - ಸಹಾಯ ಸಂಘಗಳ ಒಕ್ಕೂಟದ ನೂರಾರು ಮಹಿಳೆಯರು ಬೆಳಗ್ಗೆ ಕರಿಯಮ್ಮ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಒಂದು ಕಿಮೀ ನಡೆದು ರಸ್ತೆಯ 300ಕ್ಕೂ ಹೆಚ್ಚು ಗುಂಡಿಗಳನ್ನು ವೀಕ್ಷಿಸಿದರು.

ಹಲವು ಗುಂಡಿಗಳಲ್ಲಿ ನಡೆದಾಡಿ ಟ್ರ್ಯಾಕ್ಟರ್‌ನಿಂದ ರೊಳ್ಳಿ ಹೊಡೆದು, ನಾಟಿ ಮಾಡಿದರು. 25 ವರ್ಷಗಳ ಹಿಂದೆ ಡಾಂಬರ್ ಕಂಡ ಈ ರಸ್ತೆಯ ಮೇಲೆ ಎಲ್ಲಾ ಶಾಸಕರು ಬಂದು ಹೋದರು. ನಂತರ ಮರಳು ಮಾಫಿಯಾದ ಲಾರಿಗಳು ಸಂಚಾರ ಮಾಡಿ ರಸ್ತೆ ಹದಗೆಟ್ಟಿತು. ಮರಳು ಲಾರಿಗಳು ಓಡಾಟ ನಿಲ್ಲಲ್ಲ ಎಂದು ಜನಪ್ರತಿನಿಧಿಗಳು ಹೇಳಿ ಕೈ ತೊಳೆದುಕೊಂಡರು. ನಿಧಾನಕ್ಕೆ 25 ವರ್ಷಗಳೇ ಕಳೆದುಹೋದವು ಎಂದು ಗ್ರಾ. ಪಂ ಸದಸ್ಯೆ ರೇಖಾ ಆರೋಪಿಸಿದರು.

ಇತ್ತ ಶಾಲೆಗೆ ತೆರಳುವ ಮಕ್ಕಳು ರಸ್ತೆಯ ಗುಂಡಿಗೆ ಬಿದ್ದು ಮನೆಗೆ ವಾಪಸ್ ತೆರಳಿದರು. ಉಪಾಧ್ಯಾಯರು ಆಗಮಿಸಲು ಹಿಂದೇಟು ಹಾಕುವ ಸ್ಥಿತಿ ಇದೆ. ಈ ಗ್ರಾಮಕ್ಕೆ ಹೆಣ್ಣು ಕೊಡದ ಸ್ಥಿತಿ ಇದೆ. ರಸ್ತೆ ದುರಸ್ತಿ ಪಡಿಸಿ, ಆ ನಂತರ ಹೆಣ್ಣು ಕೊಡಲು ಬರುತ್ತೇವೆ ಎಂದು ಹೇಳುವಂತಾಗಿದೆ ಎಂದು ಗ್ರಾಮದ ಹನುಮಗೌಡ ಹೇಳಿದರು.

ವಯೋವೃದ್ಧರಿಗೆ ಅನಾರೋಗ್ಯ ಉಂಟಾದರೆ ಆಸ್ಪತ್ರೆಗೆ ಕರದೊಯ್ಯಲು ಈ ರಸ್ತೆಯಲ್ಲಿ ಹರಸಾಹಸ ಪಡಬೇಕು. ವಾರದಲ್ಲಿ ರಸ್ತೆ ಸರಿಪಡಿಸದಿದ್ದಲ್ಲಿ ಬರುವ ತಾ.ಪಂ, ಜಿ.ಪಂ ಮತ್ತು ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸಬೇಕಾಗುತ್ತದೆ ಎಂದು ಗ್ರಾ.ಪಂ ಮಾಜಿ ಅಧ್ಯಕ್ಷ ಭರಮಗೌಡ ಪಾಟೀಲ್ ಎಚ್ಚರಿಸಿದರು.

ಮಹಿಳಾ ಸಂಘಗಳ ರೂಪ, ನೇತ್ರಾವತಿ, ಭಾಗ್ಯ, ಭಾರತಿ, ಸಾಕಮ್ಮ, ಶಶಿಕಲಾ, ಮಂಜಮ್ಮ, ಕರಿಬಸಮ್ಮ, ಜಯಮ್ಮ, ಸರೋಜಮ್ಮ, ಇಂದ್ರಮ್ಮ, ದೇವರಾಜು, ನಂದೀಶ್, ಪರಶುರಾಮ್, ಕೆಂಚವೀರಪ್ಪ, ಚಂದ್ರು, ಬಸವನಗೌಡ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಆಶೀರ್ವಾದ ಮಾಡುವ ಸ್ವಾಮಿಗಳಿಂದ ಶಾಪ ಹಾಕುವ ಸ್ಥಿತಿ ನಿರ್ಮಾಣವಾಗಬಾರದು

### ಬೇಡ ಜಂಗಮ ಸಮುದಾಯ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಬೆಂಗಳೂರು ಚಲೋ



ಸಾಸ್ವೆಹಳ್ಳಿ, ಜು. 18 - ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಬಿ.ಡಿ.ಹಿರೇಮಠ ಅವರು 18 ದಿನಗಳಿಂದ ನಡೆಸುತ್ತಿರುವ ಸತ್ಯ ಪ್ರತಿಪಾದನ ಸತ್ಯಾಗ್ರಹಕ್ಕೆ, ಅವಳಿ ತಾಲ್ಲೂಕಿನ ಬೇಡ ಜಂಗಮ ಸಮಾಜದ ಬಂಧುಗಳು ಇದೇ ದಿನಾಂಕ 24 ರಿಂದ ಭಾಗವಹಿಸುವ ಮೂಲಕ ಬೆಂಬಲ ನೀಡಲಿದ್ದೇವೆ ಎಂದು ನ್ಯಾಮತಿ ಮತ್ತು ಹೊನ್ನಾಳಿ ಬೇಡ ಜಂಗಮ ಸಮಾಜದ ಹಿರಿಯ ಮುಖಂಡ ಎಚ್.ಎಂ. ಗಂಗಾಧರಯ್ಯ ಹೇಳಿದರು.

ಹೋಬಳಿಯ ಕುಳಗಟ್ಟೆಯ ವೀರಶೈವ ಸಮುದಾಯ ಭವನದಲ್ಲಿ ನಿನ್ನೆ ಆಯೋಜಿಸಿದ್ದ ಬೇಡ ಜಂಗಮ ಹೋರಾಟದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಸಂವಿಧಾನ ಬದ್ಧವಾಗಿರುವ ಹಕ್ಕು ನಮ್ಮದು. ಈ ಹೋರಾಟದಲ್ಲಿ ಎಲ್ಲರೂ ಭಾಗವಹಿಸುವ ಮೂಲಕ ಬೆಂಬಲಿಸಬೇಕು. ಇದೇ ದಿನಾಂಕ 23 ರ ಶನಿವಾರ ಬೆಂಗಳೂರಿಗೆ ಸ್ವಂತ ಖರ್ಚಿನಲ್ಲಿ ಬರಬೇಕು ಎಂದು ಸೂಚಿಸಿದರು.

ಸಮಾಜದ ಮುಖಂಡ ಎಂ.ಎಸ್.ಶಾಸ್ತ್ರಿ ಹೊಳೆಮಠ ಮಾತನಾಡಿ, ನಮ್ಮ ಸಮುದಾಯಕ್ಕೆ ಬೇಡ ಜಂಗಮ ಜಾತಿ ಪ್ರಮಾಣ ಪತ್ರ ನೀಡಬೇಕು. ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರು ಜಂಗಮರ ತಾಳ್ಮೆ ಪರೀಕ್ಷೆ ಮಾಡಬಾರದು. ಆಶೀರ್ವಾದ ಮಾಡುವ ಸ್ವಾಮಿಗಳಿಂದ ಶಾಪ ಹಾಕುವ ಸ್ಥಿತಿ ನಿರ್ಮಾಣವಾಗಬಾರದು. ಪ್ರತಿ ಕ್ಷೇತ್ರದಲ್ಲಿ ಸೋಲಿಸುವ ಮತ್ತು ಗೆಲ್ಲಿಸುವ ಶಕ್ತಿ ನಮ್ಮ ಸಮುದಾಯಕ್ಕೆ ಇದೆ. ಅದಷ್ಟು ಬೇಗ ಸಂವಿಧಾನ ಪಾಲನೆಯಾಗಲಿ ಎಂದರು.

ಸಭೆಯಲ್ಲಿ ಕುಳಗಟ್ಟೆ ಗ್ರಾಮದ ಮುರುಗೇಶಯ್ಯ, ಕೆ.ಎಂ.ಬಸವರಾಜಯ್ಯ, ಪರಮೇಶ್ವರಯ್ಯ, ಹಾಲಯ್ಯ ಬೈರನಹಳ್ಳಿ ಪಂಚಾಕ್ಷರಯ್ಯ, ರಾಂಪುರದ ಆರ್.ಎಂ. ಪ್ರಕಾಶಯ್ಯ, ಹನುಮನಹಳ್ಳಿ ಲೋಕಯ್ಯ, ತರಗನಹಳ್ಳಿ ದಯಾನಂದ ಸ್ವಾಮಿ ಮಾತನಾಡಿದರು.

## ಹೆಚ್ಚು ವಹಿವಾಟು ನಡೆಸಿದ ಹೊನ್ನಾಳಿ ಟಿಎಪಿಸಿಎಂಎಸ್‌ಗೆ ದ್ವಿತೀಯ ಸ್ಥಾನ



ಹೊನ್ನಾಳಿ, ಜು. 18- ಇಲ್ಲಿನ ಟಿಎಪಿಸಿಎಂಎಸ್ 2021-22ನೇ ಸಾಲಿನಲ್ಲಿ ನಿಗದಿಗಿಂತ ಅತಿ ಹೆಚ್ಚು ರಸಗೊಬ್ಬರದ ವ್ಯಾಪಾರ ವಹಿವಾಟು ನಡೆಸಿದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಯಿಂದ ರಾಜ್ಯ ಮಟ್ಟದ ದ್ವಿತೀಯ ಸ್ಥಾನದ ಗೌರವ ಲಭಿಸಿದೆ.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಯ ರಾಜ್ಯಾಧ್ಯಕ್ಷ ರಾಜೇಂದ್ರ ಕುಮಾರ್, ಮಾಜಿ ಶಾಸಕರು ಹಾಗೂ ಮಹಾ ಮಂಡಳದ ರಾಜ್ಯ ನಿರ್ದೇಶಕ ಡಿ.ಜಿ. ಶಾಂತನಗೌಡರ ಸಮ್ಮುಖದಲ್ಲಿ ಬೆಂಗಳೂರಿನಲ್ಲಿ ಮೊನ್ನೆ ನಡೆದ ರಾಜ್ಯ ಮಟ್ಟದ ಮಹಾಮಂಡಳದ ಸಭೆಯಲ್ಲಿ ಹೊನ್ನಾಳಿ ಟಿಎಪಿಸಿಎಂಎಸ್ ಅಧ್ಯಕ್ಷ ಕೊಡಚಗೊಂಡನಹಳ್ಳಿ ಡಿಬಿ ಯೋಗೇಶ್, ಹೊನ್ನಾಳಿ ಟಿಎಪಿಸಿಎಂಎಸ್ ಕಾರ್ಯದರ್ಶಿ ಮುರುಗೇಶ್ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಹೊನ್ನಾಳಿ ಟಿಎಪಿಸಿಎಂಎಸ್ ಕಾರ್ಯದರ್ಶಿ ಮುರುಗೇಶ್ ಅವರು ಮಾತನಾಡಿ, ನಮ್ಮ ಸಮಿತಿಯ 600 ಮೆಟ್ರಿಕ್ ಟನ್‌ಗಿಂತಲೂ ಹೆಚ್ಚು ರಸಗೊಬ್ಬರದ ವ್ಯಾಪಾರ, ವಹಿವಾಟು ನಡೆಸಿದ್ದರಿಂದಾಗಿ ಈ ಪ್ರಶಸ್ತಿ ಲಭಿಸಲು ಸಾಧ್ಯವಾಗಿದೆ ಎಂದು ತಿಳಿಸಿದರು. ಸಂಘದ ಅಧ್ಯಕ್ಷರು ಹಾಗೂ ಹಲವು ನಿರ್ದೇಶಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಯುವಕನಿಗಾಗಿ ಮುಂದುವರೆದ ಶೋಧ



ಮಲೇಬೆನ್ನೂರು, ಜು.18- ಉಕ್ಕಡಗಾತ್ರಿ ಬಳಿ ತುಂಗಭದ್ರಾ ನದಿಯಲ್ಲಿ ಶನಿವಾರ ಬೆಳಿಗ್ಗೆ ಸ್ನಾನ ಮಾಡುವಾಗ ನೀರಿನ ಹರಿವಿನಲ್ಲಿ ಕೊಚ್ಚಿ ಹೋಗಿರುವ ಪರಮೇಶ್ವರ ನಾಯ್ಕ ಎಂಬ ಯುವಕನಿಗಾಗಿ ಸೋಮವಾರವೂ ಶೋಧ ಕಾರ್ಯಾಚರಣೆ ಮುಂದುವರೆದಿತ್ತು. ಅಗ್ನಿ ಶಾಮಕ ದಳ ಹಾಗೂ ಮುಳುಗು ತಜ್ಞರ ತಂಡ ತುಂಗಭದ್ರಾ ನದಿಯಲ್ಲಿ ಬೋಟ್ ಮೂಲಕ ಯುವಕನಿಗಾಗಿ 3 ದಿನಗಳಿಂದ ನಿರಂತರ ಹುಡುಕಾಟ ನಡೆಸುತ್ತಿದ್ದರೂ ಇದುವರೆಗೂ ಪತ್ತೆಯಾಗಿಲ್ಲ ಎಂದು ಮಲೇಬೆನ್ನೂರು ಪಿಎಸ್ಐ ರವಿಕುಮಾರ್ ತಿಳಿಸಿದ್ದಾರೆ.

ಸೋಮವಾರ ಉಪತಹಶೀಲ್ದಾರ್ ಆರ್.ರವಿ ಅವರೂ ಕೂಡಾ ಶೋಧ ಕಾರ್ಯಾಚರಣೆಯಲ್ಲಿ ಒಂದು ಸುತ್ತು ಹೋಗಿ ಬಂದರು. ಕರಿಬಸವೇಶ್ವರ ಅಜ್ಜಯ್ಯ ದೇವಸ್ಥಾನದ ಕಾರ್ಯದರ್ಶಿ ಸುರೇಶ್ ಕೂಡಾ ಭಾಗಿಯಾಗಿದ್ದರು.

## ಅಮೃತ ಮಹೋತ್ಸವಕ್ಕೆ 10 ಲಕ್ಷ ಜನ

**(1ನೇ ಪುಟದಿಂದ)** ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಶಿವಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾ ಬಾಯಿ ಮಾಲತೇಶ್, ಪಾಲಿಕೆ ಪ್ರತಿಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್, ಮುಖಂಡರಾದ ಎ. ನಾಗರಾಜ್, ಮಾಗಾನಹಳ್ಳಿ ಪರಶುರಾಮ್, ಕೆ.ಎಸ್. ಬಸವಂತಪ್ಪ, ಸುಷ್ಮಾ ಪಾಟೀಲ್, ಬಿ.ಹೆಚ್. ವೀರಭದ್ರಪ್ಪ, ದೊಡ್ಡಪ್ಪ, ತಿಪ್ಪಣ್ಣ ಕುಂದುವಾಡ, ಸೀಮೆಎಣ್ಣೆ ಮಲ್ಲೇಶ್, ಹೆಚ್.ಎನ್. ಚಂದ್ರಪ್ಪ, ನಾಗೇಂದ್ರಪ್ಪ, ಬಿಸಲೇರಿ ಈರಣ್ಣ ಮತ್ತಿತರರು ಉಪಸ್ಥಿತರಿದ್ದರು.

## ಕನ್ನಡದ ಜತೆಗೆ ಇತರೆ ಭಾಷೆಗಳ ಮೇಲೆ ಹಿಡಿತ ಸಾಧಿಸುವ ಪ್ರೌಢಿಮೆ ಬೆಳೆಸಿಕೊಳ್ಳಬೇಕು



ಹರಪನಹಳ್ಳಿ, ಜು.18- ತಾಲ್ಲೂಕಿನಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗುವ ಮೂಲಕ ನಿರುದ್ಯೋಗ ನಿವಾರಿಸುವ ಔದ್ಯೋಗಿಕ ಅವಕಾಶಗಳು ವಿಫುಲವಾಗಿ ಸೃಷ್ಠಿಯಾದಾಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಬೀಚಿ ವಂಶಸ್ಥ ಸುಮಂತ್ ರಾಯಸಂ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಮೈದೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಕ್ರೀಡಾ ಸಾಮಗ್ರಿ ಹಾಗೂ ಸಮವಸ್ತ್ರ ವಿತರಿಸಿ ಅವರು ಮಾತನಾಡಿದರು.

ಬಡತನ ಎಂಬ ಸಾಮಾಜಿಕ ಶಾಪ ನಮ್ಮ ಬದುಕನ್ನು ಇನ್ನೂ ಸುತ್ತಿಕೊಂಡಿದೆ. ಆದರೆ, ಅಂತಹ ಶಾಪದಿಂದ ನಾವು ಹೊರಬರಬೇಕಾದರೆ ಮೊದಲು ಸುಶಿಕ್ಷಿತರಾಗಬೇಕು. ಜತೆಗೆ, ಸುಶಿಕ್ಷಿತ ದುಡಿಯುವ ಯುವ ಕೈಗಳಿಗೆ ಔದ್ಯೋಗಿಕ ಅವಕಾಶಗಳನ್ನು ಕಲ್ಪಿಸುವ ಕೈಗಾರಿಕೆಗಳು ನಮ್ಮಲ್ಲಿ ಬೇರೂರಬೇಕು. ಆಗ, ಆ ಸಾಮಾಜಿಕ ಶಾಪದಿಂದ ನಾವು ಬಿಡುಗಡೆ ಹೊಂದಲು ಸಾಧ್ಯವೇ ಹೊರತು, ನಮ್ಮನ್ನು ಯಾರೋ ಬಂದು ಉದ್ಧರಿಸುತ್ತಾರೆ. ನಮ್ಮ ಬದುಕನ್ನೇ ಸಂಪೂರ್ಣ ಬದಲಾಯಿಸುತ್ತಾರೆ ಎಂಬುದು ಭ್ರಮೆ ಅಷ್ಟೇ. ಹೀಗಾಗಿ, ಶಾಪಗ್ರಸ್ಥ ಬದುಕಿಗೆ ವಿದಾಯ ಹೇಳುವ ನಾಯಕನನ್ನು ನಾವು ಆಯ್ಕೆ ಮಾಡಿಕೊಳ್ಳಬೇಕಿದೆ. ಇಂತಹ ಅನೇಕ ಕನಸುಗಳು ನನ್ನಲ್ಲಿ ಮೇಳೈಸಿವೆ. ಹರಪನಹಳ್ಳಿಯಲ್ಲಿ ಜನಿಸಿದ ನಾನು ಈಗ ಬೆಂಗಳೂರಿನ ಮಹಾನಗರದಲ್ಲಿ ಪ್ರತಿಷ್ಠಿತ ಕಂಪನಿ ಸ್ಥಾಪಿಸುವ ಮೂಲಕ ನೂರಾರು ಯುವ ಸಮೂಹಕ್ಕೆ ಉದ್ಯೋಗ ನೀಡಿದ್ದೇನೆ ಎಂದು ಹೇಳಿದರು.

ಯುವ ಜನಾಂಗದ ಶಕ್ತಿ ಪೋಲಾಗಬಾರದು. ಯುವಕರು ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಕನ್ನಡದ ಜತೆಗೆ ಇಂಗ್ಲಿಷ್ ಸೇರಿದಂತೆ, ಇತರೆ ಭಾಷೆಗಳ ಮೇಲೆ ಹಿಡಿತ ಸಾಧಿಸುವ ಪ್ರೌಢಿಮೆ ಬೆಳೆಸಿಕೊಳ್ಳಬೇಕು. ಹಾಗಾದಾಗ, ನಾವು ಸಹಜವಾಗಿಯೇ ಬಡತನವನ್ನು ಮೆಟ್ಟಿ ನಿಲ್ಲುವ ತಾಕತ್ತನ್ನು ಹೊಂದುತ್ತೇವೆ ಎಂದು ಯುವ ಜನಾಂಗಕಕ್ಕೆ ಕಿವಿಮಾತು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ಜಗದೀಶ್ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ಪಾಲಾಕ್ಷಪ್ಪ, ಕರವೇ ಕೊಟ್ರೇಶ್, ನಿಂಗಪ್ಪ, ಎ.ಕೆ.ದೇವರಾಜ್, ಪರಶುರಾಮ, ವೀರಣ್ಣ, ಸಿದ್ದೇಶ್, ಮೂರ್ತಿ, ಮಹೇಂದ್ರ, ನಿಂಗನಗೌಡ, ಅಣ್ಣೆ ಸೊಲ್ಲಪ್ಪ, ಶಿಕ್ಷಕರಾದ ಮಲ್ಲಿಕಾರ್ಜುನಯ್ಯ, ಮಂಜುನಾಥ್, ಶಂಭುಲಿಂಗಪ್ಪ, ಜಗದೀಶ್, ಮಹೇಶ್, ಚನ್ನವೀರಯ್ಯ, ಡಿ. ಸವಿತಾ, ಸೇರಿದಂತೆ ಇತರರು ಇದ್ದರು.

## ಕ್ರಿಪ್ಟೋ ನಿಷೇಧ ಆರ್.ಬಿ.ಐ. ನಿಲುವು : ನಿರ್ಮಲಾ

ನವದೆಹಲಿ, ಜು. 18 – ಕ್ರಿಪ್ಟೋಕರೆನ್ಸಿಗಳ ಬಗ್ಗೆ ಆರ್.ಬಿ.ಐ. ಕಳವಳ ಹೊಂದಿದೆ. ಇವುಗಳಿಂದ ಹಣಕಾಸು ಹಾಗೂ ವಿತ್ತೀಯ ಸ್ಥಿರತೆ ಮೇಲೆ ಪರಿಣಾಮವಾಗುತ್ತಿರುವುದರಿಂದ ನಿಷೇಧಿಸಬೇಕು ಎಂಬ ನಿಲುವು ತಳೆದಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಲೋಕಸಭೆಗೆ ಲಿಖಿತ ಉತ್ತರ ನೀಡಿರುವ ಸಚಿವೆ, ಕ್ರಿಪ್ಟೋಕರೆನ್ಸಿ ಗಳನ್ನು ನಿಷೇಧಿಸಬೇಕು ಎಂಬುದು ರಿಸರ್ವ್ ಬ್ಯಾಂಕ್ ನಿಲುವಾಗಿದೆ ಎಂದಿದ್ದಾರೆ. ಪ್ರತಿಯೊಂದು ಹಣವನ್ನು ಕೇಂದ್ರ ಬ್ಯಾಂಕ್ ಇಲ್ಲವೇ ಸರ್ಕಾರ ಮುದ್ರಿಸಬೇಕು. ಹೀಗಾಗಿ ಕ್ರಿಪ್ಟೋಕರೆನ್ಸಿ ಹಣವಲ್ಲ ಎಂದು ರಿಸರ್ವ್ ಬ್ಯಾಂಕ್ ನಿಲುವು ಹೊಂದಿದೆ

## ನಂದಿಹಳ್ಳಿ ಗ್ರಾಮದಲ್ಲಿ ನೀರಿನ ಘಟಕ ಉದ್ಘಾಟನೆ

### ಭರಮಸಾಗರ

ಭರಮಸಾಗರ, ಜು. 18 - ಭರಮಸಾಗರದಿಂದ 3 ಕಿ.ಮೀ. ದೂರದಲ್ಲಿರುವ ನಂದಿಹಳ್ಳಿ ಗ್ರಾಮಕ್ಕೆ ಸುಮಾರ 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶುದ್ಧ ನೀರಿನ ಘಟಕ ಅಲ್ಲದೇ, 150 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಸರ್ಕಾರಿ ಪ್ರಾಥಮಿಕ ಶಾಲ ಕಟ್ಟಡ ಉದ್ಘಾಟಿಸಿ, ಕ್ಷೇತ್ರ ವ್ಯಾಪ್ತಿಯಲ್ಲಿ ಆದ್ಯತೆ ಮೇರೆಗೆ ಎಲ್ಲ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ಗ್ರಾಮೀಣ ಭಾಗದಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಹೆಚ್ಚು ಆದ್ಯತೆ ನೀಡಲಾಗಿದೆ ಎಂದು ಶಾಸಕ ಎಂ. ಚಂದ್ರಪ್ಪ ಹೇಳಿದರು.

ಅಲ್ಲಿಂದ ಮುಂದಿನ ಕೋಗುಂಡೆ ಕೋಡಿಹಳ್ಳಿ ನಡುವೆ ರಾಜ್ಯ ಹೆದ್ದಾರಿಯಲ್ಲಿ 4.66 ಕೋಟಿ ವೆಚ್ಚದ ಸೇತುವೆ ನಿರ್ಮಾಣದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಕೋಡಿಹಳ್ಳಿಯಲ್ಲಿ 10 ಲಕ್ಷ ವೆಚ್ಚದ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಕೋಡಿಹಳ್ಳಿ ಚವಲಿಹಳ್ಳಿ ಮಾರ್ಗದ ಡಾಂಬಾರ್ ರಸ್ತೆ ಉದ್ಘಾಟಿಸಿದರು.

ಭರಮಸಾಗರದ ಹಿರಿಯ ಜೀವಿ ಡಿ.ವಿ.ಶರಣಪ್ಪ, ಬಿಜೆಪಿ ಮಂಡಲದ ಹಾಲಿ ಅಧ್ಯಕ್ಷ ಚವಳಿಹಳ್ಳಿ ಶೈಲೇಶ್, ಹಾಗೂ ಮಾಜಿ ಅಧ್ಯಕ್ಷ ಶಾಮಿಲ್ ಶಿವಣ್ಣ , ಕೋಗುಂಡೆ ಪ್ರಗತಿ ಪರ ರೈತ ಹೆಚ್.ಎಂ. ಮಂಜುನಾಥ್, ಗ್ರಾ.ಪಂ ಅಧ್ಯಕ್ಷ ತಿಪ್ಪೇಸ್ವಾಮಿ, ಶಾಸಕರ ಆಪ್ತ ಸಹಾಯಕ ಲಾಯರ್ ಪಣಿಯಪ್ಪ, ಬಿಜೆಪಿಯ ಎಸ್ಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಡಿ. ಆಂಜನಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಹಾಲು, ಮೊಸರಿನ ದರ ಹೆಚ್ಚಳವಿಲ್ಲ

**(1ನೇ ಪುಟದಿಂದ)** ಸಾಧ್ಯವಿಲ್ಲ. ಹೆಚ್ಚಳ ಮಾಡುವ ಅವಶ್ಯಕತೆ ಇಲ್ಲ. ಇದರ ಬಗ್ಗೆ ಬರುವ ದಿನಗಳಲ್ಲಿ ಗಮನಹರಿಸಲಾಗುವುದು. ಗ್ರಾಹಕರಿಗೆ ಅದನ್ನು ದಾಟಿಸಬಾರದು. ಜಿ.ಎಸ್.ಟಿ ಮಂಡಳಿಯಲ್ಲಿ ಚರ್ಚಿಸಿ, ಸೂಚನೆ ನೀಡಲಾಗುವುದು ಎಂದರು.

## ಕಾಮಗಾರಿ ಬೇಗ ಸರಿಪಡಿಸಿ

**(1ನೇ ಪುಟದಿಂದ)** ಇಂಜಿನಿಯರ್ ನವೀನ್ ಮಾತನಾಡಿ, ನಗರದ ಹಳೆಯ ಬಡಾವಣೆಗಳಲ್ಲಿ ಅಣ್ಣ-ತಮ್ಮಂದಿರು ಸಹೋದರರು ಒಂದೇ ಮನೆ ನಂಬರ್‌ನಲ್ಲಿ ವಾಸ ಮಾಡುತ್ತಿರುವ ಹಿನ್ನೆಲೆಯಲ್ಲಿ ಸಂಪರ್ಕ ನೀಡುವ ಸಂದರ್ಭದಲ್ಲಿ ಆಕ್ಷೇಪಣೆ ವ್ಯಕ್ತವಾಗಿದೆ. ಇದರಿಂದ ಸಂಪರ್ಕ ಹಾಗೂ ಇತರೆ ಸೌಲಭ್ಯ ನೀಡುವಲ್ಲಿ ಸ್ವಲ್ಪ ವಿಳಂಬವಾಗಿದೆ ಎಂದರು.

ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್ ಮಾತನಾಡಿ, ತಗ್ಗಿನಕೇರಿ ಬಡಾವಣೆ ನದಿಯ ದಡದಲ್ಲಿ ಇರುವುದರಿಂದ ಪ್ರತಿವರ್ಷ ಪ್ರವಾಹ ಬಂದಾಗ ಸ್ಥಳೀಯ ನಿವಾಸಿಗಳಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಈ ಭಾಗವನ್ನು ಸಹ ಪ್ರವಾಹ ಪೀಡಿತ ಪ್ರದೇಶದ ವ್ಯಾಪ್ತಿಯೊಳಗೆ ಸೇರಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ ಎಂದರು.

ಮುಖಂಡ ದಾದಾಪೀರ್ ಭಾನುವಳ್ಳಿ, ನಗರಸಭೆ ಆರೋಗ್ಯ ಇಲಾಖೆ ಗುರುಪ್ರಸಾದ್, ಜಲಸಿರಿಯ ಅಭಿಷೇಕ್ ಮತ್ತಿತರರು ಉಪಸ್ಥಿತರಿದ್ದರು

## ಅಪಘಾತದ ಪರಿಹಾರ ನೀಡದ ಬಸ್ ಜಪ್ತಿ



ದಾವಣಗೆರೆ, ಜು. 18- ಹರಿಹರದಲ್ಲಿ ದಿನಾಂಕ 30.3. 2009 ರಲ್ಲಿ ಬಸ್ (ಕೆ.ಎ. 27-ಎಫ್ 395) ಅಪಘಾತದಲ್ಲಿ ಮರಣ ಹೊಂದಿದ್ದ ಪುಂಡಲೀಕ ರಸಗುಂಟೆ ಎಂಬಾತನ ಕುಟುಂಬಕ್ಕೆ 3,3000 ರೂ. ಪರಿಹಾರ ಕೋರಲಾಗಿತ್ತು. ಆದರೆ ಇದುವರೆಗೂ ಪರಿಹಾರ ನೀಡದ ಕಾರಣ ಬಸ್ ಜಪ್ತಿ ಮಾಡಲಾಗಿದೆ.

ಹರಿಹರ ನ್ಯಾಯಾಲಯದಲ್ಲಿ ಪರಿಹಾರ ಕೋರಿದ್ದು, ಪರಿಹಾರದ ಹಣ 3.3000 ಮತ್ತು ಬಡ್ಡಿಯನ್ನು ಮೃತನ ಪತ್ನಿ ಹಾಗೂ ತಂದೆ-ತಾಯಿ ಮತ್ತು ಮಕ್ಕಳಿಗೆ ಕರ್ನಾಟಕ ಉಚ್ಛ ನ್ಯಾಯಾಲಯವು ಸಹ ದಿನಾಂಕ 3.2.2015 ರಂದು ಪರಿಹಾರ ನೀಡಲು ಆದೇಶ ಮಾಡಿತ್ತು.

ವಾಯುವ್ಯ ವಿಭಾಗದ ಸಾರಿಗೆಯಿಂದ ಇದುವರೆಗೂ ಪರಿಹಾರ ಸಂದಾಯವಾಗದ ಕಾರಣ ಇಂದು ನ್ಯಾಯಾಲಯದ ಆದೇಶದ ಮೇರೆಗೆ ಅಮೀನರಾಧ ಮನೋಹರ. ಬಸಪ್ಪ, ಮಹಾಂತೇಶ, ಶ್ರೀನಿವಾಸ ಬಸ್ಸನ್ನು ಜಪ್ತಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಅರ್ಜಿದಾರರ ಪರವಾಗಿ ವಕೀಲರಾದ ಬಸವರಾಜ್ ಓಂಕಾರಿ ಹಾಜರಿದ್ದರು.

## ಹರಿಹರ : ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ತಹಶೀಲ್ದಾರ್ ಡಾ. ಬಿ.ಎಂ. ಅಶ್ವತ್ಥ್ ಭೇಟಿ



ಹರಿಹರ, ಜು.18- ನಗರದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ನಿನ್ನೆ ಸಂಜೆ ಭೇಟಿ ನೀಡಿದ ತಹಶೀಲ್ದಾರ್ ಡಾ. ಬಿ.ಎಂ ಅಶ್ವಥ್ ಅವರು ವಿದ್ಯಾರ್ಥಿಗಳ ಯೋಗಕ್ಷೇಮ ವಿಚಾರಿಸಿ ಅವರೊಂದಿಗೆ ಊಟ ಮಾಡಿ, ಊಟದ ವ್ಯವಸ್ಥೆ ಬಗ್ಗೆ ಖುದ್ದು ಪರಿಶೀಲನೆ ಮಾಡಿದರು.

## ತುಮ್ಮಿನಕಟ್ಟೆ - ಉಕ್ಕಡಗಾತ್ರಿ ಸಂಪರ್ಕ ರಸ್ತೆ ಸಂಚಾರಕ್ಕೆ ಮುಕ್ತ



ಮಲೇಬೆನ್ನೂರು, ಜು.18- ತುಂಗಭದ್ರಾ ನದಿಯ ಹಿನ್ನೀರಿನಲ್ಲಿ 4 ದಿನಗಳಿಂದ ಮುಳುಗಡೆಯಾಗಿದ್ದ ತುಮ್ಮಿನಕಟ್ಟೆ - ಉಕ್ಕಡಗಾತ್ರಿ ಸಂಪರ್ಕ ರಸ್ತೆಯ ಸೇತುವೆ ಸೋಮವಾರ ನದಿಯಲ್ಲಿ ನೀರಿನ ಹರಿವು ಕಡಿಮೆಯಾಗಿರುವುದರಿಂದ ಸಂಚಾರಕ್ಕೆ ಮುಕ್ತವಾಗಿದೆ. ಫತ್ತೇಪುರ-ಉಕ್ಕಡಗಾತ್ರಿ ಸಂಪರ್ಕ ರಸ್ತೆಯೂ ಮಂಗಳವಾರ ನದಿ ಹಿನ್ನೀರಿನಿಂದ ತೆರವಾಗುವ ಸಾಧ್ಯತೆ ಇದೆ ಎಂದು ಉಪ ತಹಶೀಲ್ದಾರ್ ಆರ್.ರವಿ ಅವರು ಸ್ಥಳ ಪರಿಶೀಲಿಸಿ ತಿಳಿಸಿದರು. ಸದ್ಯ ತುಂಗಭದ್ರಾ ನದಿಯಲ್ಲಿ ತುಂಗಾ ಡ್ಯಾಂನ 35 ಸಾವಿರ ಕ್ಯೂಸೆಕ್ಸ್ ಮತ್ತು ಭದ್ರಾ ಡ್ಯಾಂನ 40 ಸಾವಿರ ಕ್ಯೂಸೆಕ್ಸ್ ನೀರು ಹರಿಯುತ್ತಿದೆ.


॥ ಶ್ರೀ ಮಾವಿನಹಳ್ಳಿ ಬಸವೇಶ್ವರ ಪ್ರಸನ್ನ ॥

**ಗುರು-ಲಿಂಗ ಜಂಗಮಾರಾಧನೆ ಆಹ್ವಾನ**



ದಾವಣಗೆರೆ ಸಿಟಿ ವಾಸಿಗಳಾದ
**ಶಾಂತವೀರಪ್ಪ ಮಠದ ಶ್ರೀಮತಿ ಶಿವಲೀಲಾ**
**ಶ್ರೀ ಷಡಾಕ್ಷರಯ್ಯ ನರಗನಹಳ್ಳಿ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 11.07.2022ನೇ ಸೋಮವಾರ
ಮಧ್ಯಾಹ್ನ 2.05ಕ್ಕೆ ನಮ್ಮ ಮಗನಾದ
**ವೇ॥ ಮೋಹನ್ ಎಸ್.ಎಂ.**
ಇವರು ಲಿಂಗೈಕ್ಯರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ

**"ಗುರು-ಲಿಂಗ ಜಂಗಮಾರಾಧನೆ "ಯನ್ನು**
ದಿನಾಂಕ : 19.07.2022ನೇ ಮಂಗಳವಾರ ಬೆಳಿಗ್ಗೆ 11.30ಕ್ಕೆ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಶ್ರೀಮತಿ ಶಿವಲೀಲಾ, ಶ್ರೀ ಷಡಾಕ್ಷರಯ್ಯ**
**ಮೃತರ ಧರ್ಮಪತ್ನಿ : ಶ್ರೀಮತಿ ಪುಷ್ಪಾ ಮತ್ತು ಮಕ್ಕಳು,**
**ಸಹೋದರ-ಸಹೋದರಿಯರು ಹಾಗೂ ಬಂಧು-ಮಿತ್ರರು**



**ಎರಡನೇ ವರ್ಷದ ಪುಣ್ಯಸ್ಮರಣೆ**



**ದಿ. ಎ.ಎಂ. ಅಜ್ಜಪ್ಪ**
**ನಿಧನ: 19.07.2020**
**ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು**
**ಸದಾ ನಿಮ್ಮ ಸ್ಮರಣೆಯಲ್ಲಿರುವ...**
**ಮಕ್ಕಳಾದ : ಅಂಕಿತ್ ಕುಮಾರ್, ಸಂಕೇತ್**
**ಹಾಗೂ ಕುಟುಂಬಸ್ಥರು.**


**ಸೋಮನಹಳ್ಳಿ ಶ್ರೀಮತಿ ಪೂರ್ಣಿಮಾ ನಿಧನ**



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 12ನೇ ಮೇನ್, 3ನೇ ಕ್ರಾಸ್ ವಾಸಿ ಸೋಮನಹಳ್ಳಿ ಮುತ್ತಣ್ಣ ಅವರ ಧರ್ಮಪತ್ನಿ ಶ್ರೀಮತಿ ಪೂರ್ಣಿಮಾ ಸೋಮನಹಳ್ಳಿ (60) ಇವರು ದಿನಾಂಕ 18.7.2022ರ ಸೋಮವಾರ ತಡ ರಾತ್ರಿ 11.55ಕ್ಕೆ ನಿಧನರಾದರು. ಮೃತರು ಇಬ್ಬರು ಪುತ್ರರು, ಸೊಸೆ, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.7.2022ರ ಮಂಗಳವಾರ ಮಧ್ಯಾಹ್ನ 2.30ಕ್ಕೆ ನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಕನಗೊಂಡನಹಳ್ಳಿ ಎಸ್‌ಡಿಎಂಸಿ ಅಧ್ಯಕ್ಷರಾಗಿ ಮಂಜುನಾಥ್, ಉಪಾಧ್ಯಕ್ಷರಾಗಿ ರೇಣುಕ



ದಾವಣಗೆರೆ, ಜು. 18- ತಾಲ್ಲೂಕಿನ ಕನಗೊಂಡನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 2022-23 ನೇ ಸಾಲಿನ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ (ಎಸ್‌ಡಿಎಂಸಿ) ಅಧ್ಯಕ್ಷರಾಗಿ ಕೆ.ಎನ್. ಮಂಜುನಾಥ್ ಹಾಗೂ ಉಪಾಧ್ಯಕ್ಷರಾಗಿ ಹೆಚ್.ಎಸ್. ರೇಣುಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶಿಕ್ಷಣ ಇಲಾಖೆ ನಿಯಮಾನುಸಾರ ಎಸ್‌ಡಿಎಂಸಿಗೆ ಮೀಸಲಾತಿ ಆಧಾರದಲ್ಲಿ 9 ಮಹಿಳೆಯರು ಮತ್ತು 9 ಪುರುಷರು ಸೇರಿ 18 ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

# ಭಾರತದ ಯುವಶಕ್ತಿ ಬಗ್ಗೆ ಜಾಗತಿಕ ನಿರೀಕ್ಷೆ ಇದೆ

## ಮಾಗನೂರು ಬಸಪ್ಪ ಪದವಿಪೂರ್ವ ಕಾಲೇಜಿನಲ್ಲಿ ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ



ದಾವಣಗೆರೆ, ಜು.18- ಪ್ರಪಂಚದಲ್ಲೇ ಅತ್ಯಧಿಕ ಪ್ರಮಾಣದಲ್ಲಿರುವ ಭಾರತದ ಯುವ ಶಕ್ತಿಯ ಬಗ್ಗೆ ಜಗತ್ತೇ ದೊಡ್ಡ ನಿರೀಕ್ಷೆ ಇಟ್ಟುಕೊಂಡಿದ್ದು, ಭಾರತದ ಯುವಕ - ಯುವತಿಯರು ಮನಸ್ಸು ಮಾಡಿದರೆ, ಭವಿಷ್ಯದಲ್ಲಿ ಜಗತ್ತನ್ನೇ ಆಳಬಹುದು ಎಂಬುದನ್ನು ನಾವು ನಿಜಮಾಡಿ ತೋರಿಸಬೇಕಾಗಿದೆ. ಇದಕ್ಕಾಗಿ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಭವಿಷ್ಯದೊಂದಿಗೆ ಜಾಗತಿಕ ನಿರೀಕ್ಷೆಯನ್ನೂ ಗಮನದಲ್ಲಿಟ್ಟುಕೊಂಡು ಮುಂದುವರಿಯಬೇಕಿದೆ ಎಂದು ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ್ ಅಭಿಪ್ರಾಯಪಟ್ಟರು.

ನಗರದ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ವಿದ್ಯಾರ್ಥಿ ವೇದಿಕೆ ಉದ್ಘಾಟನೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಯೋಜನೆಗಳನ್ನು ರೂಪಿಸಿಕೊಳ್ಳುವಾಗ ತಮ್ಮ ಹಿತವನ್ನಷ್ಟೇ ಅಲ್ಲ ಜಗತ್ತಿನ ಹಿತವನ್ನೂ ಗಮನದಲ್ಲಿಟ್ಟು ಮುಂದಡಿ ಇಡಬೇಕಿದೆ. ಇದಕ್ಕಾಗಿ ನಾಯಕತ್ವ ಗುಣವನ್ನು ವಿದ್ಯಾರ್ಥಿ ದೆಸೆಯಿಂದಲೇ ರೂಢಿಸಿಕೊಳ್ಳಬೇಕಿದೆ.

ನಾಯಕತ್ವ ಗುಣ ಎಂದರೆ ಕೇವಲ ಆಳುವುದು ಎಂದಲ್ಲ. ಆಳಾಗಲೂ ಸಿದ್ಧವಿರಬೇಕು, ಮುಖ್ಯವಾಗಿ ಮನಸ್ಸು ಹರಿಬಿಡದೇ ಬುದ್ಧಿಯ ನಿಯಂತ್ರಣದಲ್ಲಿರಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನ ನಿರ್ದೇಶಕ ಡಾ.ಜಿ.ಎನ್.ಹೆಚ್.ಕುಮಾರ್ ಅವರು, ಶ್ರದ್ಧೆಯಿಂದ ಓದಿದರೆ ಯಶಸ್ಸು ಸಾಧ್ಯ. ಓದಿನಲ್ಲಿ ಆಸಕ್ತಿ ಮುಖ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟಿನ ಗೌರವ ಕಾರ್ಯದರ್ಶಿ ಸಂಗಮೇಶ್ವರ ಗೌಡರು ಶೈಕ್ಷಣಿಕ ಜೀವನದಲ್ಲಿ ಸೌಲಭ್ಯ, ಸುಖ ಮುಖ್ಯವಲ್ಲ, ಅಧ್ಯಯನವೇ ಮುಖ್ಯ, ಪ್ರತಿಭಾವಂತರ ಸಾಧನೆಯಿಂದ ಪ್ರೇರೇಪಣೆಗೊಂಡು ಪ್ರತಿ ವಿದ್ಯಾರ್ಥಿಯೂ ಸಾಧನೆ ಮಾಡಬೇಕೆಂದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಪ್ರಸಾದ್ ಬಂಗೇರ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ವಿದ್ಯಾರ್ಥಿ ಸಿ.ಇ. ನಾಗರಾಜ ಸ್ವಾಗತಿಸಿದರು. ತರಗತಿ ಪ್ರತಿನಿಧಿಗಳ ಪರಿಚಯವನ್ನು ವಿದ್ಯಾರ್ಥಿ ಷಣ್ಮುಖಪ್ಪ ಮಾಡಿದರು. ಉಪನ್ಯಾಸಕ ಸಮಿತಿಗಳ ಪರಿಚಯವನ್ನು ಉಪನ್ಯಾಸಕರ ಕಾರ್ಯದರ್ಶಿ ಸುರೇಖಾ ಜಗದೀಶ್ ಮಾಡಿದರು. ಮುಖ್ಯ ಅತಿಥಿಗಳ ಪರಿಚಯವನ್ನು ವಿದ್ಯಾರ್ಥಿನಿ ನಿಧಿ ಸಿ. ಆರ್. ಮಾಡಿದರೆ ಬಹುಮಾನಿತರ ಹೆಸರುಗಳನ್ನು ವಿದ್ಯಾರ್ಥಿ ಆದರ್ಶ ಬಿ. ವಾಚಿಸಿದರು. ಕೆ.ಪಿ. ದಿವ್ಯಾಶ್ರೀ ನಿರೂಪಿಸಿದ ಕಾರ್ಯಕ್ರಮದಲ್ಲಿ ವಂದನೆಗಳನ್ನು ಆದಿತ್ಯ ಎಂ.ಜೆ. ಸಮರ್ಪಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳ ನಿರೂಪಣೆಯನ್ನು ವಿದ್ಯಾರ್ಥಿನಿಯರಾದ ತೇಜು ಮತ್ತು ಝೋಹಾ ಖಾನಂ ನಡೆಸಿಕೊಟ್ಟರು. ಕಾಲೇಜಿನ ಮಾಗನೂರು ಬಸಪ್ಪ ಸಭಾಂಗಣದಲ್ಲಿ ಕಾರ್ಯಕ್ರಮ ನೆರವೇರಿತು.

## ನಗರಕ್ಕೆ ಇಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ

ವಿಧಾನ ಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಇಂದು ನಗರಕ್ಕೆ ಆಗಮಿಸಲಿದ್ದು, ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ



ಜಿಲ್ಲಾಡಳಿತದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸ ಲಾಗಿರುವ ಚುನಾವಣಾ ಸುಧಾ ರಣಾ ಕ್ರಮಗಳ ಬಗ್ಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 3.30ಕ್ಕೆ ಶಾಸಕ ಎಸ್.ಎ ರವೀಂದ್ರನಾಥ್ ಅವರ ಕುರಿತಾದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸುವರು. ನಂತರ ಸಂಜೆ 5 ಗಂಟೆಗೆ ರಾಣೇಬೆನ್ನೂರಿಗೆ ಪ್ರಯಾಣಿಸುವರು.

# ರಾಷ್ಟ್ರಪತಿ ಚುನಾವಣೆಗೆ ಮತದಾನ

**(1ನೇ ಪುಟದಿಂದ)** ಮಹಿಳೆಯಾಗಲಿದ್ದಾರೆ.

ಜುಲೈ 21ರಂದು ಮತಗಳ ಎಣಿಕೆ ನಡೆಯಲಿದೆ. ಜುಲೈ 25ರಂದು ನೂತನ ರಾಷ್ಟ್ರಪತಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಚುನಾವಣಾ ಫಲಿತಾಂಶ ಈಗಾಗಲೇ ಸ್ಪಷ್ಟವಾಗಿದೆ. ಆದರೆ, ಮುರ್ಮು ಪರ ಅಡ್ಡ ಮತದಾನವಾಗಿದೆವ ಎಂಬ ವರದಿಗಳು ರಾಜಕೀಯವಾಗಿ ಪ್ರಾಮುಖ್ಯತೆ ಪಡೆದುಕೊಂಡಿವೆ.

ಅಸ್ಸಾಂ, ಗುಜರಾತ್ ಹಾಗೂ ಮಹಾರಾಷ್ಟ್ರ ಸೇರಿದಂತೆ ಹಲವೆಡೆ ಎನ್.ಡಿ.ಎ. ಅಭ್ಯರ್ಥಿ ಪರ ಅಡ್ಡ ಮತದಾನವಾಗಿದೆ ಎನ್ನಲಾಗಿದೆ. ಮತ ಎಣಿ ಕೆಯ ದಿನದಂದೇ ಈ ಬಗ್ಗೆ ಸ್ಪಷ್ಟ ಚಿತ್ರಣ ಸಿಗಲಿದೆ.

ಕಾಂಗ್ರೆಸ್‌ನ 20 ಶಾಸಕರು ಮುರ್ಮು ಪರ ಮತ ಚಲಾಯಿಸಿದ್ದಾರೆ ಎಂದು ಅಸ್ಸಾಂ ಎ.ಐ.ಯು.ಡಿ.ಎಫ್ ಶಾಸಕ ಕರೀಮುದ್ದೀನ್ ಬರ್ಭುಯಾ ಹೇಳಿದ್ದಾರೆ.

ಸಮಾಜವಾದಿ ಪಕ್ಷದ ಮುಖ್ಯಸ್ಥ ಮುಲಾಯಂ ಸಿಂಗ್ ಯಾದವ್ ಅವರನ್ನು 'ಐ.ಎಸ್.ಐ. ಏಜೆಂಟ್' ಎಂದು ಸಿನ್ಹಾ ಹೇಳಿದ್ದರು. ಅವರಿಗೆ ನಾನೆಂದೂ ಬೆಂಬಲಿಸಲಾರೆ ಎಂದು ಉತ್ತರ ಪ್ರದೇಶದ ಪ್ರಗತಿಶೀಲ ಸಮಾಜವಾದಿ ಪಾರ್ಟಿ ಲೋಹಿಯಾದ ಶಿವಪಾಲ್ ಸಿಂಗ್ ಯಾದವ್ ಹೇಳಿದ್ದಾರೆ.

ಹರಿಯಾಣದ ಕಾಂಗ್ರೆಸ್ ಶಾಸಕ ಕುಲದೀಪ್ ಬಿಷ್ಣೋಯಿ ಅವರು ಅಡ್ಡ ಮತದಾನ ಮಾಡಿರುವ ಸೂಚನೆ ನೀಡಿದ್ದಾರೆ. ಕಳೆದ ತಿಂಗಳು ನಡೆದ ರಾಜ್ಯಸಭಾ ಚುನಾವಣೆಯಲ್ಲೂ ಅವರು ಅಡ್ಡಮತದಾನ ಮಾಡಿದ್ದರು.

ಒಡಿಶಾ ಪುತ್ರಿಯಾದ ಮುರ್ಮು ಪರ ಮತ ಚಲಾಯಿಸಿದ್ದೇನೆ ಎಂದು ಒಡಿಶಾದ ಕಾಂಗ್ರೆಸ್ ಶಾಸಕ ಮೊಹಮ್ಮದ್ ಮೌಕಿಮ್ ಹೇಳಿಕೆ ನೀಡಿ ಪಕ್ಷಕ್ಕೆ ಆಘಾತ ನೀಡಿದ್ದಾರೆ.

ಜಾರ್ಖಂಡ್‌ನ ಎನ್.ಸಿ.ಪಿ. ಶಾಸಕ ಕಮಲೇಶ್ ಸಿಂಗ್ ಅವರು ಮುರ್ಮುಗೆ ಬೆಂಬಲ ನೀಡಿರುವುದಾಗಿ ತಿಳಿಸಿದ್ದಾರೆ. ಗುಜರಾತ್‌ನ ಎನ್.ಸಿ.ಪಿ. ಶಾಸಕ ಕಂಧಲ್ ಜಡೇಜಾ ಅವರೂ ಸಹ ಬಿಜೆಪಿ ಅಭ್ಯರ್ಥಿಗೆ ಮತ ಚಲಾಯಿಸಿರುವುದಾಗಿ ಹೇಳಿದ್ದಾರೆ.

ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರು ವಿಶ್ವಾಸ ಮತ ಯಾಚಿಸುವ ಸಂದರ್ಭದಲ್ಲಿ ಗೈರಾಗಿದ್ದ ಕಾಂಗ್ರೆಸ್ ಪಕ್ಷದ ಹಲವು ಶಾಸಕರು ಮುರ್ಮು ಪರ ಮತ ಚಲಾಯಿಸಿದ್ದಾರೆ ಎಂಬ ವಿಶ್ವಾಸ ತಮಗಿದೆ ಎಂದು ಮಹಾರಾಷ್ಟ್ರದ ಬಿಜೆಪಿ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್ ಹೇಳಿದ್ದಾರೆ.

ಶಿರೋಮಣಿ ಅಕಾಲಿ ದಳದ ಶಾಸಕ ಮನ್‌ಪ್ರೀತ್ ಸಿಂಗ್ ಅವರು ಮತದಾನಕ್ಕೆ ಬಹಿಷ್ಕಾರ ಹಾಕುವುದಾಗಿ ತಿಳಿಸಿದ್ದಾರೆ.

ಅತ್ಯಂತ ದುರ್ಬಲವಾಗಿ ಕಂಡು ಬಂದ 89 ವರ್ಷದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಗಾಲಿ ಕುರ್ಚಿಯ ಮೇಲೆ ಬಂದು ಮತ ಚಲಾಯಿಸಿದರು. ಅವರು ಮತ ಚಲಾಯಿಸಲು ಇತರರು ನೆರವಾದರು.

82 ವರ್ಷದ ಸಮಾಜವಾದಿ ಪಕ್ಷದ ಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರು ಮತದಾನ ಮಾಡುವಾಗ ಕಷ್ಟಪಡಬೇಕಾಯಿತು.

ಒಡಿಶಾದ ಪ್ರತಿಪಕ್ಷದ ನಾಯಕರಾಗಿರುವ ಬಿಜೆಪಿಯ ಪ್ರದಿಪ್ತ ಕುಮಾರ್ ನಾಯಕ್ ಅವರು ಕೊರೊನಾ ನಂತರದ ಸಮಸ್ಯೆಗಳಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಆಕ್ಸಿಜನ್ ಸಿಲಿಂಡರ್‌ನೊಂದಿಗೆ ಬಂದು ಮತ ಚಲಾಯಿಸಿದರು.

ಕಳೆದ ತಿಂಗಳು ರಸ್ತೆ ಅಪಘಾತಕ್ಕೆ ಗುರಿಯಾಗಿದ್ದ ಬಿಹಾರದ ಬಿಜೆಪಿ ಶಾಸಕ ಮಿಥಿಲೇಶ್ ಕುಮಾರ್ ಅವರು ಸ್ಟ್ರೆಚರ್ ಮೇಲೆ ಬಂದು ಮತ ಚಲಾಯಿಸಿದರು.

# ಪಾರಂಪರಿಕ ಜಾನಪದ ಕಲೆಗಳ ಪುನಶ್ಚೇತನ ಅಗತ್ಯ



ಹೊಸಪೇಟೆ (ವಿಜಯನಗರ), ಜು. 18- ಪಾರಂಪರಿಕ ಜಾನಪದ ಕಲೆಗಳನ್ನು ಉಳಿಸಿ, ಬೆಳೆಸುವ ಅಗತ್ಯವಿದೆ. ತಂತ್ರಜ್ಞಾನದ ಭರಾಟೆಯಲ್ಲಿ ಮರೆಯಾಗುತ್ತಿರುವ ಕಲೆಗಳಿಗೆ ಪುನಶ್ಚೇತನ ನೀಡಬೇಕಿದೆ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಮಾತಾ ಬಿ. ಮಂಜಮ್ಮ ಜೋಗತಿ ಅಭಿಪ್ರಾಯ ಪಟ್ಟರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪತಂಜಲಿ ಸಮಾಜ ಸೇವಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಆಸನ-ಪ್ರಾಣಾಯಾಮ ಜೊತೆಗೆ ಕ್ರಮಬದ್ಧ ಜೀವನ ಶೈಲಿಯೇ ಯೋಗವಾಗಿದೆ. ದೈನಂದಿನ ಬದುಕಿನಲ್ಲಿ ಯೋಗ ಜೀವನದ ಭಾಗವಾಗಬೇಕು ಎಂದರು. ಪತಂಜಲಿ ಯೋಗ ಸಮಿತಿಯ ರಾಜ್ಯ ಪ್ರಭಾರಿ ಭವರಲಾಲ್ ಆರ್ಯ ಮಾತನಾಡಿದರು.

**ಹೊಸಪೇಟೆ: ಪತಂಜಲಿ ಸಮಾಜ ಸೇವಾ ಪ್ರಶಸ್ತಿ ಸ್ವೀಕರಿಸಿದ ಮಾತಾ ಬಿ.ಮಂಜಮ್ಮ ಜೋಗತಿ**

ಮಾತಾ ಬಿ. ಮಂಜಮ್ಮ ಜೋಗತಿ, ಯುವ ಮುಖಂಡ ಸಂದೀಪ್ ಸಿಂಗ್, ಯೋಗ ಪಟು ನೂರ್ ಜಹಾನ್, ಕೊಟ್ಟೂರಿನ ದೇವರಮನಿ ಕರಿಯಪ್ಪ ಹಾಗೂ ವಿಶ್ವಚೇತನ ಸಂಸ್ಥೆಯ ಗಂಗಾಧರ ಗಡಾದ ಅವರಿಗೆ ಪತಂಜಲಿ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಯೋಗ ಸಮಿತಿಯ ರಾಜ್ಯ ಪ್ರಭಾರಿ ದಾಕ್ಷಾಯಿಣಿ ಶಿವಕುಮಾರ, ಜಿಲ್ಲಾ ಪ್ರಭಾರಿ ಎಫ್.ಟಿ.ಹಳ್ಳಿಕೇರಿ, ಗೌರಮ್ಮ ಬ್ಯಾಳಿ, ಭೂಪಾಲ ರಾಘವೇಂದ್ರ ಶೆಟ್ಟಿ, ಬಾಲಚಂದ್ರ, ಕಿರಣಕುಮಾರ್, ಕೃಷ್ಣನಾಯ್ಕ, ವೀರೇಶ್‌ಬಾಬು ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ 40% ಕೊಟ್ರೆ ಮಾತ್ರ ಕೆಲಸ

**(1ನೇ ಪುಟದಿಂದ)** ಕ್ಷೇತ್ರಗಳಲ್ಲಿ ಗೆಲ್ಲುವುದು ನಮ್ಮ ಗುರಿ. ಇದಕ್ಕಾಗಿ ಸಂಘಟನೆಯಲ್ಲಿ ತೊಡಗಿದ್ದೇವೆ. ಕಾರ್ಯಕರ್ತರನ್ನು ಹುರಿದುಂಬಿಸಿ ಶ್ರಮಿಸುತ್ತಿದ್ದೇವೆ ಎಂದವರು ತಿಳಿಸಿದರು.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕಿಳಿಯುವ ಬಗ್ಗೆ ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಮಲ್ಲಿಕಾರ್ಜುನ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ತಮ್ಮ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ರಾಜಕೀಯಕ್ಕೆ ಬರುವ ಬಗ್ಗೆ ಸದ್ಯಕ್ಕೆ ಯಾವುದೇ ಯೋಚನೆ ಇಲ್ಲ. ಕುಟುಂಬದವರಾಗಿರುವ ಕಾರಣ ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಕೆಲಸ ಮಾಡಿದ್ದರು. ವೈದ್ಯರಾಗಿರುವ ಅವರು ಸಾಮಾಜಿಕ ಕಾರ್ಯ ಹಾಗೂ ರೋಗಿಗಳಿಗೆ ಸೇವೆ ಮಾಡುವ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ ಎಂದು ತಿಳಿಸಿದರು.

# ಶಿಕ್ಷಕರ ಕಾಳಜಿಯಿಂದ ಮಕ್ಕಳ ಭವಿಷ್ಯ ಉಜ್ವಲ

## ಹರಿಹರ: ಫ್ಯೂಚರ್ ಇಂಡಿಯಾ ಸಂಸ್ಥೆಯಿಂದ ಉಚಿತ ನೋಟ್ ಬುಕ್ ವಿತರಣೆ



ಹರಿಹರ, ಜು. 18- ವಿದ್ಯಾರ್ಥಿಗಳ ಭವಿಷ್ಯದ ದಿನಗಳು ಉತ್ತಮ ಹಾದಿಯಲ್ಲಿ ಸಾಗುವುದಕ್ಕೆ ಶಿಕ್ಷಕರ ಕಾಳಜಿ ಚೆನ್ನಾಗಿ ಇರಬೇಕು. ಅಂತಹ ಶಿಕ್ಷಕರನ್ನು ಹೊಂದಿದ ಶಾಲೆ ಪ್ರಗತಿಯನ್ನು ಹೊಂದುವುದರ ಜೊತೆಗೆ ಮಕ್ಕಳ ಭವಿಷ್ಯವನ್ನು ರೂಪಿಸುವ ಕಾರ್ಯಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ ಎಂದು ಧೂಳೆಹೊಳೆ ಶಾಲೆಯ ಮುಖ್ಯ ಶಿಕ್ಷಕ ಶರಣ್ ಕುಮಾರ್ ಹೆಗಡೆ ಹೇಳಿದರು.

ನಗರದ ತಿಪ್ಪೇರುದ್ರಸ್ವಾಮಿ ಪ್ರೌಢಶಾಲಾ ವಿದ್ಯಾ ರ್ಥಿಗಳಿಗೆ ಫ್ಯೂಚರ್ ಇಂಡಿಯಾ ಸಂಸ್ಥೆಯ ಮುಖ್ಯಸ್ಥ ವಿನೋದ ಮುರುಗೋಡು ನೀಡಿರುವ ಉಚಿತ ನೋಟ್ ಪುಸ್ತಕ ವಿತರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ನೋಟ್ ಪುಸ್ತಕಗಳನ್ನು ಪಡೆದುಕೊಂಡ ವಿದ್ಯಾರ್ಥಿ ಗಳು ಮುಖ ಪುಟದಲ್ಲಿ ದೇಶದ ಯೋಧರ ಬಗ್ಗೆ ಅನಿಸಿಕೆ ಗಳನ್ನು ಬರೆಯಬೇಕು. ಮತ್ತು ಜು. 26 ರಂದು ನಡೆಯುವ ಕಾರ್ಗಿಲ್ ವಿಜಯೋತ್ಸವದ ಸಂದರ್ಭದಲ್ಲಿ ಭಾರತದ ನಕ್ಷೆ ಬಿಡಿಸಿ ಅದರ ಮುಂದೆ ದೀಪವನ್ನು ಹಚ್ಚಿ ಮರಣ ಹೊಂದಿದ ಸೈನಿಕರ ಸ್ಮರಣೆ ಮಾಡಬೇಕು ಮತ್ತು ದೇಶದ ಒಳಿತಿಗಾಗಿ ತಮ್ಮದೇ ಆದ ಸೇವೆಯನ್ನು ಒದಗಿಸಿರುವ ಗಣ್ಯ ಮಾನ್ಯರ ಬಗ್ಗೆ ಓದಿ ತಿಳಿದುಕೊಳ್ಳಬೇಕು. ತಂದೆ, ತಾಯಿ ಮತ್ತು ಗುರು ಹಿರಿಯರನ್ನು ಸ್ಮರಿಸಬೇಕು ಎಂದು ಹೇಳಿದರು.

ಶಾಲೆಯ ಮುಖ್ಯ ಶಿಕ್ಷಕ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ.ಬಿ. ರೇವಣ್ಣನಾಯ್ಕ್ ಮಾತನಾಡಿ, ಸಮಾಜದಲ್ಲಿ ಯಾವುದೇ ವ್ಯಕ್ತಿಗಳು ದಾನ, ಧರ್ಮ ಮಾಡುವಾಗ ಸರ್ಕಾರಿ ಶಾಲೆಗಳನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಸಹ ಪ್ರಗತಿಯನ್ನು ಹೊಂದಲಿ ಎಂದು ನಮ್ಮ ಶಾಲೆಯ ಬಡ ಮಕ್ಕಳಿಗೆ ಉಚಿತ ನೋಟ್ ಪುಸ್ತಕಗಳನ್ನು ನೀಡುತ್ತಿರುವ ಫ್ಯೂಚರ್ ಇಂಡಿಯಾ ಸಂಸ್ಥೆಗೆ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಈಶಪ್ಪ ಬೂದಿಹಾಳ ಮಾತನಾಡಿ, ವಿದ್ಯಾರ್ಥಿಗಳು ಸಮಾಜದಲ್ಲಿ ದೊಡ್ಡ ವ್ಯಕ್ತಿಗಳಾಗಿ, ಬಡವರ ಬಗ್ಗೆ ಕಾಳಜಿ ಹೊಂದಿ ಅವರ ಕಷ್ಟಗಳಿಗೆ ಸ್ಪಂದಿಸುವ ಹಂಬಲವನ್ನು ಹೊಂದಬೇಕು ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಹಾಗೂ ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ ಮಾತನಾಡಿ, ಮಕ್ಕಳು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಏಕಾಗ್ರತೆ, ಸಮಯ ಪ್ರಜ್ಞೆ ಮತ್ತು ಶಿಸ್ತು ಅಳವಡಿಸಿಕೊಂಡರೆ ಮುಂದಿನ ದಿನಗಳಲ್ಲಿ ತಮ್ಮ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳುವುದಕ್ಕೆ ದಾರಿಯಾಗುತ್ತದೆ ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಹರೀಶ್ ನೋಟದರ, ಹೊಸಪೇಟೆ ಬೀದಿ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ ವೆಂಕಟೇಶ, ಶಿಕ್ಷಕರಾದ ಕೆ.ಸಿ. ನಾಗರಾಜ್, ಹೊನ್ನಕೇರಪ್ಪ, ಬಣಕಾರ ಮೃತ್ಯುಂಜಯ್ಯ, ಸಿ.ಮಂಜುನಾಥ್, ಮಂಜುನಾಥಪ್ಪ, ಗಿರಿಜಮ್ಮ, ಎಕ್ಕೆಗೊಂದಿ ರುದ್ರೇಗೌಡ ಹಾಗು ಇತರರು ಹಾಜರಿದ್ದರು.



## ಅಮೃತ ವಿದ್ಯಾಲಯದಲ್ಲಿ ಗುರು ಪೂರ್ಣಿಮೆ

ದಾವಣಗೆರೆ,ಜು.18- ನಗರದ ಅಮೃತ ವಿದ್ಯಾಲಯದಲ್ಲಿ ಗುರು ಪೂರ್ಣಿಮೆ ಕಾರ್ಯಕ್ರಮ ನಡೆಯಿತು.

ಬ್ರಹ್ಮಚಾರಿಣಿ ಆರಾಧನಾಮೃತ ಚೈತನ್ಯ, ಆಡಳಿತಾಧಿಕಾರಿ ಕೊಟ್ರೇಶಪ್ಪ, ಪ್ರಾಂಶುಪಾಲ ಎನ್.ಸಿ. ವಿವೇಕ್ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ತಂದೆ-ತಾಯಿಗಳ ಪಾದ ಪೂಜೆ ಮಾಡುವ ಮೂಲಕ ಸಂಸ್ಕೃತಿ ಪೂಜೆ ನೆರವೇರಿಸಿದರು. 500ಕ್ಕೂ ಹೆಚ್ಚು ಪೋಷಕರು ಪಾಲ್ಗೊಂಡಿದ್ದರು. ಭಜನೆ, ಮಹಾಮಂಗಳಾರತಿ, ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ನಿವೃತ್ತ ಶಿಕ್ಷಕರಿಗೆ ಸನ್ಮಾನ-ಬೀಳ್ಕೊಡುಗೆ



ದಾವಣಗೆರೆ,ಜು.18- ನಿವೃತ್ತ ಶಿಕ್ಷಕರಾದ ಜಯಕೊಟ್ರಮ್ಮ, ಎ.ಪ್ರಭು, ರೇವಣಸಿದ್ದಪ್ಪ, ಸರೋಜಾ ಶಾಬಾದ್, ನಾಗರಾಜಪ್ಪ ಅವರುಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಆತ್ಮೀಯವಾಗಿ ಸನ್ಮಾನಿಸಿ, ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ನಿರಂಜನಮೂರ್ತಿ, ಮ್ಯಾನೇಜರ್ ರವಿ, ಜಿಲ್ಲಾ ಖಜಾಂಚಿ ಶಿವಲಿಂಗಪ್ಪ, ಅಧ್ಯಕ್ಷ ಕರಿಬಸಪ್ಪ ಎನ್ ಎಂ., ಕಾರ್ಯದರ್ಶಿ ಗದಿಗೆಪ್ಪ.ಎಂ., ತಾಲ್ಲೂಕು ಘಟಕದ ಪದಾಧಿಕಾರಿಗಳಾದ ಈ. ಬಸವರಾಜ., ಪಲ್ಲವಿ ಜಿ.ಎಸ್., ಪಿ.ಎಂ.ನಾಗರಾಜ., ಶೈಲಜಾ ಕೆ.ಜಿ., ರುದ್ರಮ್ಮ ಬಿ.ಜಿ., ಶಿವಕುಮಾರ.ಜಿ., ಸುಧಾ ಟಿ.ಎಂ., ಶಿಕ್ಷಕರಾದ ಅಂಗಡಿ ಶಾಂತಪ್ಪ, ಹರೀಶ್, ಸಿದ್ದಪ್ಪ, ಭರಮಪ್ಪ, ರೇವಣಸಿದ್ದಪ್ಪ, ಚಂದ್ರಶೇಖರಪ್ಪ ಶಕುಂತಲಾ, ಕಲ್ಲೇಶ್, ಶಂಕರಪ್ಪ, ವೆಂಕಟೇಶ್, ತಿಪ್ಪೇಸ್ವಾಮಿ, ರಾಮಚಂದ್ರಪ್ಪ ಹಾಜರಿದ್ದರು.

## ಎಸ್‌ಜೆಜೆಎಂ ಶಾಲೆ : ಸಂಸತ್ ಚುನಾವಣೆ




ದಾವಣಗೆರೆ, ಜು.18- 2022-23 ನೇ ಸಾಲಿನ ಶಾಲಾ ಸಂಸತ್ ಚುನಾವಣೆಯನ್ನು ವಿನೋಬನಗರದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಚುನಾವಣೆ ಅಧಿಕಾರಿಯಾಗಿ ಶಾಲಾ ಮುಖ್ಯೋಪಾಧ್ಯಾಯ ನಾಗರಾಜ್ ಎಸ್. ಕಾರ್ಯನಿರ್ವಹಿಸಿದರು. ಆರ್.ಓ. ಆಗಿ ಶಾಂತಯ್ಯ ಪರಡಿಮಠ, 10ನೇ ತರಗತಿಯ ಅಧಿಕಾರಿಯಾಗಿ ಜಿ.ಎಂ. ಪ್ರಭುದೇವ, 9ನೇ ತರಗತಿಯ ಮತಗಟ್ಟೆ ಅಧಿಕಾರಿಯಾಗಿ ಲಿಂಗರಾಜ್ ಗಾಜಿ, 8ನೇ ನೇ ತರಗತಿಯ ಮತಗಟ್ಟೆ ಅಧಿಕಾರಿಯಾಗಿ ಕೆ.ಪಿ. ರುದ್ರೇಶ್ ಮೂರ್ತಿ ಕಾರ್ಯ ನಿರ್ವಹಿಸಿದರು. ಕೆ. ಹಾಲಪ್ಪ, ಎಚ್.ಬಿ. ಜ್ಯೋತಿ, ಶ್ವೇತ, ಸತ್ಯಸಾಗರ್ ಉಪಸ್ಥಿತರಿದ್ದರು.

ಎಂ.ಎಸ್. ರಾಜಯ್ಯ ಮತ ಎಣಿಕೆಯನ್ನು ನಡೆಸಿಕೊಟ್ಟರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ ಪಲ್ಲವಿ, ಸಹ ಕಾರ್ಯದರ್ಶಿಯಾಗಿ ಪಲ್ಲವಿ, ಸಹ ಕಾರ್ಯದರ್ಶಿಯಾಗಿ ಮೇಘ, ಕ್ರೀಡಾ ಕಾರ್ಯದರ್ಶಿಯಾಗಿ ಮಣಿಕಂಠ, ಶಿಕ್ಷಣ ಕಾರ್ಯದರ್ಶಿಯಾಗಿ ಚೈತ್ರ, ಆರೋಗ್ಯ ಕಾರ್ಯದರ್ಶಿ ಆಕಾಶ್ ಎನ್.ಎಂ. ಪ್ರವಾಸ ಕಾರ್ಯದರ್ಶಿ ಪ್ರೇಮಕುಮಾರ್, ಪರಿಸರ ಕಾರ್ಯದರ್ಶಿ ನಿರಂಜನ, ವಾಚನಾಲಯ ಗಣೇಶ್ ಆಯ್ಕೆಯಾಗಿದ್ದು, ಅವರಿಗೆ ಅಭಿನಂದಿಸಲಾಯಿತು.

# ಸ್ನೇಹಿತರ ಕಷ್ಟಕ್ಕೆ ಸ್ಪಂದಿಸುವುದೇ ಸ್ನೇಹ ಸಮ್ಮಿಲನ

## ಬಾಪೂಜಿ ವಿದ್ಯಾಸಂಸ್ಥೆಯ 90ನೇ ಸಾಲಿನ ಕಾಲೇಜು ಗೆಳೆಯರ ಸ್ನೇಹ ಸಮ್ಮಿಲನದಲ್ಲಿ ಎಸ್ಪಿ ರಿಷ್ಯಂತ್



ದಾವಣಗೆರೆ, ಜು.18- ಸ್ನೇಹಿತನ ಕಷ್ಟಗಳಿಗೆ ಸ್ನೇಹಿತರೆಲ್ಲರೂ ಒಟ್ಟಾಗಿ ಕೈ ಜೋಡಿಸಿ ಸ್ಪಂದಿಸುವುದೇ ನಿಜವಾದ ಸ್ನೇಹ ಬಂಧ, ಸಮ್ಮಿಲನ ಎಂದು ಜಿಲ್ಲಾ ರಕ್ಷಣಾಧಿಕಾರಿ ಸಿ.ಬಿ. ರಿಷ್ಯಂತ್ ಅಭಿಪ್ರಾಯಪಟ್ಟರು.

ನಗರದ ಆಫೀಸರ್ಸ್ ಕ್ಲಬ್‌ನಲ್ಲಿ ಬಾಪೂಜಿ ವಿದ್ಯಾಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದ 1989-90ನೇ ಸಾಲಿನ ವಿದ್ಯಾರ್ಥಿಗಳ ಗೋಲ್ಡನ್ ಮೆಮೋರಿಸ್ ಗ್ರೂಪ್‌ನ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಗೆಳೆತನ ತುಂಬಾ ವಿಶೇಷ ಮತ್ತು ಮಾದರಿಯಾದದ್ದು. ಕಾಲೇಜಿನ ಕಾಲವೇ ಸುವರ್ಣ ಕಾಲ. ಸ್ನೇಹದ ನೆನಪುಗಳು ಚಿನ್ನದಂತೆ. ಅವು ಎಂದಿಗೂ ಸ್ಥಿರ. ಶಾಲೆ ಮತ್ತು ಕಾಲೇಜು ಜೀವನ ಪುನಃ ಮರುಕಳಿಸುವುದಿಲ್ಲ.

ಆದರೆ ಆ ದಿನಗಳಲ್ಲಿನ ಸ್ನೇಹ ಸಂಬಂಧ ನಾವೆಷ್ಟೇ ಎತ್ತರದ ಸ್ಥಾನಕ್ಕೇರಿದರೂ ಪುನಃ ಮರಳಿ ಪಡೆಯಬಹುದಾಗಿದೆ. ಅದಕ್ಕೆ ಬಾಪೂಜಿ ವಿದ್ಯಾಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿಗಳ ಈ ಸ್ನೇಹ ಸಮ್ಮಿಲನವೇ ಸಾಕ್ಷಿ ಎಂದು ತಿಳಿಸಿದರು.

ಕಾರ್ಯಕ್ರಮದ ವಿಶೇಷ ಆಹ್ವಾನಿತರಾಗಿದ್ದ ಹಾಸ್ಯ ಕಲಾವಿದ ನರಸಿಂಹ ಜೋಷಿ ಅವರು ವಿವಿಧ ರಾಜಕೀಯ ಮುಖಂಡರ ಮಾತಿನ ಅನುಕರಣೆ ಮತ್ತು ರಾಜ್ಯದ ವಿವಿಧ ಭಾಗಗಳ ಭಾಷೆಗಳ ಧಾಟಿಯನ್ನು ಹಾಸ್ಯದ ಮೂಲಕ ಪ್ರದರ್ಶಿಸಿ ನೆರೆದಿದ್ದವರನ್ನು ನಗೆಗಡಲಲ್ಲಿ ತೇಲಿಸಿದರು.

ಇದೇ ವೇಳೆ ಗುರುಗಳಾದ ಬಿಇಎ ಶಿಕ್ಷಣ ಮಹಾವಿದ್ಯಾಲಯದ ವಿಶ್ರಾಂತ ಪ್ರಾಂಶುಪಾಲ ಡಾ. ಪಿ. ಬಸವಕುಮಾರಯ್ಯ, ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಸಚಿವೆ ಡಾ. ಟಿ.ಎಂ. ಗೀತಾ, ಬಿಇಎ ಶಿಕ್ಷಣ ಮಹಾವಿದ್ಯಾಲಯದ ವಿಶ್ರಾಂತ ಪ್ರಾಂಶುಪಾಲ ಎಸ್. ರಾಜಶೇಖರ್, ಬಿಇಎ ಶಿಕ್ಷಣ ಮಹಾವಿದ್ಯಾಲಯದ ವಿಶ್ರಾಂತ ಪ್ರಾಂಶುಪಾಲರಾದ ಡಾ. ಸಿ.ಆರ್. ಶಕೀಲಾ ಬಾನು, ವಿಶ್ರಾಂತ ದೈಹಿಕ ನಿರ್ದೇಶಕ ಎಸ್. ಓಂಕಾರಪ್ಪ ಅವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

# ಶಿವ ಸೊಸೈಟಿ ಶಾಖಾ ಕಚೇರಿ ಕಟ್ಟಡಕ್ಕೆ ಗುದ್ದಲಿ ಪೂಜೆ



ಸಾಸ್ವೆಹಳ್ಳಿ,ಜು.18- ಸಹಕಾರ ತತ್ವ ಅನುಸರಿಸಿದರೆ, ನಾವು ಬೆಳೆಯುತ್ತೇವೆ ನಮ್ಮೊಂದಿಗೆ ಇರುವವರೂ ಬೆಳೆಯುತ್ತಾರೆ ಎಂದು ಶಿವ ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ.ಸಿ ನಾಗೇಂದ್ರಪ್ಪ ಹೇಳಿದರು.

ಸೊಸೈಟಿಯ ಸಾಸ್ವೆಹಳ್ಳಿ ಶಾಖೆಯ ನೂತನ ಕಟ್ಟಡದ ಗುದ್ದಲಿ ಪೂಜೆ ನೆರೆವೇರಿಸಿ ಅವರು ಮಾತನಾಡಿದರು.

ಕೆಲವೇ ಮಂದಿಯಿಂದ ಪ್ರಾರಂಭವಾದ ಶಾಖೆಯು ಮೊದಲು ಹೊನ್ನಾಳಿ ನಂತರ ಸುರಹೊನ್ನೆಯಲ್ಲಿ ಸ್ವಂತ ಕಟ್ಟಡವನ್ನು ಹೊಂದಿದೆ. ಅದೇ ರೀತಿ ಸಾಸ್ವೆಹಳ್ಳಿಯಲ್ಲಿಯೂ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಹಂತಕ್ಕೆ ಶಾಖೆಯು ಲಾಭಾಂಶ ತಂದಿದೆ. ಕುಂದೂರಿನ ಲ್ಲಿಯೂ ಸಹ ಸ್ವಂತ ಕಟ್ಟಡ ನಿರ್ಮಾಣಕ್ಕೆ ನಿವೇಶ ನವನ್ನು ಖರೀದಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಡಿ.ಎಸ್ ಸುರೇಂದ್ರ ಗೌಡ, ಉಪಾಧ್ಯಕ್ಷ ವಿಕಾಸ್, ನಿರ್ದೇಶಕರುಗಳಾದ ಪಿ.ಬಿ. ಶೈಲೇಶ್, ಆರ್.ಸಿ ಶಂಕರಗೌಡ, ಕೆ.ಶಿವಕುಮಾರ್, ಬಸವಲಿಂಗಪ್ಪ, ನಾಗರಾಜಪ್ಪ, ಕಾಂತರಾಜ್, ಎಂ.ಜಿ. ಬಸವರಾಜಪ್ಪ, ಸಿದ್ದೇಶ್ವರಪ್ಪ, ಶಕುಂತಲಮ್ಮ ಹಾಗೂ ಸಾಧು ವೀರಶೈವ ಸಮಾಜದ ಅವಳಿ ತಾಲ್ಲೂಕಿನ ಅಧ್ಯಕ್ಷರುಗಳಾದ ಕೆ.ಎಸ್ ಹಾಲಪ್ಪ, ಜಿ.ಶಿವಪ್ಪ, ಮುಖಂಡ ಎಚ್.ಎ ಗದ್ದಿಗೇಶ್, ಬ್ಯಾಂಕ್ ಕಾರ್ಯನಿರ್ವಹಣಾಧಿಕಾರಿ ರುದ್ರೇಶ್ ಹಾಗೂ ಸಿಬ್ಬಂದಿ ಇದ್ದರು.

## ಚುನಾವಣಾ ವ್ಯವಸ್ಥೆ : ನಗರದಲ್ಲಿ ಇಂದು ಸಂವಾದ

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.30ರವರೆಗೆ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಇವರ ಉಪಸ್ಥಿತಿಯಲ್ಲಿ 'ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ' ಕುರಿತ ಸಂವಾದ ಜರುಗಲಿದೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

## ಜಿ.ಎಂ. ಹಾಲಮ್ಮ ಪದವಿ ಪೂರ್ವ ಕಾಲೇಜಿನಲ್ಲಿ ಅತ್ಯುತ್ತಮ ಶಾಲಾ ಪ್ರಶಸ್ತಿ



ದಾವಣಗೆರೆ, ಜು. 18- ಬೆಂಗಳೂರಿನ ಎಂಪವರ್ಡ್ ಎಜು ಸಲ್ಯೂಷನ್ ಮತ್ತು ಡೈನೋಸ್ ಕಂಪನಿಗಳ ಸಹಯೋಗದಲ್ಲಿ ನಗರದ ಶ್ರೀಮತಿ ಜಿ.ಎಂ. ಹಾಲಮ್ಮ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಅತ್ಯುತ್ತಮ ಶಾಲಾ ಪ್ರಶಸ್ತಿ ಮತ್ತು ಕ್ರಿಯಾತ್ಮಕ ವಿಷಯಗಳೊಂದಿಗೆ ಶಿಕ್ಷಣ ಸಬಲೀಕರಣಕ್ಕೆ ಕಾರಣವಾದ ಶಾಲಾ ಮುಖ್ಯಸ್ಥರುಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶೇ.100 ಫಲಿತಾಂಶ ಪಡೆದ ಶಾಲೆಗಳಿಗೆ ಅತ್ಯುತ್ತಮ ಶಾಲಾ ಪ್ರಶಸ್ತಿ ನೀಡಿ ಪ್ರಾಂಶುಪಾಲರುಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯ ನಂತರ 'ಟುಡೇ ಅಂಡ್ ಟುಮಾರೋ' ವಿಷಯ ಕುರಿತು ನುರಿತ ತಜ್ಞರಿಂದ ಉಪನ್ಯಾಸ ನೀಡಲಾಯಿತು. ಕಾಲೇಜಿನ ಪ್ರಾಂಶುಪಾಲ ಡಾ. ವಿ. ವೆಂಕಟರಾಯುಡು ಅತ್ಯುತ್ತಮ ಶಿಕ್ಷಣ, ಶಿಕ್ಷಣ ಸಬಲೀಕರಣ ಮತ್ತು ಕ್ರಿಯಾತ್ಮಕ ಬೋಧನೆ ಬಗ್ಗೆ ಉಪನ್ಯಾಸ ನೀಡಿದರು.

## ಅರಸಾಪುರ : ಮುಖ್ಯೋಪಾಧ್ಯಾಯ ಮೆಣಸಿನಕಾಯಿ ಅವರಿಗೆ ಬೀಳ್ಕೊಡುಗೆ



ದಾವಣಗೆರೆ, ಜು. 18- ತಾಲ್ಲೂಕಿನ ಅರಸಾಪುರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಮಹಾರುದ್ರಪ್ಪ ಮೆಣಸಿನಕಾಯಿ ಅವರು ವಯೋ ನಿವೃತ್ತಿ ಹೊಂದಿದ್ದು, ಶಾಲೆಯಲ್ಲಿ ಬೀಳ್ಕೊಡುಗೆ ಸಮಾರಂಭ ನಡೆಯಿತು.

ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ (ಅಭಿವೃದ್ಧಿ) ಹೆಚ್.ಕೆ. ಲಿಂಗರಾಜು, ಎಸ್‌ಡಿಎಂಸಿ ಅಧ್ಯಕ್ಷ ರಮೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಸುಜಾತ, ಕಾರ್ಯದರ್ಶಿ ಕೆ.ಹೆಚ್. ನಾಗರಾಜ್, ಉಪಾಧ್ಯಕ್ಷರಾದ ಪದ್ಮಾ, ಅಣ್ಣಪ್ಪ, ಸಿಆರ್‌ಪಿ ತಿಪ್ಪೇಸ್ವಾಮಿ, ರವಿಶಂಕರ್ ಸೇರಿದಂತೆ ಶಾಲೆಯ ಸಹ ಶಿಕ್ಷಕರಾದ ಶಾರದ ಪಿ. ಹೆಬ್ಬಾರಿ, ಎಲ್. ವಿನುತಾ, ಎಂ. ನಾಗರಾಜ್ ಉಪಸ್ಥಿತರಿದ್ದರು.

## ಚಳ್ಳಕೆರೆ : ಸಂಭ್ರಮದ ಗುರುಪೂರ್ಣಿಮೆ




ಚಳ್ಳಕೆರೆ, ಜು.18- ನಗರದ ಪಾವಗಡ ರಸ್ತೆಯಲ್ಲಿರುವ ಶ್ರೀ ಸಾಯಿಬಾಬಾ ದೇವಾಲಯದಲ್ಲಿ ಗುರು ಪೂರ್ಣಿಮೆಯನ್ನು ಭಕ್ತರು ಶ್ರದ್ಧಾ - ಭಕ್ತಿಯಿಂದ ಆಚರಿಸಿದರು. ಶಿರಡಿ ಸಾಯಿಬಾಬಾ ಅವರಿಗೆ ವಿಶೇಷ ಅಭಿಷೇಕ ಮಾಡಲಾಯಿತು. ಟ್ರಸ್ಟ್‌ನ ಅಧ್ಯಕ್ಷ ಬಿ.ಸಿ.ಸಂಜೀವ ಮೂರ್ತಿ, ಉಪಾಧ್ಯಕ್ಷ ಕೆ.ಎಂ.ಜಗದೀಶ್, ಗ್ರಾಮ ಪಂಚಾಯ್ತಿ ಸದಸ್ಯ ಬಿ.ಸಿ.ಸತೀಶ್, ತಹಶೀಲ್ದಾರ್ ಎನ್. ರಘು ಮೂರ್ತಿ ಮತ್ತು ಚಿದಾನಂದ ಮೂರ್ತಿ, ಬಿ.ಸಿ.ವೆಂಕಟೇಶ್ ಮೂರ್ತಿ ಹಾಗು ಇತರರು ಹಾಜರಿದ್ದರು.

# ದಾವಣಗೆರೆಯ 'ಕಪ್ಪುನೆಲದ ಕೆಂಪುಗಾಥೆ' ರೋಮಾಂಚಕ ಕಥನ

ನಾನು ದಾವಣಗೆರೆಗೆ ನಾಲ್ಕೈದು ಸಲ ಹೋಗಿರಬಹುದು. ಎಂಬತ್ತರ ದಶಕದ ಆರಂಭದಲ್ಲಿ ಮೊದಲ ಸಲ ಆಗ ನಾನಿದ್ದ ಪತ್ರಿಕೆಯ ವರದಿಯೊಂದಕ್ಕೆ ಸಂಬಂಧಿಸಿದಂತೆ ಹೋಗಿದ್ದೆ. ಆಗ ನನಗೆ ದಾವಣಗೆರೆ ಎಂದರೆ ಪಂಪಾಪತಿ ಮಾತ್ರ. ಅವರ ಮನೆಗೆ ಹೋಗಿ ಭೇಟಿಯಾಗಿದ್ದೆ. ಸಾಮಾನ್ಯ ಮನೆ. ಪೀಠೋಪಕರಣಗಳೂ ಅಷ್ಟೇನೂ ಇರಲಿಲ್ಲ ಎಂಬ ಮಸುಕು ಮಸುಕಾದ ನೆನಪು. ಅದು ಬಿಟ್ಟರೆ ರಾಜ್ಯ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆ ಸಮೀಕ್ಷೆಗಾಗಿ ಹೋಗಿದ್ದೆ. ಒಮ್ಮೆ ಸಹೋದ್ಯೋಗಿಯೊಬ್ಬರ ಮದುವೆಗೆ, ಇನ್ನೊಮ್ಮೆ ಲಂಕೇಶ್ ಮತ್ತು ಡಿ.ಆರ್. ನೆನಪು ಕುರಿತ ಕಾರ್ಯಕ್ರಮಕ್ಕೆ ಹೋಗಿದ್ದೆ. ಮದುವೆಗೆ ಒಂದು ದಿನ ಮೊದಲೇ ಹೋಗಿದ್ದರಿಂದ ಸಮಯ ಕಳೆಯುವುದೇ ಅದೆಷ್ಟು ಕಷ್ಟವಾಯಿತೆಂದರೆ ಹೇಳಲಸಾಧ್ಯವಾಗುವಷ್ಟು ಬೋರ್ ಹೊಡೆಸಿತು ದಾವಣಗೆರೆ. ಬೆಣ್ಣೆದೋಸೆ ಖ್ಯಾತಿಯಿಂದಾಗಿ ಹುಡುಕಿಕೊಂಡು ಹೋದರೆ ಒಂದೇ ಬೀದಿಯಲ್ಲಿ ಸಾಲು - ಸಾಲಾಗಿ ಬೆಣ್ಣೆ ದೋಸೆ ಹೋಟೆಲ್‌ಗಳು ಸಿಕ್ಕಿದ್ದವು. ಅದರಲ್ಲಿ ಒಂದು ಹೋಟೆಲ್‌ಗೆ ಹೋದರೆ ಬೆಂಗಳೂರಿನ ಒಂದೆರಡು ದಾವಣಗೆರೆ ಬೆಣ್ಣೆ ದೋಸೆ ಹೋಟೆಲ್‌ಗಳು ಅದಕ್ಕಿಂತ ಅಥವಾ ಅಷ್ಟೇ ಚೆನ್ನಾಗಿ ಬೆಣ್ಣೆ ದೋಸೆ ಮಾಡುತ್ತಿವೆ ಅನ್ನಿಸಿತ್ತು. ನಗರದಲ್ಲಿ ಹೋಗಿ ನೋಡಲೇ ಬೇಕಾದ ಸ್ಥಳಗಳಿಲ್ಲ. ಯಾವುದೇ ಅತಿ ಮುಖ್ಯ ಐತಿಹಾಸಿಕ ಹಿನ್ನೆಲೆಯೂ ಇಲ್ಲದ ಊರು ದಾವಣಗೆರೆ.

ಹೀಗಾಗಿ ಅದು ಮತ್ತೆ ಮತ್ತೆ ಹೋಗಲೇ ಬೇಕಾದ ಸ್ಥಳವೆಂದು ನನಗೆ ಅನ್ನಿಸಲೇ ಇಲ್ಲ. ಇಂಥ ದಾವಣಗೆರೆಯ ಪ್ರಸ್ತಾಪ ಕಂಡಿದ್ದು ಫೇಸ್ ಬುಕ್ ನಲ್ಲಿ. ನಾನು ಈವರೆಗೂ ಭೇಟಿಯಾಗದ ಇಮ್ತಿಯಾಜ್ ಹುಸೇನ್ ರಾಜ ಕೀಯ ಕುರಿತು ಒಂದೆರಡು ವಾಕ್ಯಗಳಲ್ಲಿ ತುಂಬಾ ಪ್ರಬುದ್ಧವಾಗಿ, ಕಟುವಾಗಿ ಬರೆಯುತ್ತಿದ್ದುದನ್ನು ಗಮನಿಸಿದ್ದೆ. ಅವರ ಹಿನ್ನೆಲೆ ಏನೆಂದು ನನಗೆ ಗೊತ್ತಿರಲಿಲ್ಲ. ಅವರ ರಾಜಕೀಯ ಪ್ರಜ್ಞೆ ಬಗ್ಗೆ ನನಗೆ ಅಪಾರ ಕುತೂಹಲ ಹುಟ್ಟಿತ್ತು. ನಾನು ಲೈಕ್ ಒತ್ತುವುದು, ಪ್ರತಿಕ್ರಿಯಿಸುವುದು ನಡೆಯುತ್ತಲೇ ಇತ್ತು. ಅವರ ರಾಜಕೀಯ ಪ್ರಬುದ್ಧತೆ ಬಗ್ಗೆ ನಾನೇ ಒಂದೆರಡು ಮಾತು ಬರೆಯಬೇಕೆನ್ನಿಸಿ ಈಗ ಆಗ ಅಂತ ಮುಂದೂಡುತ್ತಲೇ ಹೋಗಿ ಕೊನೆಗೂ ಈಗ ಸಾಧ್ಯವಾಯಿತು. ಅವರು ಬರೆದ ಕಪ್ಪು ನೆಲದ ಕೆಂಪುಗಾಥೆ ಎಂಬ ಪುಸ್ತಕ ನನ್ನ ಓದಿಗಾಗಿ ನೆನಪಿಟ್ಟು ಪ್ರೀತಿಯಿಂದ ಕಳಿಸಿಕೊಟ್ಟಿದ್ದಾರೆ.

ಆ ಪುಸ್ತಕ ಕೈಗೆತ್ತಿಕೊಂಡಾ ಗಲೇ ಇಮ್ತಿಯಾಜ್ ಕಮ್ಯುನಿಸ್ಟ್ ಹಿನ್ನೆಲೆಯವರೆಂದೂ, ಅವರ ಪ್ರಖರ ವೈಚಾರಿಕತೆಗೆ ಕಮ್ಯುನಿಸ್ಟ್ ಚಿಂತನೆಯೇ ಕಾರಣವೆಂದೂ ತಿಳಿಯಿತು. ಈ ಪುಸ್ತಕವನ್ನು ನಾನೊಮ್ಮೆ ಭೇಟಿಯಾಗಿದ್ದ ಕಾಮ್ರೆಡ್ ಪಂಪಾಪತಿ ಮತ್ತು ಅವರೊಂದಿಗೆ ಹೆಗಲುಕೊಟ್ಟು ಹುತಾತ್ಮರಾದ ಎಲ್ಲ ನಾಯಕರಿಗೆ ಇಮ್ತಿಯಾಜ್ ಅರ್ಪಿಸಿದ್ದಾರೆ. ಪುಸ್ತಕಕ್ಕೆ ಹೊಸತು ಮಾಸ ಪತ್ರಿಕೆಯ ಸಂಪಾದಕ ಡಾ.ಸಿದ್ದನಗೌಡ ಪಾಟೀಲರ ಮುನ್ನುಡಿ ಮತ್ತು ಮಹತ್ವದ ಲೇಖಕ ರಹಮತ್ ತರೀಕೆರೆ ಅವರ ಬೆನ್ನುಡಿ ಇದೆ.ಪುಸ್ತಕ ಪ್ರವೇಶಕ್ಕೆ ಸಿದ್ದನಗೌಡ ಪಾಟೀಲರ ಅಮೂಲ್ಯ ಮುನ್ನುಡಿ ನೆರವಾಗಿದೆ. 'ಬಂಡವಾಳದ ಮೂಲದಿಂದ ನೋಡುವವರ ಕಣ್ಣಿಗೆ ದಾವಣಗೆರೆ ಮ್ಯಾಂಚೆಸ್ಟರ್ ನಗರಕ್ಕೆ ಸಂಕೇತವಾದರೆ ಬೆವರಿನ ಮೂಲಕ ನೋಡುವವರಿಗೆ ಈ ನಗರ ಮಾಸ್ಕೋ ನಗರಕ್ಕೆ ಸಂಕೇತವಾಗಿದೆ. ಮಾಸ್ಕೋ ಎನ್ನುವುದು ದುಡಿವ ವರ್ಗದ ಹೋರಾಟ, ಕ್ರಾಂತಿ ಮತ್ತು ಆಡಳಿತಕ್ಕೆ ಸಂಕೇತವಾದದ್ದು' ಎನ್ನುತ್ತಾರೆ ಸಿದ್ದನಗೌಡರು. ಈ ನೆಲೆಯಲ್ಲೇ ಪುಸ್ತಕ ಓದುತ್ತಾ ಹೋದರೆ ಮೇಲ್ನೈಯಲ್ಲಿ ನಾನು ಕಾಣದೇ ನಿರಾಸೆ ಹೊಂದಿದ್ದ ದಾವಣಗೆರೆ ಬೆವರಿನ ಜತೆಗೆ ರಕ್ತವನ್ನೂ ಹರಿಸಿದ್ದ



ಕಾರ್ಮಿಕರ ಮಹಾನ್ ಹೋರಾಟದ ಕೆಂಪು ನೆಲವಾಗಿ ಗೋಚರಿಸಿತು. ಕಾರ್ಮಿಕರ ಹೋರಾಟದ ಕಥನವನ್ನು ಇಮ್ತಿಯಾಜ್ ಮೈಜುಮ್ಮೆನ್ನಿಸುವಂತೆ ಬರೆದಿದ್ದಾರೆ. 1970 ರ ಏಪ್ರಿಲ್ ಒಂದರಂದು ಕಾರ್ಮಿಕರ ಎರಡು ಬಣಗಳ ನಡುವಿನ ಜಗಳದ ಮೂಲಕವೇ ಆರಂಭವಾಗುವ ಕಥನ ಕಾರ್ಮಿಕರ ಒಡಕಿಗೆ ಉದ್ಯಮಿಗಳು ನಡೆಸಿದ ಸಂಚನ್ನೂ ಬಯಲು ಮಾಡುತ್ತದೆ.

ದಾವಣಗೆರೆ ಕರ್ನಾಟಕದ ಮ್ಯಾಂಚೆಸ್ಟರ್ ಅಥವಾ ಮಾಸ್ಕೋ ಎಂದು ಕರೆಸಿಕೊಳ್ಳುವುದಕ್ಕೆ ಕಾರಣವೇನೆಂದು ನೀವು ಈಗಾಗಲೇ ಊಹಿಸಿರುತ್ತೀರಿ. ಒಂದು ಕಾಲದಲ್ಲಿ ಹತ್ತಿ ಗಿರಣಿ ಮತ್ತು ಜವಳಿ ಉದ್ಯಮದಿಂದ ದಾವಣಗೆರೆ ಗಮನ ಸೆಳೆದಿತ್ತು. ಈಗ ಅದೆಲ್ಲ ನೆನಪು ಮಾತ್ರ.

ದಾವಣಗೆರೆ ಕುರಿತ ನೀವೆಂದೂ ಕೇಳರಿಯದ ಸ್ವಾರಸ್ಯಕರ ಸಂಗತಿಗಳನ್ನೂ ಲೇಖಕರು ದಾಖಲಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಮರಾಠರು, ಪೇಶ್ವೆಗಳು ಮತ್ತಿತರೆ ಜನಾಂಗಗಳ ರಾಜರ ನಡುವಿನ ಕಾದಾಟಗಳಿಂದ ಬೇಸತ್ತು ಅನೇಕ ಮಂದಿ ಕರ್ನಾಟಕದತ್ತ ಬಂದರೆಂದೂ, ಹಾಗೆ ಬಂದವರಲ್ಲಿ ಒಂದು ಗುಂಪು ದಾವಣಗೆರೆಯಲ್ಲಿ ನೆಲೆಸಿತೆಂದೂ ಹೇಳುತ್ತಾರೆ. ವಿಶಾಲ ಕೆರೆ ಅಂಗಳದಲ್ಲೇ ತಮ್ಮೊಂದಿಗೆ ಕರೆ ತಂದಿದ್ದ ಜಾನುವಾರುಗಳ ಮಾರಾಟದಲ್ಲಿ ತೊಡಗಿದರಂತೆ. ಹಾಗಾಗಿಯೇ ಮರಾಠಿಗರು ಈ ಊರಿನ ಮೂಲನಿವಾಸಿಗಳೆಂದು ಹೇಳಲಡ್ಡಿಯಿಲ್ಲ ಎನ್ನುತ್ತಾರೆ ಇಮ್ತಿಯಾಜ್.

ಯಾವಾಗ ದಾವಣಗೆರೆ ಶೇಂಗಾ ಹತ್ತಿಯ ಕಣಜವಾಯಿತೋ ಅಲ್ಲಿಂದಲೇ ಅದರ ಚಹರೆ ಬದಲಾಯಿತು. ಶೇಂಗಾ ಎಣ್ಣೆ ಕಾರ್ಖಾನೆ, ಹತ್ತಿ ಗಿರಣಿಗಳ ಸ್ಥಾಪನೆಯೂ ಆಯಿತು. ಮೊತ್ತ ಮೊದಲಿಗೆ ನೆರೆಯ ಹರಿಹರ ತಾಲ್ಲೂಕಿನ ರಾಜನಹಳ್ಳಿಯ ಸಿರಿವಂತ ಶೆಟ್ಟರ ಕುಟುಂಬವೊಂದು ದಾವಣಗೆರೆಯಲ್ಲಿ ಹತ್ತಿ ನೂಲು ಮತ್ತು ಬಟ್ಟೆ ತಯಾರಿಸುವ ಕಾರ್ಖಾನೆ ಸ್ಥಾಪಿಸಿತಂತೆ. ಈ ಕಾರ್ಖಾನೆ ಯಶಸ್ಸು ಕಂಡ ಹಲವು ಕುಟುಂಬಗಳು ಅತ್ತ ಗಮನ ಹರಿಸಿದವು. ಕೃಷಿ ಮಾರುಕಟ್ಟೆ ಬಹುತೇಕ ಲಿಂಗಾಯತರ ಒಂದು ಬಣದ ಅಧೀನದಲ್ಲಿದ್ದಿದ್ದರಿಂದ ವ್ಯಾಪಾರವೆಲ್ಲ ಅವರ ಹಿಡಿತದಲ್ಲೇ ಇತ್ತು. ಶೆಟ್ಟರ ಕುಟುಂಬದ ಯಶಸ್ಸು ಕಂಡ ಲಿಂಗಾಯತ ವ್ಯಾಪಾರಿಗಳೂ ಜವಳಿ ಉದ್ಯಮದತ್ತ ಮುಖ ಮಾಡಿದರು. ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಇತರೆಡೆಗಳಿಂದ ದಾವಣಗೆರೆಗೆ ವಲಸೆ ಬರುವವರ ಸಂಖ್ಯೆಯೂ ಹೆಚ್ಚಾಗಿ ಒಂದು ರೀತಿಯಲ್ಲಿ ವಲಸಿಗರ ಊರಾಯಿತು.

ಮೈಸೂರು ರಾಜರ ಪ್ರಭಾವ ದಾವಣಗೆರೆಯ ಮೇಲೆ ಸಾಕಷ್ಟಿದೆ.ಮೈಸೂರು ದೊರೆಗಳು ಪ್ರವಾಸ ಬಂದಾಗಲೆಲ್ಲ ಈ ಉದ್ಯಮಿಗಳ ಮೇಲೆ ಪ್ರಭಾವ ಬೀರಿ, ಶಾಲಾ-ಕಾಲೇಜುಗಳ ಸ್ಥಾಪನೆಗೆ ದೇಣಿಗೆ ಒದಗಿಸಿ ಶಿಕ್ಷಣ ಕ್ಷೇತ್ರದಲ್ಲೂ ದಾವಣಗೆರೆ ಗಮನ ಸೆಳೆಯುವಂ ತಾಯಿತು. ಉದ್ಯಮಿಗಳು ತಮ್ಮ ಉದಾರತೆ ಯಿಂದಾಗಿ ಧರ್ಮ ಪ್ರವರ್ತಕ, ಧರ್ಮರತ್ನಾಕರ, ಧರ್ಮ ಪ್ರಕಾಶ ಮೊದಲಾದ ಬಿರುದು ಬಾವಲಿಗಳಿಗೆ ಪಾತ್ರರಾದರು.



**ಇಮ್ತಿಯಾಜ್ ಹುಸೇನ್ ಅವರ ರಚನೆಯ ಪುಸ್ತಕ ವಿಮರ್ಶೆ**

ಮೈಸೂರು ಅರಸರ ಪ್ರಭಾವ ಇದ್ದ ಕಾರಣದಿಂದಲೇ ದಾವಣಗೆರೆಯಲ್ಲಿ ಕೆ. ಆರ್. ಮಾರುಕಟ್ಟೆ, ಕೆ. ಆರ್. ರಸ್ತೆ, ನರಸರಾಜಪೇಟೆ, ಮಹಾರಾಜಪೇಟೆ, ಪ್ರಿನ್ಸ್ ಜಯಚಾಮರಾಜೇಂದ್ರ ಬಡಾವಣೆ, ಕೃಷ್ಣರಾಜೇಂದ್ರ ಗ್ರಂಥಾಲಯ ಎಂಬ ಹೆಸರುಗಳಿವೆ.

ಇದು ದಾವಣಗೆರೆಯ ಹಿನ್ನೆಲೆಯಾದರೆ ಇನ್ನೊಂದು ಬಹು ಮುಖ್ಯ ಮುಖ ಕಾರ್ಮಿಕ ಸಂಘಟನೆ ಮತ್ತು ಅದರ ಹೋರಾಟ. ಹಾಗೇ ಈ ನೆಲದ ರಾಜಕಾರಣ. ಉದ್ಯಮಗಳ ಮಾಲೀಕರ ಅಹಂಕಾರವೇ ಅದೆಷ್ಟೋ ಉದ್ಯಮಗಳು ಮುಚ್ಚಿಹೋಗಲು ಕಾರಣವಾದರೂ ಅದರೆಲ್ಲ ಹೊಣೆಯನ್ನು ಕಾರ್ಮಿಕರಿಗೆ ಹೊರಿಸಿ ಬೀದಿ ಪಾಲು ಮಾಡಿದ ಕಪ್ಪು ಕಥಾನಕವೂ ಈ ಕೃತಿಯಲ್ಲಿ ಅಡಗಿದೆ. ದಾವಣಗೆರೆ ಕಾರ್ಮಿಕ ಹೋರಾಟ ಕರ್ನಾಟಕದ ಆಧುನಿಕ ಇತಿಹಾಸದ ಬಹುಮುಖ್ಯ ಅಧ್ಯಾಯ. ರಾಜಕಾರಣಕ್ಕಿಳಿದ ಉದ್ಯಮಿಗಳಿಂದ ಶೋಷಣೆ ಶುರುವಾಗಿ ಕಾರ್ಮಿಕರ ಬದುಕು ಅದೆಂಥ ನರಕ ಸದೃಶ ಸಂಕಷ್ಟಕ್ಕೆ ಸಿಲುಕಿತೆಂದು ತಿಳಿಯುವ ಸಲುವಾಗಿಯಾದರೂ ಈ ಕೃತಿಯನ್ನು ಕನ್ನಡಿಗರು ಓದಲೇಬೇಕು. ಒಂದೊಂದು ಅಧ್ಯಾಯವೂ ರೋಮಾಂಚನ ಹುಟ್ಟಿಸು ವಂತೆ, ನಮ್ಮ ಕಣ್ಣೆದುರೇ ನಡೆದಂತೆ ಬರೆದ ಇಮ್ತಿಯಾಜ್ ಹುಸೇನ್ ಅಭಿನಂದನಾರ್ಹರು.

**-ಟಿ.ಕೆ. ತ್ಯಾಗರಾಜ್,**
ಹಿರಿಯ ಪತ್ರಕರ್ತರು, ಬೆಂಗಳೂರು.

## ಭಿಕ್ಷಾಟನೆ ನಿಷೇಧ ಜಾರಿ

**(1ನೇ ಪುಟದಿಂದ)** ನಿರ್ಮೂಲನೆಗೆ ಸಂಬಂಧಿಸಿದ ಇಲಾಖೆಗಳು ಸಂಪೂರ್ಣವಾಗಿ ಸಹಕಾರ ನೀಡಲಿವೆ ಎಂದರು.

ಇಲಾಖೆ ಅಧಿಕಾರಿಗಳೊಂದಿಗೆ ಈಗಾಗಲೇ ಐದು ಬಾರಿ ಈ ಕುರಿತು ಚರ್ಚೆ ನಡೆಸಿದ್ದು, ಭಿಕ್ಷಾಟನೆ ವ್ಯಾಪಕವಾಗಿರುವುದನ್ನು ಗುರುತಿಸಲಾಗಿದೆ. ಈಗಾಗಲೇ ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಭಿಕ್ಷಾಟನೆಯಲ್ಲಿ ತೊಡಗಿದ್ದ 101 ಮಕ್ಕಳನ್ನು ವಶಕ್ಕೆ ಪಡೆದಿದ್ದು, ಅವರಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಅಲ್ಲದೆ ಕಾನೂನು ಸೇವಾ ಪ್ರಾಧಿಕಾರದಿಂದ 720 ಮಕ್ಕಳು ಭಿಕ್ಷಾಟನೆಯಲ್ಲಿ ತೊಡಗಿರುವ ಬಗ್ಗೆ ವರದಿ ನೀಡಿದ್ದಾರೆ. ಈ ಎಲ್ಲ ಮಾಹಿತಿಯನ್ನಾಧರಿಸಿ ಸೂಕ್ತ ಕ್ರಮ ವಹಿಸಲಾಗುವುದು ಎಂದು ಸಚಿವರು ತಿಳಿಸಿದರು.

ಭಿಕ್ಷಾಟನೆ ಸಂಬಂಧ ವ್ಯಾಪಕವಾಗಿರುವುದನ್ನು ಗಮನಿಸಲಾಗಿದ್ದು ಭಿಕ್ಷಾಟನೆ ನಿಯಂತ್ರಣಕ್ಕೆ ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಮಕ್ಕಳನ್ನು ಭಿಕ್ಷಾಟನೆಗಾಗಿ ಬೀದಿಗೆ ಬಿಡುವವರ ವಿರುದ್ಧವೂ ಕೇಸು ದಾಖಲಿಸಲಾಗುವುದು ಎಂದವರು ಎಚ್ಚರಿಸಿದರು.

ಅಲ್ಲದೆ ವಶಕ್ಕೆ ಪಡೆದ ಮಕ್ಕಳು ಹಾಗೂ ತಾಯಿಯರಿಗೆ ಪುನರ್ವಸತಿ ಕಲ್ಪಿಸಲು ಇಲಾಖೆಯಿಂದ ಪ್ರತ್ಯೇಕ ಕಟ್ಟಡವೊಂದನ್ನು ವ್ಯವಸ್ಥೆ ಮಾಡಲಾಗುವುದು. ಇದಕ್ಕಾಗಿ ಯಾವುದೇ ಹಣಕಾಸಿನ ಕೊರತೆ ಇರುವುದಿಲ್ಲ ಎಂದರು.

ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಈಗಾಗಲೇ 'ಈ ಗುರುತು' ಎಂಬ ಮೊಬೈಲ್ ಆಪ್ ಬಿಡುಗಡೆ ಮಾಡಿದ್ದು ಮಕ್ಕಳು ಭಿಕ್ಷಾಟನೆಯಲ್ಲಿ ತೊಡಗಿರುವ ಬಗ್ಗೆ ಕಂಡುಬಂದಲ್ಲಿ ಸಾರ್ವಜನಿಕರು ತಕ್ಷಣ 1098 ಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದರು.

## ಸ್ಪೇನ್‌ನಲ್ಲಿ ನೂರಾರು ಸಾವು

**(1ನೇ ಪುಟದಿಂದ)** ಬ್ರಿಟನ್‌ನಲ್ಲಿ ತಾಪಮಾನ 40 ಡಿಗ್ರಿ ಸೆಲ್ಸಿಯಸ್‌ವರೆಗೆ ತಲುಪಿದೆ. ಇದು ದಾಖಲೆ ಮಟ್ಟವಾಗಿದೆ. ಮುಂದಿನ ದಿನಗಳಲ್ಲಿ ಬಿಸಿಲ ಬೇಗೆ ಇನ್ನಷ್ಟು ಹೆಚ್ಚಾಗುವ ಕಳವಳ ಇದೆ.

ಫ್ರಾನ್ಸ್‌ನಲ್ಲಿ ತಾಪಮಾನ ಹೆಚ್ಚಾಗುವ ಜೊತೆಗೆ ಬಿಸಿಗಾಳಿಯ ಪ್ರಕೋಪದ ಎಚ್ಚರಿಕೆಯನ್ನೂ ನೀಡಲಾಗಿದೆ. ಕಾಡ್ಗಿಚ್ಚಿನ ಕಾರಣದಿಂದಾಗಿ ಕೆಲ ನಗರಗಳನ್ನು ತೆರವುಗೊಳಿಸಲಾಗಿದೆ. ಇದುವರೆಗೂ 28 ಸಾವಿರ ಜನರನ್ನು ಸ್ಥಳಾಂತರಿಸಲಾಗಿದೆ.

ಸ್ಪೇನ್‌ನಲ್ಲಿ ಕಾಡ್ಗಿಚ್ಚಿನ ಕಾರಣದಿಂದಾಗಿ ಎರಡು ದಿನಗಳಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಅರಣ್ಯ ಪ್ರದೇಶಗಳ ಬಳಿ ಇರುವ ಸಾವಿರಾರು ಜನರನ್ನು ತೆರವುಗೊಳಿಸಲಾಗಿದೆ.

ಸ್ಪೇನ್‌ನಲ್ಲಿ ಕಳೆದ ಹತ್ತು ದಿನಗಳಿಂದ ತಾಪಮಾನ 40 ಡಿಗ್ರಿ ಸೆಲ್ಸಿಯಸ್‌ಗೂ ಹೆಚ್ಚಿನ ಮಟ್ಟದಲ್ಲಿದೆ. ಬಿಸಿಲ ಬೇಗೆಗೆ ಸಿಲುಕಿ ಜುಲೈ 10ರಿಂದ 14ರ ನಡುವೆ 237 ಜನ ಸಾವನ್ನಪ್ಪಿದ್ದಾರೆ.

## ಸ್ಕೌಟ್ಸ್ ವಿದ್ಯಾರ್ಥಿಗಳಿಗೆ ಅಗ್ನಿ ಸುರಕ್ಷತೆ ಮಾಹಿತಿ



ದಾವಣಗೆರೆ, ಜು. 18- ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಡಿ ಆರ್ ಎಂ ಪದವಿಪೂರ್ವ ಕಾಲೇಜಿನಲ್ಲಿ ಅವರು ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಗೆ ಅಗ್ನಿಯಿಂದ ಸಂಭವಿಸಬಹುದಾದ ಅನಾಹುತಗಳಿಂದ ಹೇಗೆ ಪಾರಾಗುವುದು ಹಾಗೂ ಅನಾಹುತಗಳಾಗದಂತೆ ಹೇಗೆ ಸಂರಕ್ಷಣೆ ಮಾಡುವುದು ಎಂಬುದರ ಬಗ್ಗೆ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ಅಗ್ನಿಶಾಮಕ ದಳದ ಅಧಿಕಾರಿ ಸುಹಾಸ್, ಪ್ರಾಂಶುಪಾಲರುಗಳಾದ ವಿರುಪಾಕ್ಷಪ್ಪ ಮತ್ತು ರಾಜಶೇಖರಯ್ಯ, ಶ್ರೀಮತಿ ಅಶ್ವಿನಿ ಮತ್ತು ರೋವರ್ ಸ್ಕೌಟ್ ಲೀಡರ್ಸ್‌ಗಳಾದ ಸುರೇಶ್ ಮತ್ತು ಮಂಜುನಾಥ್ ಹಾಗೂ ಸಿದ್ದಪ್ಪ ಹಾಗೂ ರೇಂಜರ್ ವಿಭಾಗದ ನಾಯಕಿ ಶ್ರೀಮತಿ ಗೋವಿಂದಮ್ಮ ಹಾಗೂ ಶ್ರೀಮತಿ ಸ್ಮಿತಾ ಉಪಸ್ಥಿತರಿದ್ದರು.

## ಛತ್ತೀಸ್‌ಘಡದಲ್ಲಿ ಸರ್ಕಾರದಿಂದ ಗೋ ಮೂತ್ರ ಖರೀದಿ

**(1ನೇ ಪುಟದಿಂದ)** ಸೆಗಣಿ ಖರೀದಿಸಲಾಗುತ್ತಿದೆ. ಮೊದಲ ಹಂತದಲ್ಲಿ ಪ್ರತಿ ಜಿಲ್ಲೆಯ ಎರಡು ಗೋಶಾಲೆಗಳ ಮೂಲಕ ಗೋ ಮೂತ್ರ ಖರೀದಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎರಡು ವರ್ಷಗಳ ಹಿಂದೆ ರಾಜ್ಯ ಸರ್ಕಾರ ಸೆಗಣಿಯನ್ನು ಕೆಜಿಗೆ 2 ರೂ.ಗಳಂತೆ ಖರೀದಿಸುವ ಯೋಜನೆ ಆರಂಭಿಸಿತ್ತು. ಕಳೆದ ಎರಡು ವರ್ಷಗಳಲ್ಲಿ ರಾಜ್ಯ ಸರ್ಕಾರ 150 ಕೋಟಿ ರೂ. ಬೆಲೆಯ ಸೆಗಣಿ ಖರೀದಿಸಿದೆ. ಸ್ವಸಹಾಯ ಸಂಘಗಳು ಇವುಗಳನ್ನು ಬಳಸಿ 20 ಲಕ್ಷ ಕ್ವಿಂಟಾಲ್ ಗೊಬ್ಬರ ಇತ್ಯಾದಿಗಳನ್ನು ಉತ್ಪಾದಿಸಿ 143 ಕೋಟಿ ರೂ.ಗಳನ್ನು ಪಡೆದಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಸೈಟುಗಳು ಮಾರಾಟಕ್ಕಿವೆ**
1. 40x60 West Indoor ಸ್ಟೇಡಿಯಂ ಹತ್ತಿರ,
2. 40x60 South ಕುವೆಂಪು ಬಡಾವಣೆ,
3. 30x48 North ನಿಜಲಿಂಗಪ್ಪ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ ಅಕ್ಕ-ಪಕ್ಕ, ವಿನಾಯಕ ಬಡಾವಣೆಯಲ್ಲಿ 30x40 ದಕ್ಷಿಣ, ಬಾಲಾಜಿ ಬಡಾವಣೆಯಲ್ಲಿ 30x50 ಉತ್ತರ, ಡಾಲರ್ಸ್ ಕಾಲೋನಿ ಸುತ್ತ ಮುತ್ತ ಬಡಾವಣೆಯಲ್ಲಿ 30x50 ಉತ್ತರ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ ಗ್ಲಾಸ್ ಹೌಸ್ ಹತ್ತಿರ 30x50 East, 30x50 West, 30x40 East, 30x40 West, 60x40 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WE ARE HIRING !!!**
Akshaya silvers & Gold Pvt Ltd :
* Tele caller * Marketing executives
Qualification : 2nd PU or any degree & 2 years of work experience.
Address : Opp. Halemane hotel AVK College Road, Davangere
Whatsapp : 7619328978
Toll Free : 1800-212-3522

**ಬೇಕಾಗಿದ್ದಾರೆ**
ಚಾಟ್ ಐಟಂ, ಪಾನಿಪುರಿ, ಗೋಬಿ, ಮಾಡುವ ಮಾಸ್ಟರ್ ಬೇಕಾಗಿದ್ದಾರೆ.
ಸಂಪರ್ಕಿಸಿ
88847 10037

**ಸೈಟುಗಳು ಮಾರಾಟಕ್ಕಿವೆ**
ಶಿವಗಂಗಾ ಕಲ್ಯಾಣ ಮಂಟಪ ಹಿಂಭಾಗ 40 ಅಡಿ ರಸ್ತೆಗೆ ಆಮರ್‌ನಾಥ ಲೇಔಟ್‌ನಲ್ಲಿ ಬಂಗ್ಲೆ ಸೈಟ್ ದಕ್ಷಿಣ ಭಾಗ 62x88 ಮತ್ತು 28x44 ಪಶ್ಚಿಮ ಭಾಗ ನಿಜಲಿಂಗಪ್ಪ ಲೇಔಟ್ ಪಶ್ಚಿಮ ಭಾಗ 30x30
98440 84229

**House For Rent**
2 BHK Indipendent House For Rent
# 630, 7th Main P.J. Extn opp: Sandeep Nursing Home Residential Commercial (Drs Clinic also)
99722 93785
(Veg-Only)

**ಬೇಸಿಕ್‌ನಿಂದ ಸುಲಭ ಇಂಗ್ಲಿಷ್ ಕಲಿಯಿರಿ**
100% ಅತ್ಯುತ್ತಮ ಫಲಿತಾಂಶ
1000 ರೂ. ಮಾತ್ರ.
ಮಿರಜ್‌ಕರ್ ಟ್ಯುಟೋರಿಯಲ್
ಎವಿಕೆ ರಸ್ತೆ, ದಾವಣಗೆರೆ.
90369 96243

**ಅಕ್ಷಯ**
ಬೆಳ್ಳಿ ಮತ್ತು ಚಿನ್ನಾಭರಣಗಳ ಖರೀದಿ ಈ ದಿನ Online ಬೆಲೆಗೆ ಸಂಪರ್ಕಿಸಿ:
76193 28978

**Site For Sale**
60/30, East facing Site in Shirmanalli Industrial Area (Sir MV College Opposite)
Broker excuse
94497 59471

**WANTED**
CS Faculty For Diploma College Davangere.
B.E, M.tech, BCA, MCA
PH: 94821 93206

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
91084 18233, 97432 17566

**ಬೇಕಾಗಿದ್ದಾರೆ**
ತಕ್ಷಣ ಸೇಲ್ಸ್‌ಗರ್ಲ್, ಸೇಲ್ಸ್ ಬಾಯ್ಸ್ ಹಾಗೂ ಹೆಲ್ಪರ್ ಬೇಕಾಗಿದ್ದಾರೆ.
ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ.-1

**ಬೇಕಾಗಿದ್ದಾರೆ**
ನಗರದ ಲಾಡ್ಜ್ ನಲ್ಲಿ ಕೆಲಸ ಮಾಡಲು ಟ್ಯಾಲಿ ಆಪರೇಟರ್ ಬೇಕಾಗಿದ್ದಾರೆ.
40 ವರ್ಷ ಮೇಲ್ಪಟ್ಟವರಿಗೆ ಆದ್ಯತೆ.
ಮೊ : 87924 71589

**ಬೇಕಾಗಿದ್ದಾರೆ**
ಟೈಲ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ : ಸಮ್ಯಕ್ ಸೆರಾಮಿಕ್ಸ್
ಹದಡಿ ರೋಡ್, ಉದಯ ಸೂಪರ್ ಮಾರ್ಕೆಟ್ ಹತ್ತಿರ, ದಾವಣಗೆರೆ.
96200 95520

**ಬೇಕಾಗಿದ್ದಾರೆ**
ಬಿನ್ನಿ ಕಂಪನಿ ರೋಡ್‌ನಲ್ಲಿರುವ ಮನೆಗೆ ಲಿಂಗಾಯತ ಅನುಭವವುಳ್ಳ ಅಡುಗೆಯುವರು ಬೇಕಾಗಿದ್ದಾರೆ.
63631 97523

**WANTED**
Banking sector tele caller (Female Only)
Qualification - Any Degree
No. 2257/5 2nd Floor, MCC `A' Block Beside Togataveera Kalyana Mantapa
96869 56142
Interview time :11 AM

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**WANTED**
Require candidate for data entry work with basic knowledge of Tally and Excel. (Male or female)
Also Wanted Worker for Sales And Service (Male) In Computer Shop
Age: 18 to 35
NEEMS DISTRIBUTOR
574/1 6th main Road. P J Extension
+91 99169 13079

**Wanted**
We Required Field staff Male Candidates and office staff Female Candidates for Loan Corporate DSA Candidates should have Marketing Knowledge and Computer Skills
Salary + Incentives
99805 70746

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**LONG TERM COACHING**
NEET /JEE / K CET
100% ಫಲಿತಾಂಶ
SINCHAN COACHING CENTER
near SBI ATM Ram & co circle Davangere
8861445913, 90195 80600

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಎಸ್.ಎಲ್.ಎನ್. ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್
ಪ್ರಖ್ಯಾತ ಐ.ಟಿ. ಕಂಪನಿ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು. ಹೌಸ್ ಕೀಪಿಂಗ್ ಕೆಲಸಕ್ಕೆ ಹಾಗೂ ಟೆಲಿಫೋನ್ ಆಪರೇಟರ್ ಹುಡುಗರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30 ವರ್ಷಗಳು. ಸೌಲಭ್ಯಗಳು : ಸಂಬಳ, ಬೋನಸ್, ಲೀವ್ ಪೇಮೆಂಟ್, ಯೂನಿಫಾರ್ಮ್, ಶೂಸ್, ಪಿ.ಎಫ್., ಇಎಸ್‌ಐ., ಗ್ರಾಚ್ಯುಟಿ ಮತ್ತು ಇತರೆ ಸೌಲಭ್ಯವಿರುತ್ತದೆ.
99002 67373, 99002 77949, 99005 19554

**ಬೇಕಾಗಿದ್ದಾರೆ**
ಅಪೆ ಆಟೋ ಡೀಸೆಲ್, LPG, CNG ಪ್ಯಾಸೆಂಜರ್, ಗೂಡ್ಸ್ ಅಪೆ ಆಟೋ ಎಲ್‌ಪಿಜಿ ತ್ರಿಚಕ್ರ ವಾಹನಗಳ ಮಾರಾಟ ಮಾಡಲು ತಾಲ್ಲೂಕುವಾರು
ಸೇಲ್ಸ್ ಎಕ್ಸಿಕ್ಯೂಟಿವ್ಸ್-4
(ಅಭ್ಯರ್ಥಿಗಳು ಸ್ವಂತ ಬೈಕ್ ಹೊಂದಿರಬೇಕು.)
ವಿದ್ಯಾರ್ಹತೆ: SSLC to Degree.
ಆಕರ್ಷಕ ಸಂಬಳ + Incentive+TA, DA.
**ಬೇಕಾಗಿದ್ದಾರೆ**
ವರ್ಕ್‌ಷಾಪ್ ಸೂಪರ್‌ವೈಸರ್-2
(5 ವರ್ಷ ಅನುಭವ/ಫ್ರೆಶರ್‌ಗೂ ಸಹ ಆದ್ಯತೆ)
ಡೀಜಲ್ ಮೆಕ್ಯಾನಿಕ್-4
ಹೆಲ್ಪರ್ಸ್-4
ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ:
ಸಮಯ: ಮ. 3 ರಿಂದ 5
ಫೋನ್ /ಮೊಬೈಲ್ ವಿಚಾರಣೆ ಇರುವುದಿಲ್ಲ
ಗಣೇಶ ಮೋಟಾರ್
ಎಲ್.ಐ.ಸಿ. ಆಫೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-6.

**WANTED**
Computer Operator Cum Receptionist.
Gents, Day and Night.
Contact :
Shramajeevi Delux Lodge
Davangere
99869 16627

**ಕ್ರಯ ಪತ್ರ ಕಳೆದಿದೆ**
ದಾವಣಗೆರೆ ಸಿಟಿ ದುರ್ಗಾಂಬಿಕಾ ದೇವಸ್ಥಾನದ ಹತ್ತಿರ ನಿಟುವಳ್ಳಿ ಇಲ್ಲಿ ಬರತಕ್ಕ ಮುನ್ಸಿಪಲ್ ಸೈಟ್ ನಂ.- 37 ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂ. 870/2/37 ಅಳತೆ 30x40 ಅಡಿವುಳ್ಳ ನಿವೇಶನದ ಡಾಕ್ಯೂಮೆಂಟ್ ನಂ.7220/2004-05 ಎಂಬ ಕ್ರಯ ಪತ್ರವು ಶ್ರೀ ಹೆಚ್. ರವಿ ಬಿನ್ ಹರೀಶ್ ಚಂದ್ರನಾಯ್ಕ ಇವರ ಹೆಸರಿಗೆ ಇದ್ದು ಇದರ ಮೂಲ ಪತ್ರ ದಿನಾಂಕ 28.5.2022 ರಂದು ಕಳೆದಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಫೋನ್ ನಂಬರ್‌ಗೆ ತಿಳಿಸಲು ಕೋರಿದೆ.
ಓಂಕಾರ ಸ್ವಾಮಿ, ವಕೀಲರು
78929 31783

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಿಭಾಗ ಪತ್ರ ಕಳೆದಿದೆ**
ಎ. ತಿಪ್ಪೇಶಪ್ಪ ತಂದೆ ಆಂಜನೇಯಪ್ಪ, ದುರ್ಗಿಗುಡಿ 9ನೇ ಕ್ರಾಸ್, ಹೊನ್ನಾಳಿ ಇವರ ಪಿತ್ರಾರ್ಜಿತ ಆಸ್ತಿಗಳನ್ನು ಈ ಹಿಂದೆಯೇ ಎಸ್.ಆರ್. ನಂ. 2648/2016-1, ದಿ. : 2.9.2016 ರಂತೆ ವಿಭಾಗ ಪತ್ರವನ್ನು ನೋಂದಣಿ ಮಾಡಿಕೊಂಡಿದ್ದು, ಇದು ಇವರ ಸ್ವತ್ತಾಗಿರುತ್ತದೆ. ಸದರಿ ವಿಭಾಗ ಪತ್ರವನ್ನು ಆಧಾರ ಮಾಡಿ ಸಾಲ ವಗೈರೆ ಪಡೆದು ಕೊಂಡಿರುವುದಿಲ್ಲ. ತಮ್ಮ ಮನೆ ಸ್ವಚ್ಛಗೊಳಿಸುವಾಗ ಆಕಸ್ಮಿಕವಾಗಿ ಎಲ್ಲಿಯೋ ಕಳೆದು ಹೋಗಿದ್ದು, (ನೋಟರಿ) ಪ್ರಮಾಣ ಪತ್ರದೊಂದಿಗೆ ಹೊನ್ನಾಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಠಾಣಾ ಡಿಪೆಟ್ ನಂ. 355/2022 ರಲ್ಲಿ ದಾಖಲಾಗಿದೆ. ಆದ್ದರಿಂದ ಪತ್ರ ಸಿಕ್ಕವರು ಮೊ. : 9901632800ರ ನಂಬರಿನ ಮೇಲ್ಕಂಡ ವಿಳಾಸಕ್ಕೆ ತಂದುಕೊಡಬೇಕೆಂದು ಮನವಿ ಮಾಡಿಕೊಳ್ಳಲಾಗಿದೆ.

**WANTED**
1. Lab Technician - Dip. in Lab technician
2. Receptionist - Any degree holder can Apply
Shilpa Diagnostics,
MCC B Block, Near Swimming Pool, Davangere.
98440 65638

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**ಸುವರ್ಣಾವಕಾಶ**
ಮನೆ ಕಟ್ಟುವವರಿಗೆ ಸುವರ್ಣಾವಕಾಶ. ರಿಯಾಯತಿ ದರದಲ್ಲಿ ಸಾಗುವಾನಿ / Teak ಲೈಸೆನ್ಸ್ ಹೊಂದಿರುವ ಹುಂಡಿ ಮರಗಳು ದೊರೆಯುತ್ತವೆ.
ಸಂಪರ್ಕಿಸಿ
88847 10037

**Room For Rent**
Single Attached Room with all facilities available with wardrobe and cots system. At MCC "A" Block, Near Ram Krishna Ashrama, Beside Ganesha Temple
97405 69252

**2 BHK HOUSE FOR RENT**
Near Netravati Ladies Hostel, Ground Floor, Anjaneya Badavane, Davangere.
Ph. : 88845 64642

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ಹದಡಿ ರಸ್ತೆಯಲ್ಲಿ ಸಮ್ಯಕ್ ಪ್ಲೈವುಡ್ ಹಿಂಭಾಗ 80x124 sq. ft. ಉತ್ತರ ದಿಕ್ಕಿನ ಸೈಟ್ ಮಾರಾಟಕ್ಕಿ ಇದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
98440 64841

**ಬೇಕಾಗಿದ್ದಾರೆ**
B.A., B.Ed., NTC, B.Sc., B.com. ಹಾಗೂ ದೈಹಿಕ ಶಿಕ್ಷಣ ತರಬೇತಿ ಪಡೆದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ
ನಂದಗೋಕುಲ ಶಾಲೆ (ಆಂಗ್ಲಮಾಧ್ಯಮ)
ದೇವರಾಜ ಅರಸು ಬಡಾವಣೆ, 'ಸಿ' ಬ್ಲಾಕ್, 6ನೇ ಕ್ರಾಸ್, ದಾವಣಗೆರೆ.
99640 17729

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**ಬೇಕಾಗಿದ್ದಾರೆ**
ನಮ್ಮ ಹಾರ್ಡ್‌ವೇರ್ಸ್ ಮತ್ತು ಪೇಂಟ್ಸ್ ಅಂಗಡಿಯಲ್ಲಿ ಸೇಲ್ಸ್ ಮಾಡಲು ಸೇಲ್ಸ್‌ಮನ್ ಬೇಕಾಗಿದ್ದಾರೆ.
ಅನುಭವವಿದ್ದವರಿಗೆ ಆದ್ಯತೆ ಇದೆ.
ಆನಂದ್ ಹಾರ್ಡ್‌ವೇರ್ಸ್ & ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**WANTED**
DTP Work Ladies Receptionist Female, Superviser Male / Female.
Conatct
63603 92458

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ ತೆಂಗು , ಮಾವು ಸಪೋಟ, ಶ್ರೀಗಂಧ, ಹೆಬ್ಬೇವು, ಮಹಾಘನಿ, ನಿಂಬೆ, ದಾಳಿಂಬೆ, ಗುಲಾಬಿ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ. ಸಂಪರ್ಕಿಸಿ.
94484 39639


**INDEPENDENT HOUSE FOR RENT**
Real Estate Agent
3 BHK Fully Furnished , 2 BHK fully furnished (Residential areas)
78927 93994

# ಅಮೃತ ಮಹೋತ್ಸವಕ್ಕೆ ರಾಷ್ಟ್ರ ಮಟ್ಟದ ಪ್ರಚಾರ

ಬೆಂಗಳೂರು, ಜು.18 - ದಾವಣಗೆರೆಯಲ್ಲಿ ಆಗಸ್ಟ್ 3 ರಂದು ನಡೆಯುವ ಸಿದ್ದರಾಮಯ್ಯನವರ ಅಮೃತ ಮಹೋತ್ಸವಕ್ಕೆ ವ್ಯಾಪಕ ಪ್ರಚಾರ ನೀಡಲು ಅವರ ಬೆಂಬಲಿಗರು ಮುಂದಾಗಿದ್ದಾರೆ.

ಸಿದ್ದರಾಮಯ್ಯ ಅವರನ್ನು ಮತ್ತೆ ಕರ್ನಾಟಕದಲ್ಲಿ ಮುಖ್ಯಮಂತ್ರಿ ಮಾಡಬೇಕು ಎಂದು ಪಣ ತೊಟ್ಟಂತಿರುವ ಅವರ ಅನುಯಾಯಿಗಳು, ಕೇವಲ ರಾಜ್ಯ ಮಟ್ಟದಲ್ಲಿ ಅಷ್ಟೇ ಅಲ್ಲ, ರಾಷ್ಟ್ರಮಟ್ಟದಲ್ಲೂ ಸಿದ್ದರಾಮಯ್ಯ ಅವರನ್ನು ಬಿಂಬಿಸಲು ಹೊರಟಿದ್ದಾರೆ.

ಇದಕ್ಕಾಗಿ ರಾಜ್ಯ, ರಾಷ್ಟ್ರ ಹಾಗೂ ಆಯ್ದ ಕೆಲವು ಪ್ರಾದೇಶಿಕ ಪತ್ರಿಕೆಗಳಿಗೆ ನಾಲ್ಕು ಪುಟಗಳ ಪ್ರಾಯೋಜಿತ ಪುರವಣಿ ನೀಡಲು ಸಿದ್ದರಾಮಯ್ಯ ಅಮೃತ ಮಹೋತ್ಸವ ಸಮಿತಿ ನಿರ್ಧರಿಸಿದೆ.




ಅಷ್ಟೇ ಅಲ್ಲ, ಅಂದು ರಾಜ್ಯದ ಐದು ಪ್ರಮುಖ ಸುದ್ದಿ ವಾಹಿನಿಗಳ ಮೂಲಕ ಬೆಳಗ್ಗಿನಿಂದ ಕಾರ್ಯಕ್ರಮ ಮುಗಿಯುವವರೆಗೂ ನೇರ ಪ್ರಸಾರ ಮಾಡಲು ಅಂದಿನ ಸಮಯವನ್ನು ಈಗಾಗಲೇ ಕಾಯ್ದಿರಿಸಲಾಗಿದೆ. ಸಿದ್ದರಾಮಯ್ಯ ಅವರ 75 ನೇ ವರ್ಷದ ಹುಟ್ಟು ಹಬ್ಬದ ಆಚರಣೆಯನ್ನು ಯಾರೂ ಇದುವರೆಗೆ ನಡೆಸಿರಬಾರದು ಹಾಗೂ ಮುಂದೆ ಮಾಡಬಾರದು ಎಂಬ ರೀತಿ ಮಾಡಲು ಉದ್ದೇಶಿಸಿದೆ.

ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಅವರಿಗೆ ಬೇರೆ ನಾಯಕರು ಸರಿಸಾಟಿಯಲ್ಲ ಎಂದು ಬಿಂಬಿಸುವುದು ಇದರ ಮುಖ್ಯ ಉದ್ದೇಶ. ಅಂದಿನ ಸಮಾವೇಶದಲ್ಲಿ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ಸೇರಿದಂತೆ ದೆಹಲಿಯ ನಾಯಕರ ದಂಡೇ ಭಾಗವಹಿಸಲಿದೆ.

ಇಂತಹ ಸಮಾವೇಶದಲ್ಲಿ ಸಿದ್ದರಾಮಯ್ಯ, ಪ್ರಭಾವಿ ನಾಯಕ. ಅವರ ನಾಯಕತ್ವದಲ್ಲಿ ಚುನಾವಣೆ ನಡೆದರೆ ಪಕ್ಷ ಅಧಿಕಾರಕ್ಕೆ ಬರಲಿದೆ ಎಂಬುದನ್ನು ವರಿಷ್ಠರ ಮುಂದೆ ಬಿಂಬಿಸಲು ಸಮಿತಿ ಸದಸ್ಯರು ಮುಂದಾಗಿದ್ದಾರೆ.

ಇದಕ್ಕಾಗಿ ಚಾಮರಾಜನಗರದಿಂದ ಬೀದರ್ ವರೆಗೆ ಸಿದ್ದರಾಮಯ್ಯ ಬೆಂಬಲಿಗರು ಮತ್ತು ಪಕ್ಷದ ಕಾರ್ಯಕರ್ತರನ್ನು 4-5 ಲಕ್ಷ ಮಂದಿ ಸೇರಿಸಲು ಸಮಿತಿ ಕಸರತ್ತು ನಡೆಸಿದೆ.

# ನಗರದಲ್ಲಿ ಇಂದು 'ಕೃಷಿ ಕಣ್ಮಣಿ' ಕೃತಿ ಲೋಕಾರ್ಪಣೆ



ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್ ಅವರ 'ಬದುಕು-ರಾಜಕೀಯ ಜೀವನ ಹಾಗೂ ಕೃಷಿ ಕಣ್ಮಣಿ' ಕೃತಿ ಅವಲೋಕನ ಲೋಕಾರ್ಪಣೆ ಇಂದು ಮಧ್ಯಾಹ್ನ 3.30ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಎಸ್.ಎ. ರವೀಂದ್ರನಾಥ್ ಅಭಿಮಾನಿ ಬಳಗದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮದ ಉದ್ಘಾಟನೆಯನ್ನು ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ನೆರವೇರಿಸಲಿದ್ದು, ಡಾ. ಎ.ಎಚ್. ಶಿವಯೋಗಿಸ್ವಾಮಿ ರವೀಂದ್ರನಾಥ್ ಅವರ ಬದುಕು-ರಾಜಕಾರಣ ಕುರಿತು ಮಾತನಾಡಲಿದ್ದಾರೆ. ಎಸ್ಎಆರ್ ರೈತ ಹೋರಾಟ ಕುರಿತು ಜಿಲ್ಲಾ ಭಾರತೀಯ ರೈತ ಒಕ್ಕೂಟ ಅಧ್ಯಕ್ಷ ಶಾಮನೂರು ಎಚ್.ಆರ್. ಲಿಂಗರಾಜ್, ಕೃಷಿ ಕಣ್ಮಣಿ ಕೃತಿ ಕುರಿತು ಕನ್ನಡ ಉಪನ್ಯಾಸಕ ಬಸವರಾಜ ಹನುಮಲಿ ಮಾತನಾಡುವರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮಂಡಲ ಅಧ್ಯಕ್ಷ ಸಂಗನಗೌಡ್ರು ಉಪಸ್ಥಿತರಿರುವರು. ಇದೇ ವೇಳೆ ಶಾಸಕ ಎಸ್.ಎ. ರವೀಂದ್ರನಾಥ್ ಅವರಿಗೆ ಗೌರವ ಸಮರ್ಪಣೆ ನಡೆಯಲಿದೆ.

# ಜೀವನದ ಸ್ಫೂರ್ತಿಯ ಚಿಲುಮೆಯೇ ಲಲಿತಕಲೆ



## ರಾಜ್ಯ ಮಟ್ಟದ ಉಚಿತ ಚಿತ್ರ ಬರೆಯುವ ಸ್ಪರ್ಧಾ ಕಾರ್ಯಕ್ರಮದಲ್ಲಿ ಕನ್ನಡಪರ ಹೋರಾಟಗಾರ ಐರಣಿ ಬಸವರಾಜ್

ದಾವಣಗೆರೆ, ಜು. 18 - ಪ್ರತೀ ವ್ಯಕ್ತಿಗಳಲ್ಲಿ ಒಂದು ಕಲಾ ಪ್ರತಿಭೆ ಇದ್ದೇ ಇರುತ್ತದೆ. ಅದರಲ್ಲೂ ಮಹಿಳೆಯರಲ್ಲಿ ವಿಶೇಷ ಪರಿಣಿತಿ, ಕೌಶಲ್ಯ ಇರುತ್ತದೆ. ಅಂತಹ ಎಲೆಮರೆಯ ಕಾಯಿಗಳನ್ನು ಹುಡುಕಿ ಮುಕ್ತವಾದ ಅವಕಾಶ ಕಲ್ಪಿಸುವ ಕೆಲಸವನ್ನು ಕಲಾಕುಂಚ ಸಂಸ್ಥೆಯು ಕಳೆದ ಮೂರು ದಶಕಗಳಿಂದ ನಿರಂತರವಾಗಿ ಮಾಡುತ್ತಾ ಇತರೆ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದು ಹಿರಿಯ ಕನ್ನಡಪರ ಹೋರಾಟಗಾರ ಐರಣಿ ಬಸವರಾಜ್ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯು ಹಮ್ಮಿಕೊಂಡಿದ್ದ 'ಕನ್ನಡ ನಿತ್ಯೋತ್ಸವ, ಸಾಧಕರಿಗೆ ಸನ್ಮಾನ, ವಿಶ್ವ ಪರಿಸರ ದಿನಾಚರಣೆ' ಅಂಗವಾಗಿ ಏರ್ಪಡಿಸಲಾದ ರಾಜ್ಯ ಮಟ್ಟದ ಉಚಿತ ಚಿತ್ರ ಬರೆಯುವ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭವನ್ನು ಕನ್ನಡ ಬಾವುಟ ಹಾರಿಸುವುದರೊಂದಿಗೆ ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ಕಲಾವಿದ ಎ.ಮಹಾಲಿಂಗಪ್ಪ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ಮಾನವನ ಜೀವನದ ಸ್ಫೂರ್ತಿಯ ಚಿಲುಮೆಯೇ ಲಲಿತ ಕಲೆಗಳ ಪ್ರಕಾರಗಳು. ಜೀವನದಲ್ಲಿ ಇಂತಹ ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಸಮಾಜಕ್ಕೆ ಸೇವಾ ಮನೋಭಾವದ ಕೊಡುಗೆಯೊಂದಿಗೆ ನಮ್ಮ ಜೀವನಕ್ಕೆ ಸಾರ್ಥಕತೆ ಬರುತ್ತದೆ ಎಂದರು.

ಮತ್ತೋರ್ವ ಮುಖ್ಯ ಅತಿಥಿಯಾಗಿದ್ದ ನಾಟಕ ಅಕಾಡೆಮಿ ಸದಸ್ಯ ರವೀಂದ್ರ ಹೆಚ್.ಅರಳಗುಪ್ಪಿ ಮಾತನಾಡಿ, ಕರ್ನಾಟಕ ಕರಾವಳಿ ಜಿಲ್ಲೆಗಳ ವಿಶ್ವವಿಖ್ಯಾತ ಅಪ್ಪಟ ಕನ್ನಡ ಜನಪದ ಆರಾಧನಾ ಕಲೆ ಯಕ್ಷಗಾನವನ್ನು ವಾಣಿಜ್ಯ ನಗರಿ ದಾವಣಗೆರೆಗೆ ಪರಿಚಯಿಸಿದ್ದು, ಆ ಕಲಾ ಪ್ರಕಾರಗಳನ್ನು ನಿರಂತರವಾಗಿ ವೈಭವರೀಕರಿಸುತ್ತಿರುವ ಈ ಸಂಘಟನೆಯ ಕಾಯಕ ಚಿತ್ತಾಕರ್ಷಕ ಹಾಗೂ ಸಾಧನೆ ಅವಿಸ್ಮರಣೀಯ ಎಂದರು.

ಸಂಸ್ಥೆಯ ಅಧ್ಯಕ್ಷ ಕೆ.ಹೆಚ್.ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಪಿ.ಎಸ್.ಐ. ಆಗಿ ಮುಂಬಡ್ತಿ ಹೊಂದಿದ ಡಿ.ಹೆಚ್.ನಿರ್ಮಲಾ ಅವರನ್ನು ಸನ್ಮಾನಿಸಲಾಯಿತು.

ಕಲಾಕುಂಚ ಸಂಸ್ಥೆಯ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ ಮತ್ತು ಜ್ಯೋತಿ ಗಣೇಶ್‌ಶೆಣೈ, ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ, ಗೌರವ ಅಧ್ಯಕ್ಷರಾದ ವಸಂತಿ ಮಂಜುನಾಥ್, ಡಿ.ಸಿ.ಎಂ.ಶಾಖೆಯ ಅಧ್ಯಕ್ಷರಾದ ಶಾರದಮ್ಮ ಶಿವನಪ್ಪ, ಸಿದ್ದವೀರಪ್ಪ ಬಡಾವಣೆ ಶಾಖೆ ಅಧ್ಯಕ್ಷರಾದ ಲಲಿತಾ ಕಲ್ಲೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು

ಸುಮಾ ಏಕಾಂತಪ್ಪ, ಜಯಲಕ್ಷ್ಮಿ ಮಲ್ಲನಗೌಡ್ರು ಪ್ರಾರ್ಥಿಸಿದರು. ಕಲಾಕುಂಚ ಎಲೆಬೇತೂರು ಶಾಖೆಯ ಅಧ್ಯಕ್ಷರಾದ ಡಾ|| ನಿರ್ಮಲಾ ವಿಶ್ವನಾಥ್ ಕುಲಕರ್ಣಿ ಸ್ವಾಗತಿಸಿದರು. ಸುಚಿತ್ರಾ ಗಣೇಶ್‌ರಾವ್ ವಂದಿಸಿದರು. ಶೈಲಾ ವಿನೋದ್ ದೇವರಾಜ್ ಕಾರ್ಯಕ್ರಮ ನಿರೂಪಿಸಿದರು.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಜು. 18- ಜಿಲ್ಲಾ ಮಹಿಳಾ ಗಾಣಿಗ ಸಮಾಜದ ವತಿಯಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 85 ಕ್ಕಿಂತ ಅಧಿಕ ಅಂಕ ಗಳಿಸಿದ ಗಾಣಿಗ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ನಾಡಿದ್ದು ದಿನಾಂಕ 20 ರೊಳಗಾಗಿ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಳ್ಳಬೇಕು. ಪುರಸ್ಕಾರ ಸಮಾರಂಭವು ಇದೇ ದಿನಾಂಕ 24 ರ ಭಾನುವಾರ ಬೆಳಿಗ್ಗೆ 10.30 ಕ್ಕೆ ನಗರದ ರೋಟರಿ ಬಾಲಭವನದಲ್ಲಿ ನಡೆಯಲಿದೆ. ವಿವರಗಳಿಗಾಗಿ ಜಿಲ್ಲಾ ಮಹಿಳಾ ಗಾಣಿಗ ಸಮಾಜದ ಅಧ್ಯಕ್ಷರಾದ ರತ್ನಾ ಸಿದ್ಧೇಶ್ (9964098234), ಉಮಾ ವೀರಭದ್ರಪ್ಪ (9740106484) ಅವರನ್ನು ಸಂಪರ್ಕಿಸಬಹುದು.

## ಬಣಜಿಗ ಸಮಾಜ : ಪುರಸ್ಕಾರ

ದಾವಣಗೆರೆ,ಜು.18- ಜಿಲ್ಲಾ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದಿಂದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಬಣಜಿಗ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9742006166 ಸಂಪರ್ಕಿಸಬಹುದು.

# ಬ್ಯಾಂಕ್ ವಂಚನೆಗೆ ಮಧ್ಯಸ್ಥಿಕೆ ವಹಿಸಲು ಐಜಿಪಿಗೆ ಮನವಿ



ದಾವಣಗೆರೆ, ಜು.18- ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ಮಾಕನೂರಿನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದವರು ಏಕ ತೀರುವಳಿ (ಓಟಿಎಸ್) ಯೋಜನೆಯಲ್ಲಿ ರೈತರಿಗೆ ಅನ್ಯಾಯವೆಸಗಿ, ರೈತರ ಆತ್ಮಹತ್ಯೆಗೂ ಕಾರಣರಾಗಿದ್ದು, ಕೂಡಲೇ ಮಧ್ಯಸ್ಥಿಕೆ ವಹಿಸಿ ನ್ಯಾಯ ದೊರಕಿಸುವಂತೆ ಆಗ್ರಹಿಸಿ ಪೂರ್ವ ವಲಯ ಪೊಲೀಸ್ ಮಹಾ ನಿರ್ದೇಶಕ ತ್ಯಾಗರಾಜನ್ ಅವರಿಗೆ ಕರ್ನಾಟಕ ರಾಜ್ಯ ರೈತ ಸಂಘದಿಂದ ಇಂದು ಮನವಿ ಸಲ್ಲಿಸಲಾಯಿತು.

ನಗರದ ಪಿಬಿ ರಸ್ತೆಯ ರಿಂಗ್ ರೋಡ್ ವೃತ್ತದಿಂದ ಕಾಲ್ನಡಿಗೆಯಲ್ಲಿ ಪ್ರತಿಭಟನಾ ಮೆರವಣಿಗೆ ಮುಖೇನ ಐಜಿಪಿ ಕಚೇರಿಗೆ ತೆರಳಿ ಬೇಡಿಕೆಯುಳ್ಳ ಮನವಿ ನೀಡಲಾಯಿತು. ಇದೇ ವೇಳೆ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಎಫ್. ಪಾಟೀಲ್ ಮಾತನಾಡಿ, ಮುಖ್ಯಮಂತ್ರಿಗಳ ಮತ್ತು ಕೃಷಿ ಮಂತ್ರಿಗಳ ತವರು ಜಿಲ್ಲೆಯಲ್ಲಿಯೇ ರೈತರಿಗೆ ಅನ್ಯಾಯವಾಗಿದ್ದು, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದವರು ಏಕ ತೀರುವಳಿ (ಓಟಿಎಸ್) ಯೋಜನೆಯಲ್ಲಿ ರೈತರಿಗೆ ವಂಚಿಸಿದ್ದಾರೆ. ಆದ್ದರಿಂದ, ಬ್ಯಾಂಕ್‌ನ ಕಾನೂನು ವಿರೋಧಿ ಮತ್ತು ರೈತ ವಿರೋಧಿ ನಡೆ ಖಂಡಿಸಿ ಜು.25ರಂದು ಯೂನಿಯನ್ ಬ್ಯಾಂಕ್ ಮಾಕನೂರು ಕಚೇರಿ ಆವರಣದಲ್ಲಿ ಸಭೆ ನಡೆಸಲಾಗುತ್ತಿದ್ದು, ಬ್ಯಾಂಕಿನ ಶಿವಮೊಗ್ಗ ಪ್ರಾದೇಶಿಕ ಶಾಖೆಯ ಹಿರಿಯ ಅಧಿಕಾರಿಗಳನ್ನು ಕರೆಸಿ ನ್ಯಾಯ ದೊರಕಿಸಿ ಕೊಡಬೇಕೆಂದು ಮನವಿ ಮಾಡಿದರು.


ಈ ಸಂದರ್ಭದಲ್ಲಿ ಹರಿಹರಗೌಡ ಪಾಟೀಲ, ಬಸವರಾಜ, ನಿಂಗರೆಡ್ಡಿ, ಜಮಾಲ್‌ಸಾಬ್, ಕಲ್ಲಪ್ಪ ಕುರುಡಣ್ಣನವರ್, ಹನುಮಪ್ಪ ದೊಡ್ಡಬಿದರಿ, ಮಂಜನಗೌಡ ಪಾಟೀಲ, ಬಸನಗೌಡ ಪಾಟೀಲ, ಚನ್ನಬಸಪ್ಪ ಮಾವಿನತೋಪ, ಬಸನಗೌಡ ಹುಲ್ಲತ್ತಿ ಇದ್ದರು.

## ಉಪನ್ಯಾಸಕ ಡಾ. ಗಂಗಾಧರಯ್ಯ ಹಿರೇಮಠ ನಿವೃತ್ತಿ - ಬೀಳ್ಕೊಡುಗೆ



ದಾವಣಗೆರೆ, ಜು.18- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಮ್ಮ ಸುದೀರ್ಘ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಡಾ. ಗಂಗಾಧರಯ್ಯ ಹಿರೇಮಠ ಅವರಿಗೆ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಸನ್ಮಾನಿಸಿ ಬೀಳ್ಕೊಟ್ಟರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಎಸ್.ಆರ್. ಅಂಜಿನಪ್ಪ, ಪ್ರೊ.ಭೀಮಣ್ಣ ಸುಣಗಾರ, ಕಾಲೇಜು ಅಭಿವೃದ್ಧಿ ಸಮಿತಿ ಮಾಜಿ ಸದಸ್ಯ ಮುರಿಗೇಂದ್ರಪ್ಪ, ಡಾ. ಕೊಟ್ರಪ್ಪ, ಡಾ. ಸೋಮಶೇಖರ್, ಡಾ. ದಿನೇಶ್, ಡಾ. ಯೋಗೀಶ್, ಡಾ. ಗೌರಮ್ಮ ಡಾ. ಶಿರಾಲತಾ, ಪ್ರೊ. ಲಕ್ಷ್ಮಿ, ಪತ್ರಾಂಕಿತ ವ್ಯವಸ್ಥಾಪಕರಾದ ಗೀತಾದೇವಿ ಮತ್ತಿತರರು ಉಪಸ್ಥಿತರಿದ್ದರು.

# ಜಿಲ್ಲಾ ಕಾಂಗ್ರೆಸ್ ಎಸ್ಸಿ ವಿಭಾಗಕ್ಕೆ ಕುಕ್ಕುವಾಡದ ಮಂಜುನಾಥ್ ಅಧ್ಯಕ್ಷ



ದಾವಣಗೆರೆ, ಜು.18- ಜಿಲ್ಲಾ ಕಾಂಗ್ರೆಸ್ ಎಸ್ಸಿ ವಿಭಾಗದ ನೂತನ ಜಿಲ್ಲಾಧ್ಯಕ್ಷರನ್ನಾಗಿ ತಾ.ಪಂ. ಮಾಜಿ ಅಧ್ಯಕ್ಷ ಕುಕ್ಕುವಾಡದ ಕೆ.ಎನ್. ಮಂಜುನಾಥ್ ಅವರನ್ನು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ ಮಂಜಪ್ಪ ಅವರ ಶಿಫಾರಸ್ಸಿನ ಮೇರೆಗೆ ಕೆಪಿಸಿಸಿ ಎಸ್ಸಿ ವಿಭಾಗದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಅವರು ನೇಮಕ ಮಾಡಿದ್ದಾರೆ.

# ಎ.ಸಿ.ಬಿ. ದಾಖಲೆ ಕೇಳುವ ಹೈಕೋರ್ಟ್ ಆದೇಶಕ್ಕೆ ತಡೆ

ನವದೆಹಲಿ, ಜು. 18 – ಜಾಮೀನು ಅರ್ಜಿಯೊಂದರ ವಿಚಾರಣೆ ನಡೆಸುವಾಗ ಭ್ರಷ್ಟಾಚಾರ ನಿಗ್ರಹ ದಳ ಪ್ರಕರಣ ಕೈ ಬಿಡಲು ಸಲ್ಲಿಸಿದ ವರದಿಗಳು ಹಾಗೂ ಅಧಿಕಾರಿಗಳ ಸೇವಾ ದಾಖಲೆಗಳನ್ನು ಸಲ್ಲಿಸುವಂತೆ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್ ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.

ಮುಖ್ಯ ನ್ಯಾಯಮೂರ್ತಿಗಳಾದ ಎನ್.ವಿ. ರಮಣ ಹಾಗೂ ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಮತ್ತು ಹಿಮಾ ಕೊಹ್ಲಿ ಅವರನ್ನು ಒಳಗೊಂಡ ಪೀಠ ಈ ಆದೇಶಕ್ಕೆ ತಡೆಯಾಜ್ಞೆ ಹೊರಡಿಸಿದೆ. ಜಾಮೀನು ಅರ್ಜಿಯ ವ್ಯಾಪ್ತಿಗೆ ಹೊರತಾಗಿ ನ್ಯಾಯಾಲಯ ಅಪ್ರಸ್ತುತ ಟಿಪ್ಪಣಿ ಮಾಡಿದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಆದರೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನ್ಯಾಯಮೂರ್ತಿ ಮಾಡಿರುವ ಕೆಲ ಟಿಪ್ಪಣಿಗಳನ್ನು ತೆಗೆದು ಹಾಕಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಭ್ರಷ್ಟಾಚಾರ ನಿಗ್ರಹ ದಳ ಕಲೆಕ್ಷನ್ ಸೆಂಟರ್ ಆಗಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಟಿಪ್ಪಣಿ ಮಾಡಿದ್ದರು.

ಜಾಮೀನಿಗೆ ಸಂಬಂಧಿಸದೇ ಇರದ ವಿಷಯಗಳ ಬಗ್ಗೆ ಹೊರಡಿಸಲಾದ ಸೂಚನೆಗಳಿಗೆ ತಡೆಯಾಜ್ಞೆ ಹೊರಡಿಸಲಾಗಿದೆ. ಆರೋಪಿಯ ಜಾಮೀನು ಅರ್ಜಿಯನ್ನು ಹೈಕೋರ್ಟ್ ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

2016ರ ನಂತರ ಎ.ಸಿ.ಬಿ. ತೆರೆ ಎಳೆದಿರುವ ಪ್ರಕರಣಗಳ ಬಗ್ಗೆ ವರದಿ ನೀಡಬೇಕು. ಎ.ಡಿ.ಜಿ.ಪಿ. ಸೇರಿದಂತೆ ಹಲವು ಅಧಿಕಾರಿಗಳ ಗೌಪ್ಯ ಸೇವಾ ವರದಿಗಳನ್ನು ಹಾಜರು ಪಡಿಸಬೇಕು ಎಂದು ಹೈಕೋರ್ಟ್ ನ್ಯಾಯಮೂರ್ತಿ ಸಂದೇಶ್ ಆದೇಶ ಹೊರಡಿಸಿದ್ದರು.

ಈ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ, ಭ್ರಷ್ಟಾಚಾರ ನಿಗ್ರಹ ದಳದ ಎ.ಡಿ.ಜಿ.ಪಿ ಸೀಮಂತ್ ಕುಮಾರ್ ಸಿಂಗ್ ಹಾಗೂ ಜೈಲಿನಲ್ಲಿರುವ ಅಧಿಕಾರಿ ಜೆ. ಮಂಜುನಾಥ್ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

## ಸಂಸದ ಸಿದ್ದೇಶ್ವರರಿಂದ ಮತದಾನ




ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ದೆಹಲಿಯಲ್ಲಿ ರಾಷ್ಟ್ರಪತಿ ಚುನಾವಣೆಗೆ ಮತದಾನ ಮಾಡಿದರು.

## ನಗರದಲ್ಲಿ ನಾಳೆ ಕಾಂ. ಹೆಚ್.ಅಡಿವೆಪ್ಪ ಭವನ ಉದ್ಘಾಟನೆ

ದಾವಣಗೆರೆ, ಜು. 18- ನಾಡಿದ್ದು ದಿನಾಂಕ 20ರ ಬುಧವಾರ ನಗರದ ಈರುಳ್ಳಿ ಮಾರ್ಕೆಟ್ ರಸ್ತೆಯ ಶೇಖರಪ್ಪ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಕಾಂ. ಹೆಚ್. ಅಡಿವೆಪ್ಪ ಭವನ ಉದ್ಘಾಟಿಸಲಾಗುವುದು ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ. ಸಿಪಿಐ ರಾಜ್ಯ ಕಾರ್ಯದರ್ಶಿ ಕಾಂ. ಸಾತಿ ಸುಂದರೇಶ್ ಭವನ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ ಕಾಂ. ಪಿ.ವಿ. ಲೋಕೇಶ್, ಮಹಾನಗರ ಪಾಲಿಕೆ ಸದಸ್ಯ ಶಿವಪ್ರಕಾಶ್ ಮತ್ತಿತರರು ಆಗಮಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಪಿಐ ಜಿಲ್ಲಾ ಮಂಡಳಿ ಖಜಾಂಚಿ ಕಾಂ ಆನಂದ ರಾಜ್ ವಹಿಸುವರು. ಸಿಪಿಐ ಜಿಲ್ಲಾ ಸಹ ಕಾರ್ಯದರ್ಶಿ ಕಾಂ. ಹೆಚ್.ಜಿ. ಉಮೇಶ್, ಕಾಂ. ಆವರಗೆರೆ ವಾಸು ಉಪಸ್ಥಿತರಿರುವರು.

# ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಉದ್ಘಾಟನೆ



ದಾವಣಗೆರೆ, ಜು. 18 -ಮತ್ತೊಬ್ಬರಿಗೆ ಗುಲಾಮರಾಗದೆ ಆ ಗುಲಾಮಗಿರಿಯಿಂದ ಮುಕ್ತಿ ಪಡೆದಿರುವಂತಹ ಸ್ವಾತಂತ್ರ್ಯವಾದ ದೇಶ ನಮ್ಮ ಭಾರತ ದೇಶವಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಾಮದೇವಪ್ಪ ಹೇಳಿದರು.

ಸೋಮವಾರ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತನ್ನದೇ ಆದ ಸಾರ್ವಭೌಮತ್ವ, ತನ್ನದೇ ಆದ ಆಡಳಿತ ಈ ಎಲ್ಲಾ ಅಂಶಗಳನ್ನು ಯಾವ ದೇಶ ಒಳಗೊಂಡಿರುತ್ತದೆಯೋ ಆ ರಾಷ್ಟ್ರ ಸ್ವಾತಂತ್ರ್ಯ ರಾಷ್ಟ್ರ ಎನಿಸಿಕೊಳ್ಳುತ್ತದೆ. ನಮ್ಮ ನೇತಾರರು ನಮಗೆ ಗಳಿಸಿ ಕೊಟ್ಟ ಸ್ವಾತಂತ್ರ್ಯ ವನ್ನು ನಾವು-ನೀವೆಲ್ಲಾ ಉಳಿಸಿಕೊಂಡು ಹೋಗಬೇಕು ಎಂದು ಹೇಳಿದರು.

ಇತಿಹಾಸವನ್ನು ತಿಳಿದವನು ಇತಿಹಾಸವನ್ನು ರಚಿಸುತ್ತಾನೆ, ಭಾರತದ ಇತಿಹಾಸವನ್ನು ಎಲ್ಲರೂ ತಿಳಿದುಕೊಂಡಿರಬೇಕು. ಜನನಿ ತಾನೇ ಮೊದಲ ಗುರು ಜನನಿಯಿಂದ ಪಾಠ ಕಲಿತ ಜನರು ಧನ್ಯರು ಎಂಬಂತೆ ಬದುಕಬೇಕು ಎಂದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲ ಪ್ರೊ. ಗಿರಿಸ್ವಾಮಿ, ದೈಹಿಕ ಶಿಕ್ಷಣ ನಿರ್ದೇಶಕಿ ಡಾ. ರೇಖಾ, ಎನ್‌ಸಿಸಿ ಅಧಿಕಾರಿ ಡಾ.ಸದಾಶಿವ, ಪ್ರೊ. ನರೇಶ್, ಪ್ರೊ. ಲಕ್ಷ್ಮಿ, ಡಾ.ರಿಹಾನಾಬಾನು, ಡಾ. ವಿಶಾಲಾಕ್ಷಿ, ಪತ್ರಾಂಕಿತ ವ್ಯವಸ್ಥಾಪಕಿ ಗೀತಾದೇವಿ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


ಕಾಲೇಜಿನ ವಿದ್ಯಾರ್ಥಿನಿ ಕು.ಹಸೀನಾ ಪ್ರಾರ್ಥನೆ ಹಾಡಿದರು, ಸಾಂಸ್ಕೃತಿಕ ವೇದಿಕೆ ಸಂಚಾಲಕಿ ಡಾ.ಲತಾ, ಸ್ವಾಗತಿಸಿದರು, ಪ್ರೊ. ಭೀಮಣ್ಣ ಸುಣಗಾರ ವಂದಿಸಿದರು. ಬಸವರಾಜ್ ನಿರೂಪಣೆ ನಡೆಸಿಕೊಟ್ಟರು.

## ನಾಯಕ ಸಮಾಜದ ಪ್ರತಿಭಟನೆ; ಅಧ್ಯಕ್ಷ ವೀರಣ್ಣ ಧನ್ಯವಾದ

ದಾವಣಗೆರೆ, ಜು. 18- ಮೊನ್ನೆ ನಡೆದ ಸ್ವಾಭಿಮಾನಿ ಹೋರಾಟದಲ್ಲಿ ದಾವಣಗೆರೆ ನಾಯಕ ವಿದ್ಯಾರ್ಥಿ ನಿಲಯದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪಾದಪಾತ್ರೆಯ ಮೂಲಕ ಪ್ರತಿಭಟನೆಯಲ್ಲಿ ಪಾಲ್ಗೊಂಡು ಪ್ರತಿಭಟನೆಯನ್ನು ಯಶಸ್ವಿಗೊಳಿಸಿದ ಎಲ್ಲಾ ಸ್ವಾಭಿಮಾನಿ ಎಸ್ಸಿ /ಎಸ್ಟಿ ಜನಾಂಗದ ಮುಖಂಡರುಗಳಿಗೆ, ಎಲ್ಲಾ ಸಂಘ, ಸಂಸ್ಥೆಯ ತಾಲ್ಲೂಕುಗಳ ಅಧ್ಯಕ್ಷರು, ಪದಾಧಿಕಾರಿಗಳಿಗೆ, ಸರ್ಕಾರಿ ನೌಕರರಿಗೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಜಿಲ್ಲಾಧ್ಯಕ್ಷ ಬಿ.ವೀರಣ್ಣ ಅವರು ಧನ್ಯವಾದ ತಿಳಿಸಿದ್ದಾರೆ.

# ಪರಿಪಕ್ವತೆ ಹೊಂದಲು ಪೂರ್ವ ಸಿದ್ಧತೆ ಬೇಕು

## ಜಿಎಂಐಟಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಡಾ|| ವೈ. ವಿಜಯಕುಮಾರ್



ದಾವಣಗೆರೆ,ಜು.18- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ 'ಎಕ್ಸೋಟಿಕ್' (ಫೋರಂ)ನ ಸಮಾರೋಪ ಹಾಗೂ 8ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ|| ವೈ. ವಿಜಯಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಸಫಲರಾಗಲು ಮತ್ತು ಪರಿಪಕ್ವತೆ ಹೊಂದಲು ಪೂರ್ವ ಸಿದ್ಧತೆ ಮತ್ತು ಸರಿಯಾದ ಕಾರ್ಯಯೋಜನೆ ಬಹಳ ಮಹತ್ವವಾದ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರು ಹೆಚ್‌ಆರ್‌ಐಟಿ ರಿಕ್ರೂಟ್‌ಮೆಂಟ್ ಆಕ್ಸೆಂಚರ್ ಕೋಚ್ ಹಾಗು ಜಿಎಂಐಟಿ ಹಳೆಯ ವಿದ್ಯಾರ್ಥಿನಿ ಎಂ.ಅಪೂರ್ವ ಮಾತನಾಡಿ, ವಿದ್ಯಾರ್ಥಿಗಳು ಒಂದು ಉದ್ಯೋಗವನ್ನು ಪಡೆಯಲು ಅವರಲ್ಲಿರಬೇಕಾದ ಅರ್ಹತೆಗಳ ಬಗ್ಗೆ ತಿಳಿಸಿಕೊಟ್ಟರು. ಫೋರಮ್ ಎಕ್ಸೋಟಿಕ್‌ನ ಅಧ್ಯಕ್ಷ ಡಾ|| ಬಿ.ಎಸ್. ಸುನೀಲ್ ಕುಮಾರ್ ಮಾತನಾಡಿದರು.

ಆಡಳಿತ ಮಂಡಳಿ ಪ್ರತಿನಿಧಿ ವೈ.ಯು. ಸುಭಾಷ್ಚಂದ್ರ, ಸಂಯೋಜಕರಾದ ಪ್ರೊ|| ನಸ್ರೀನ್‌ತಾಜ್ ಎಂ.ಬಿ. ಮತ್ತಿತರರು ಪಾಲ್ಗೊಂಡಿದ್ದರು. ಮನವಿ.ಎಂ. ಹಾಗು ಲಕ್ಷ್ಮಿ ಪ್ರಾರ್ಥಿಸಿದರು. ನಿಸರ್ಗ ಹಾಗು ಸಹನಾ ಎಂ.ಎಸ್ ಸ್ವಾಗತಿಸಿದರು. ಆರುಷಿ. ಎಸ್.ಅಗಡಿ ಫೋರಂನ ಚಟುವಟಿಕೆಗಳ ವಿವರಣೆ ನೀಡಿದರು. ನಿಹಾಲ್.ವಿ ಖರ್ಚು-ವೆಚ್ಚಗಳ ವಿವರಣೆ ನೀಡಿದರು. ಅನುಷಾ.ಆರ್. ಸಿಂಗ್ ಅತಿಥಿಗಳನ್ನು ಪರಿಚಯಿಸಿದರು. ಚೇತನ್. ಜಿ.ಸಿ. ಮತ್ತು ಸಹನಾ ಶೆಟ್ಟರ್ ನಿರೂಪಿಸಿದರು.

# ಮಾಜಿ ಸೈನಿಕರ ಮಕ್ಕಳಿಗೆ ಪುಸ್ತಕ, ಶಿಷ್ಯ ವೇತನಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು. 18- ಮಿಲಿಟರಿ ಪಿಂಚಣಿ ರಹಿತ ಕರ್ನಾಟಕದ ಮಾಜಿ ಸೈನಿಕರ ಹಾಗೂ ಕರ್ನಾಟಕದಲ್ಲಿ ನೆಲೆಸಿರುವ ಹೊರ ರಾಜ್ಯದ ಮಿಲಿಟರಿ ಪಿಂಚಣಿದಾರ ಮಾಜಿ ಸೈನಿಕರ ಮಕ್ಕಳಿಗೆ (ಅಧಿಕಾರಿಗಳನ್ನು ಹೊರತುಪಡಿಸಿ) ಶಿಷ್ಯವೇತನ ಮತ್ತು ಪುಸ್ತಕ ಅನುದಾನದ ಮಂಜೂರಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಒಂದನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ ಓದುವವರಿಗೆ ಪುಸ್ತಕ ಅನುದಾನ ಹಾಗೂ ಪದವಿ ಮತ್ತು ಡಿಪ್ಲೋಮಾ ಜೆ.ಓ.ಸಿ, ಪ್ರೊಫೆಷನಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಾಜಿ ಸೈನಿಕರ ಮಕ್ಕಳು ಅರ್ಜಿ ಸಲ್ಲಿಸಬಹುದು.

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಿಂದ ಶುಲ್ಕರಹಿತವಾಗಿ ಅರ್ಜಿಗಳನ್ನು ಪಡೆದು ಭರ್ತಿ ಮಾಡಿ, ನಿಗದಿತ ದಾಖಲಾತಿಗಳೊಂದಿಗೆ ನ.30 ರೊಳಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಚೇರಿ ಶಿವಮೊಗ್ಗ ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಶಿವಮೊಗ್ಗ ಕಚೇರಿಯ ದೂರವಾಣಿ ಸಂಖ್ಯೆ 08182-220925 ಯನ್ನು ಸಂಪರ್ಕಿಸಬಹುದೆಂದು.

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು (ಪ್ರಭಾರ) ತಿಳಿಸಿದ್ದಾರೆ.

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ನಾಗರಿಕರಿಗೂ ತಿಳಿಯಪಡಿಸುವುದೇನೆಂದರೆ ಶ್ರೀ ಲೋಕೇಶ್, ಕು. ಶಿಲ್ಪಾ, ಶ್ರೀ ಹನುಮಂತಪ್ಪ ಮತ್ತು ಶ್ರೀ ಚಂದ್ರಪ್ಪ (ವಾದಿಗಳು/ಅಪೀಲುದಾರರು) ಇವರುಗಳು ಶಾರದಮ್ಮ, ಬಿ. ಎನ್.ಹನುಮಂತಪ್ಪ, ರಾಮಪ್ಪ, ಶಾರದಮ್ಮ, ನಿಂಗಪ್ಪ, ರಾಮಚಂದ್ರ ರಾವ್ ಶಾನಬೋಗ್, ಕೆ. ಎಂ.ನಿಂಗಪ್ಪ, ಕೆ.ಸಿ.ತಿಮ್ಮರಾಜು, ಕೃಷ್ಣಪ್ಪ, ಬಸಪ್ಪ, ಹನಮಂತಪ್ಪ, ಸಿದ್ದಪ್ಪ, ಚನ್ನಪ್ಪ, ನಾಗಪ್ಪ, ಹನಮಂತಪ್ಪ, ನರಸಿಂಹಪ್ಪ, ಐ.ರಾಜಶೇಖರಪ್ಪ, ಐ.ಬಸವರಾಜಪ್ಪ, ಐ.ರುದ್ರಪ್ಪ, ಐ.ಪ್ರಭಾಕರ್ (ಪೌತಿ) ಇವರ ಪತ್ನಿ ಶ್ರೀಮತಿ ಬಸಮ್ಮ (ಪ್ರತಿವಾದಿಗಳು/ಎದುರುದಾರರು) ಇವರ ವಿರುದ್ಧ ಈ ಕೆಳಗಿನ ಅನುಸೂಚಿಯಲ್ಲಿ ವರ್ಣಿಸಲಾದ ಸ್ವತ್ತಿನ ಮೇಲೆ ಅಸಲು ದಾವೆ ಸಂಖ್ಯೆ:98/2012, ಅಸಲು ದಾವೆ ಸಂ:144/2011 ಮತ್ತು ಸಿವಿಲ್ ಮಿಸ್‌ಲೇನಿಯಸ್ ಸಂ:9/2012 ಗಳ ಪ್ರಕರಣಗಳನ್ನು ಸಲ್ಲಿಸಿದ್ದು ಇರುತ್ತದೆ. ಇವುಗಳು ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ (ಹಿ.ವಿ) ದಾವಣಗೆರೆ ಇಲ್ಲಿ ಸದರಿ ಪ್ರಕರಣಗಳು ಪ್ರಸ್ತುತ ಈಗ ಇತ್ಯರ್ಥಗೊಂಡು, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದಾವಣಗೆರೆ ಇಲ್ಲಿ ಅಪೀಲು ಸಂಖ್ಯೆ ಆರ್.ಎ.80/2018 ಚಾಲ್ತಿಯಲ್ಲಿದ್ದು, ಪ್ರಸ್ತುತ ಈಗ ಈ ದಾವೆಯಲ್ಲಿರುವ ಸ್ವತ್ತನ್ನು ಪ್ರತಿವಾದಿಯರು / ಎದುರುದಾರರು ಮೇಲಿನ ಪ್ರಕರಣಗಳನ್ನು ಮರೆಮಾಚಿ ಸಾರ್ವಜನಿಕರಿಗೆ ಮಾರಲು ಪ್ರಯತ್ನಿಸಿದ್ದು ಈ ಕೆಳಗಿನ ಅನುಸೂಚಿಯ ಸ್ವತ್ತನ್ನು ಸಾರ್ವಜನಿಕರು ಖರೀದಿಸಬಾರದೆಂದು ಎಚ್ಚರಿಕೆ ನೀಡಲಾಗುತ್ತಿದೆ ಮತ್ತು ಯಾವುದೇ ರೀತಿಯ ವ್ಯಾಪಾರ, ವಹಿವಾಟು, ಪರಭಾರೆಗಳಲ್ಲಿ ತೊಡಗಬಾರದೆಂದು ಮತ್ತು ಈ ಕೆಳಗಿನ ಸ್ವತ್ತಿನ ರಾಜಸ್ವ ದಾಖಲೆಗಳನ್ನು ಮಾರ್ಪಾಡು ಮಾಡುವ ಕಾರ್ಯ ಚಟುವಟಿಕೆಗಳಲ್ಲಿ ಸಹ ತೊಡಗಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಆದಾಗ್ಯೂ ಸಾರ್ವಜನಿಕರು ಮಾರಾಟ ಪ್ರಕ್ರಿಯೆಯಲ್ಲಿ ಅಥವಾ ಇತರೆ ವ್ಯಾಪಾರ, ವ್ಯವಹಾರ ಮತ್ತು ರಾಜಸ್ವ ದಾಖಲೆಗಳ ಬದಲಾವಣೆಯ ಚುಟುವಟಿಕೆಗಳಲ್ಲಿ ತೊಡಗಿದರೆ, ಅಂತವರು ಕಾನೂನಿನ ಸಮಸ್ಯೆಯನ್ನು ಎದುರಿಸಿಬೇಕಾಗುತ್ತದೆ ಮತ್ತು ಅಂತವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಈ ಮೂಲಕ ತಿಳಿಯತಕ್ಕದ್ದು.

**ಅನುಸೂಚಿ**

ಕುಂದುವಾಡ ಗ್ರಾಮ, ದಾವಣಗೆರೆ ತಾಲ್ಲೂಕಿನಲ್ಲಿರುವ ಸರ್ವೆ ನಂ.159, ವಿಸ್ತೀರ್ಣ 12 ಎಕರೆ 3 ಗುಂಟೆಗಳು ಆಕಾರ ರೂ.4.00 ಇದಕ್ಕೆ ಚಕ್ಕುಬಂದಿ ಪೂರ್ವಕ್ಕೆ : ಚನ್ನಗಿರಿ ರಂಗಪ್ಪನವರ ಜಮೀನು, ಪಶ್ಚಿಮಕ್ಕೆ : ನಿಟುವಳ್ಳಿ ಭೀಮಪ್ಪ ಮತ್ತು ಬೆಳ್ಳೂಡಿ ಮಹಾದೇವಪ್ಪನವರ ಜಮೀನು, ಉತ್ತರಕ್ಕೆ : ಕಾಯಕದ ಮಹೇಶಪ್ಪ ಮತ್ತು ಷಡಕ್ಷಪ್ಪಯ್ಯನವರ ಜಮೀನು, ದಕ್ಷಿಣಕ್ಕೆ ಹಳೇ ಚಾನಲ್‌ನ ಏರಿ ಮತ್ತು ಮಾರಾಟಗಾರರಿಗೆ ಸಂಬಂಧಿಸಿದ ಜಮೀನು.

**ಸಹಿ/- ಅಜಯ್.ಸಿ**
ಮೇಲ್ಮನವಿದಾರರ ಪರ ವಕೀಲರು
ದಾವಣಗೆರೆ. (ಮೊ: 97430 19896)

**ಮೇಲ್ಮನವಿದಾರರು**
99014 20688

ಭರ್ತಿಯಾದ ಜಲಾಶಯಗಳು



ಶಿವಮೊಗ್ಗ ಸಮೀಪ ಇರುವ ಗಾಜನೂರು ತುಂಗಾ ಜಲಾಶಯಕ್ಕೆ ಹರಿದು ಬರುವ ಎಲ್ಲಾ ನೀರನ್ನು 20 ಕ್ರೆಸ್ ಗೇಟ್‌ಗಳ ಮೂಲಕ ತುಂಗಾ ನದಿಗೆ ಬಿಟ್ಟಿದ್ದು, ಈ ದೃಶ್ಯ ಡ್ರೋನ್ ಕಣ್ಣಲ್ಲಿ ಕಂಡಿದ್ದು ಹೀಗೆ...



ಹೊಸಪೇಟೆ ಬಳಿ ಇರುವ ತುಂಗಭದ್ರಾ ಜಲಾಶಯವು ಸಂಪೂರ್ಣವಾಗಿ ಭರ್ತಿಯಾಗಿದ್ದು, ಜಲಾಶಯದ 33 ಕ್ರೆಸ್ಟ್ ಗೇಟ್‌ಗಳ ಮುಖಾಂತರ ಸುಮಾರು 1 ಲಕ್ಷಕ್ಕೂ ಅಧಿಕ ಕ್ಯೂಸೆಕ್ಸ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್. ಸೂಚ್ ಗಾರ್ಮೆಂಟ್ಸ್, ಶೈಲೈ ಶೋ ರೂಂ., ಗುಂಡಿ ಚೌಟ್ರಿ, ಚಿರಾಗ್ ಫಾರ್ಮಾ, ದಾವಣಗೆರೆ ನೇತ್ರಾಲಯ, ಎಂಸಿಸಿ ಬಿ ಬ್ಲಾಕ್ 2 ಮತ್ತು 3 ನೇ ಮೇನ್ 2 ನೇ ಅಡ್ಡ ರಸ್ತೆ ಸುತ್ತಮುತ್ತಲಿನ ಪ್ರದೇಶಗಳು, ಎಸ್. ಎಸ್. ಲೇಔಟ್ ಎ ಬ್ಲಾಕ್, ಅಥಣಿ ಕಾಲೇಜು, ಎಂಬಿಎ ಕಾಲೇಜು, ಆಫೀಸರ್ಸ್ ಕ್ಲಬ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಎಸ್‌ವಿಟಿ ಫೀಡರ್ ಎಫ್-1 ವ್ಯಾಪ್ತಿಯ ಡೆಂಟಲ್ ಕಾಲೇಜು ರಸ್ತೆ, ಸಿಟಿ ಮೆಡಿಕಲ್ ಹಾಸ್ಟೆಲ್, ಮಾಮಾಸ್ ಜಾಯಿಂಟ್ ಹೋಟೆಲ್, ಎಸ್‌ಬಿಐ ಬ್ಯಾಂಕ್, ಕೊಟ್ರೇಶ್ವರ ಬೆಣ್ಣೆ ದೋಸೆ ಹೋಟೆಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

# ಮಠಕ್ಕೆ ಹೆಸರು ಬರುವುದು ಶ್ರೀಮಂತಿಕೆಯಿಂದಲ್ಲ

## ತರಳಬಾಳು ಗುರು ಪರಂಪರೆ ಕುರಿತ 'ದಂದಣ-ದತ್ತಣ' ಗೋಷ್ಠಿಯಲ್ಲಿ ಪಂಡಿತಾರಾಧ್ಯ ಶ್ರೀ




ಸಾಣೇಹಳ್ಳಿ, ಜು. 18- ಇಲ್ಲಿನ ಎಸ್.ಎಸ್. ರಂಗಮಂದಿರದಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿ ಹಿರಿಯ ಪ್ರಾಥಮಿಕ ಶಾಲೆ ವತಿಯಿಂದ 'ತರಳಬಾಳು ಗುರು ಪರಂಪರೆ' ಕುರಿತ 'ದಂದಣ-ದತ್ತಣ' ಗೋಷ್ಠಿಯನ್ನು ಏರ್ಪಡಿಸಲಾಗಿತ್ತು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮಠದ ಮೂಲ ಪುರುಷ ಮರುಳಸಿದ್ಧರು ತಮ್ಮ ಕರ್ತೃತ್ವ ಶಕ್ತಿಯಿಂದ, ಜನಪರ ಕಾಳಜಿಯಿಂದ ಗುರುವಾದರು, ವಿಶ್ವಬಂಧುವಾದರು ಎಂದು ಮಠದ ಪರಂಪರೆ ಬಗ್ಗೆ ವಿವರಿಸಿದರು.

ಒಂದು ಮಠಕ್ಕೆ ಹೆಸರು ಬರುವುದು ಅದು ಹೊಂದಿರುವ ಆಸ್ತಿ, ಹಣ, ಶ್ರೀಮಂತಿಕೆಯಿಂದಲ್ಲ; ಆ ಮಠ ಎಷ್ಟರಮಟ್ಟಿಗೆ ಜನರನ್ನು ಜಾಗೃತಗೊಳಿಸಿದೆ, ಶಿಕ್ಷಿತರನ್ನಾಗಿಸಿದೆ, ಸ್ವಾಭಿಮಾನಿಗಳನ್ನಾಗಿಸಿದೆ, ಸ್ವಾವಲಂಬಿಗಳನ್ನಾಗಿಸಿದೆ ಎನ್ನುವುದರ ಮೂಲಕ. ತರಳಬಾಳು ಜಗದ್ಗುರು ಬೃಹನ್ಮಠ ಸಾಕಷ್ಟು ಜಗದೊಳಿತಿನ ಕೆಲಸಗಳನ್ನು ಮಾಡಿದೆ, ಮಾಡುತ್ತಲಿದೆ, ಮುಂದೂ ಕೂಡ ಮಾಡುತ್ತದೆ.

ಶ್ರೀಮಠದಿಂದ ಉಪಕೃತರಾದವರು ಮಠದ ಪರಂಪರೆಯನ್ನು ಇನ್ನಷ್ಟು ಭವ್ಯವಾಗಿ ಬೆಳೆಸುವ ಸಂಕಲ್ಪ ಮಾಡಬೇಕು.

ಮೊದಲಿಗೆ 'ದಂದಣ ದತ್ತಣ' ಗೋಷ್ಠಿಯನ್ನು ಸಿರಿಗೆರೆಯಲ್ಲಿ ಆರಂಭಿಸಿದವರು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳವರು. ಆ ಗೋಷ್ಠಿಯಲ್ಲಿ ನಾವೂ ಸಹ ಮಾತನಾಡಿದ್ದೆವು. ಬಸವಣ್ಣನವರ ವಚನದಲ್ಲಿ ಬರುವ 'ದಂದಣ-ದತ್ತಣ'ದ ಅರ್ಥ 'ತೊದಲು ನುಡಿ' ಎನ್ನಬಹುದು. ಈ ತೊದಲ್ನುಡಿ ನಂತರ ಪ್ರೌಢ ನುಡಿಯಾಗಬೇಕು. ವಿದ್ಯಾರ್ಥಿಗಳು ವಚನಗಳನ್ನು ಕಲಿತು, ಅರ್ಥೈಸಿಕೊಂಡು, ಬದುಕಿನಲ್ಲಿ ಅಳವಡಿಸಿಕೊಂಡರೆ ಬದುಕು ಭವ್ಯವಾಗುವುದು ಎಂದರು.

ಮುಖ್ಯ ಅತಿಥಿಗಳಾಗಿದ್ದ ವಿಶ್ರಾಂತ ಪ್ರಾಚಾರ್ಯ ಐ. ಜಿ. ಚಂದ್ರಶೇಖರಯ್ಯ ಮಾತನಾಡಿ, ಈ ಪೀಠ ಪರಂಪರೆಯಲ್ಲಿ ಜಾತಿ, ಧರ್ಮ, ಲಿಂಗ, ವಯಸ್ಸು ಮುಂತಾದವುಗಳ ಸೋಂಕಿಲ್ಲದೆ ಸಕಲ ಜೀವಾತ್ಮರಿಗೆ ಲೇಸ ಬಯಸುತ್ತಾ ಬಂದಿದೆ. ಅಲ್ಲದೇ ಸದಾ ಜೀವಪರ ಕಾಳಜಿಯಿಂದ ಪ್ರಭುತ್ವದ ವಿರುದ್ಧ ಧ್ವನಿಯೆತ್ತುವ ಏಕೈಕ ಪೀಠ ತರಳಬಾಳು ಪೀಠ ಆಗಿದೆ, ಇದಕ್ಕೆ ಪ್ರಸ್ತುತ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ದಿಟ್ಟ ನಿಲುವುಗಳನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಪೀಠದ ಆಶಯದಂತೆ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ವಿದ್ಯಾರ್ಥಿ ಭಾಷಣಕಾರರಾದ ಜಿ. ಎ. ತೋರಣ 'ತರಳಬಾಳು ಪೀಠದ ಮೂಲ', ಎಂ. ಚಂದನ 'ತರಳಬಾಳು ಗುರು ಪರಂಪರೆ', ಜಿ. ವಿಜಯಚೇತನ್ 'ಪರಂಪರೆಯ ಮುಂದುವರಿಕೆ', ಜೆ.ಎಸ್.ಲಾವಣ್ಯ 'ಶಾಖಾಮಠಗಳು', ಎಂ.ಪಿ. ನಾಗವೇಣಿ 'ಸಾಣೇಹಳ್ಳಿ ಶ್ರೀಮಠ' ಕುರಿತು ಮಾತನಾಡಿದರು.

ಶ್ರೀ ಶಿವಕುಮಾರ ಸ್ವಾಮೀಜಿ ಸಂಗೀತ ಶಾಲೆಯ ಮಕ್ಕಳು ಸಂಗೀತ ಅಧ್ಯಾಪಕ ಹೆಚ್.ಎಸ್. ನಾಗರಾಜ್ ನೇತೃತ್ವದಲ್ಲಿ ವಚನಗೀತೆಗಳನ್ನು ಹಾಡಿದರು. ವಿದ್ಯಾರ್ಥಿ ನೂತನ್ ಸ್ವಾಗತಿಸಿದರೆ, ಮೀನಾಕ್ಷಿ ಕಾರ್ಯಕ್ರಮ ನಡೆಸಿಕೊಟ್ಟರು. ಜಿ. ಎಸ್. ಮಲ್ಲಿಕಾರ್ಜುನ್ ವಂದಿಸಿದರು.

'ಸಿರಿಗೆರೆಯ ಸೀಮಂತ, ತರಳಬಾಳು ಧೀಮಂತ' ಎನ್ನುವ ಭಕ್ತಿಗೀತೆಗೆ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಆಕರ್ಷಕ ನೃತ್ಯರೂಪಕ ನೀಡಿದರು.

# ಉತ್ತಮ ಆಹಾರದಿಂದ ಮಾನಸಿಕ ಸಮತೋಲನ



ದಾವಣಗೆರೆ, ಜು. 18-ಆರೋಗ್ಯವೇ ಭಾಗ್ಯ ಎಂಬ ನಾಣ್ಣುಡಿಯಂತೆ ಮುಂದಿನ ಪೀಳಿಗೆಗೆ ಆಹಾರದ ಮಹತ್ವವನ್ನು ತಿಳಿಸಿಕೊಡುವ ಅಗತ್ಯವಿದೆ. ಉತ್ತಮ ಆಹಾರದಿಂದ ಉತ್ತಮ ಮನಸ್ಸು, ಮಾನಸಿಕ ಸಮತೋಲನ ಸಿಗುತ್ತದೆ ಎಂದು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಟಿ.ಎನ್. ದೇವರಾಜ್ ಅಭಿಪ್ರಾಯಪಟ್ಟರು.

ನಗರದ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಯುಕ್ತಾಶ್ರಯದಲ್ಲಿ ತಾರಸಿ ತೋಟ ಮತ್ತು ಕೈತೋಟ ವಿಚಾರ ಸಂಕಿರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೈತೋಟದಿಂದ ಪರಿಸರ ಸ್ವಚ್ಛವಾಗಿರುವುದಲ್ಲದೆ, ನಗರ ಪ್ರದೇಶದಲ್ಲಿ ಮನೆ ಮನೆಗಳ ಲ್ಲಿನ ಬಾಂಧವ್ಯ ವೃದ್ಧಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು. ಮಕ್ಕಳನ್ನು ಕೈತೋಟದ ಕೆಲಸದಲ್ಲಿ ಬಳಸಿಕೊಂಡರೆ ಅವರಿಗೆ ಪ್ರಾಯೋಗಿಕ ನೈತಿಕ ಶಿಕ್ಷಣವನ್ನು ನೀಡಲು ಸಹಕಾರಿ ಎಂದ ಅವರು, ನಗರದ ಕೃಷಿ ವಿಜ್ಞಾನ ಕೇಂದ್ರದ ಆವರಣವನ್ನು ಗೌರವಿಸಿ, ಕಾಪಾಡಿಕೊಳ್ಳಲು ಮಹಿಳಾ ನಾಗರಿಕರಲ್ಲಿ ವಿನಂತಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ

**ತಾರಸಿ ತೋಟ ಮತ್ತು ಕೈತೋಟ ವಿಚಾರ ಸಂಕಿರಣದಲ್ಲಿ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಟಿ.ಎನ್. ದೇವರಾಜ್ ಅಭಿಮತ**

ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಬಿ. ಮಲ್ಲಾಪುರ, ತಾರಸಿ ತೋಟದಲ್ಲಿ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸಿ ತರಕಾರಿಗಳನ್ನು ಬೆಳೆದು ಸೇವಿಸಿದಾಗ ನಮಗೆ ಆತ್ಮತೃಪ್ತಿ ದೊರಕುತ್ತದೆ ಎಂದು ತಿಳಿಸಿದರು. ಪಟ್ಟಣ ಪ್ರದೇಶದಲ್ಲಿ ವಾಸಿಸುವ ಜನತೆ ಪರಿಸರ ಸಂರಕ್ಷಣೆ ಜೊತೆಗೆ ಉತ್ತಮ ಆಹಾರ ಅಭ್ಯಾಸವನ್ನು ಅನುಸರಿಸಬೇಕು. ಇದರಿಂದ ಜನರ ಆರೋಗ್ಯ ಸುಧಾರಣೆಯಾಗುವುದಲ್ಲದೆ ಸ್ವಚ್ಛ ಸಮಾಜವನ್ನು ನಿರ್ಮಿಸಲು ಸಹಾಯವಾಗುತ್ತದೆ ಎಂದರು.

ಕೇಂದ್ರದ ತೋಟಗಾರಿಕಾ ತಜ್ಞ ಎಂ.ಜಿ. ಬಸವನಗೌಡ ಮಾತನಾಡಿ, ಪ್ರಸ್ತುತ ದಾವಣಗೆರೆಯಲ್ಲಿ ತೋಟಗಾರಿಕೆ ಇಲಾಖೆಯ ಸಹಯೋಗದೊಂದಿಗೆ 3500 ಕ್ಕೂ ಹೆಚ್ಚು ಕುಟುಂಬಗಳಿಗೆ ತರಬೇತಿ ನೀಡಿದ್ದು, ಇದರಲ್ಲಿ ಶೇ. 35 ರಷ್ಟು ಕುಟುಂಬಗಳು ಇಂದಿಗೂ ಸಾವಯವ ತರಕಾರಿಗಳನ್ನು ಬೆಳೆಯುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜೇನುಗೂಡು ಮಹಿಳಾ ಸಮಾಜ, ಪರಿಪೂರ್ಣ ಮಹಿಳಾ ಸಂಘ, ಶುಭಲಕ್ಷ್ಮಿ ಮಹಿಳಾ ಸಂಘದ ಪದಾಧಿಕಾರಿಗಳು, ಸ್ಮಾರ್ಟ್ ಸಿಟಿ ಮುಖ್ಯ ಅಭಿಯಂತರ ಎಂ. ಸತೀಶ್, ಅಧಿಕಾರಿಗಳಾದ ಮಂಜುನಾಥ್, ಪ್ರದೀಪ್, ಕೇಂದ್ರದ ವಿಜ್ಞಾನಿಗಳಾದ ಡಾ. ಸುಪ್ರಿಯಾ ಪಿ. ಪಾಟೀಲ್, ಡಾ. ಅವಿನಾಶ್, ರಘುರಾಜ ಜೆ., ಡಾ. ಜಯದೇವಪ್ಪ ಜಿ.ಕೆ. ಹಾಗೂ ಸಣ್ಣಗೌಡರ್ ಹೆಚ್.ಎಂ. ಹಾಜರಿದ್ದರು.

## ಯೋಗ : ಕುರ್ಕಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ ವಿಕಾಸ್ ಜಿಲ್ಲಾ ಮಟ್ಟಕ್ಕೆ



ದಾವಣಗೆರೆ, ಜು. 18- ನಗರದ ಗುರು ಭವನದಲ್ಲಿ ಪ್ರೌಢಶಾಲಾ ಹಂತದ ಮಕ್ಕಳಿಗೆ ಏರ್ಪಡಿಸಿದ್ದ ದಾವಣಗೆರೆ ತಾಲ್ಲೂಕು ಮಟ್ಟದ ಯೋಗ ಸ್ಪರ್ಧೆಯಲ್ಲಿ ಸಮೀಪದ ಕುರ್ಕಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ ಗಳಾದ ಕೆ.ಓ. ಜೀವನ್, ಕೆ.ಪಿ. ವಿಕಾಸ್, ಕೆ.ಎನ್. ಮನೋಜ್, ಸಿ. ಮಲ್ಲಿಕಾರ್ಜುನ ಹಾಗೂ ಮಹಾಂತೇಶ್ ಭಾಗವಹಿಸಿದ್ದರು.

ಕೆ.ಪಿ. ವಿಕಾಸ್ ಅತ್ಯುತ್ತಮ ಯೋಗ ಪ್ರದರ್ಶನ ನೀಡುವುದ ರೊಂದಿಗೆ ತಾಲ್ಲೂಕು ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ. ವಿಕಾಸ್ ಅವರನ್ನು ಶಾಲಾ ಮುಖ್ಯೋಪಾಧ್ಯಾಯ ಆರ್. ಗಣೇಶಾಚಾರ್, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಓಂಕಾರಪ್ಪ ಅಭಿನಂದಿಸಿದ್ದಾರೆ.

## ಕೊರೊನಾದಿಂದ ಸಾವು : ತಕ್ಷಣ ಪರಿಹಾರ ನೀಡಲು ಸುಪ್ರೀಂ ಸೂಚನೆ

ನವದೆಹಲಿ, ಜು. 18 – ಕೊರೊನಾದಿಂದ ಸಾವನ್ನಪ್ಪಿದವರ ಕುಟುಂಬಗಳಿಗೆ ತಕ್ಷಣವೇ ಪರಿ ಹಾರ ನೀಡುವಂತೆ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ನ್ಯಾಯಮೂರ್ತಿಗಳಾದ ಎಂ. ಆರ್. ಷಾ ಹಾಗೂ ಬಿ.ವಿ. ನಾಗರತ್ನ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಸೂಚನೆ ನೀಡಿದ್ದು, ಪರಿಹಾರ ನಿರಾಕರಿಸಲ್ಪಟ್ಟವರು

ಈ ಬಗ್ಗೆ ಸಂಬಂಧಪಟ್ಟ ಸಮಿತಿ ಎದುರು ದೂರು ಸಲ್ಲಿಸಬಹುದು ಎಂದು ತಿಳಿಸಿದೆ.ದೂರು ದುಮ್ಮಾನಗಳ ಸಮಿತಿ ನಾಲ್ಕು ವಾರಗಳಲ್ಲೇ ತನಗೆ ಬಂದ ಅರ್ಜಿಗಳನ್ನು ಇತ್ಯರ್ಥಪಡಿಸಬೇಕು ಎಂದು ನ್ಯಾಯಾಲಯ ಗಡುವು ನೀಡಿದೆ.

## ಧರ್ಮಸ್ಥಳ ಧರ್ಮಾಧಿಕಾರಿಗಳಿಂದ ಅವಿನಾಶ್ ವಿ. ರಾವ್‌ಗೆ ಅಭಿನಂದನೆ



ದಾವಣಗೆರೆ, ಜು. 18- ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಟಾಪರ್ ಆಗಿ ಹೊರಹೊಮ್ಮುವುದರ ಮೂಲಕ ರಾಜ್ಯಕ್ಕೆ ಮತ್ತು ದಾವಣಗೆರೆ ಜಿಲ್ಲೆಗೆ ಕೀರ್ತಿ ತಂದಿರುವ ಅವಿನಾಶ್ ವಿ. ರಾವ್ ಅವರನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅಭಿನಂದಿಸಿದರು.

## ಕೇರಳದ ಮತ್ತೊಬ್ಬರಲ್ಲಿ ಮಂಕಿಪಾಕ್ಸ್

ನವದೆಹಲಿ, ಜು. 18 – ಕೇರಳದ ಕಣ್ಣೂರಿನಲ್ಲಿ 31 ವರ್ಷದ ವ್ಯಕ್ತಿಯೊಬ್ಬರಲ್ಲಿ ಮಂಕಿಪಾಕ್ಸ್ ಸೋಂಕು ಕಾಣಿಸಿಕೊಂಡಿದೆ. ಇದು ಭಾರತದಲ್ಲಿ ಕಾಣಿಸಿಕೊಂಡ ಎರಡನೇ ಪ್ರಕರಣ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸೋಂಕಿತ ವ್ಯಕ್ತಿ ದುಬೈನಿಂದ ಮಂಗಳೂರು ವಿಮಾನ ನಿಲ್ದಾಣಕ್ಕೆ ಜುಲೈ 13ರಂದು ಬಂದಿದ್ದರು. ಸೋಂಕು ಲಕ್ಷಣ ಕಂಡು ಬಂದ ನಂತರ ಆಸ್ಪತ್ರೆಗೆ ದಾಖಲಿಸಲಾಗಿದೆ. ಪುಣೆಯ ವೈರಾಲಜಿ ಸಂಸ್ಥೆಯಲ್ಲಿ ಪರೀಕ್ಷೆ ನಡೆಸಿದಾಗ ಸೋಂಕು ಖಚಿತ ಪಟ್ಟಿದೆ.

ಕೇರಳದಲ್ಲಿ ಕಳೆದ ವಾರ ಮೊದಲ ಸೋಂಕು ಪ್ರಕರಣ ಕಂಡು ಬಂದಿತ್ತು. ಈ ಬಗ್ಗೆ ಪರಿಶೀಲಿಸಲು ಕೇಂದ್ರ ಆರೋಗ್ಯ ಸಚಿವಾಲಯ ಉನ್ನತ ಹಂತದ ತಂಡವನ್ನು ರಾಜ್ಯಕ್ಕೆ ರವಾನಿಸಿತ್ತು. ಈ ಸೋಂಕು ಸಿಡುಬಿನ ಲಕ್ಷಣಗಳನ್ನು ಹೊಂದಿದೆ. ಆದರೆ, ಸೋಂಕಿನ ತೀವ್ರತೆ ಕಡಿಮೆ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ.

## ದಾವಣಗೆರೆ ವಿವಿಗೆ 'ವಾಲ್ಮೀಕಿ ಮಹರ್ಷಿ' ನಾಮಕರಣ ಮಾಡಿ

ದಾವಣಗೆರೆ, ಜು. 18- ರಾಷ್ಟ್ರಪತಿ ಚುನಾವಣೆಯಲ್ಲಿ ಸ್ಪರ್ಧಿಸಿರುವ ಶ್ರೀಮತಿ ದ್ರೌಪದಿ ಮುರ್ಮು ಅವರು ಬಹುತೇಕ ಗೆಲುವು ಸಾಧಿಸಲಿದ್ದು, ಆಯ್ಕೆಯಾದ ಬಳಿಕ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ 'ವಾಲ್ಮೀಕಿ ಮಹರ್ಷಿ ವಿಶ್ವವಿದ್ಯಾನಿಲಯ' ಎಂದು ನಾಮಕರಣ ಮಾಡುವಂತೆ ಕರ್ನಾಟಕ ಪ್ರದೇಶ ರೈತ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಮನವಿ ಮಾಡಿದ್ದಾರೆ.

ದ್ರೌಪದಿ ಅವರಿಗೆ ರಾಜ್ಯದ ಸಹಸ್ರಾರು ರೈತರ ಆಶೀರ್ವಾದವಿದೆ. ದಾವಣಗೆರೆ ವಿವಿಗೆ ಶ್ರೀ ವಾಲ್ಮೀಕಿ ಮಹರ್ಷಿ ಹೆಸರು ಮತ್ತು ಲಾಂಛನವನ್ನು ಇಟ್ಟು, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ ಹಾಗೂ ಉತ್ತೇಜನ ನೀಡಲು ಭಾವೀ ರಾಷ್ಟ್ರಪತಿಗಳು ಮುಂದಾಗಬೇಕೆಂದು ತಿಳಿಸಿದ್ದಾರೆ.

ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ಅನ್ಯ ಜನಾಂಗದವರಿಂದ ಹಿಂದುತ್ವಕ್ಕೆ ಭಾರೀ ಕೊಡಲಿ ಪೆಟ್ಟು ಬೀಳುತ್ತಿದೆ. ಇದಕ್ಕೆ ಬಿಗಿ ಕಾನೂನು ರೂಪಿಸಿ, ಭಾರತದಲ್ಲಿ ಹಿಂದುತ್ವ ಉಳಿಸಲು ಶಾಸ್ತ್ರಿ ಕೋರಿದ್ದಾರೆ.

# ಇಪಿಎಫ್‌ಒದ ಶೇ.20ರಷ್ಟು ಹಣ ಷೇರುಗಳಲ್ಲಿ ತೊಡಗಿಸಲು ಅನುಮತಿ

ನವದೆಹಲಿ, ಜು. 18 – ನಿವೃತ್ತಿ ನಿಧಿಯ ಸಂಸ್ಥೆಯಾದ ಇ.ಪಿ.ಎಫ್.ಒ.ದ ಶೇ.20ರಷ್ಟು ಹಣವನ್ನು ಷೇರುಗಳಲ್ಲಿ ತೊಡಗಿಸಲು ಈ ತಿಂಗಳು ಒಪ್ಪಿಗೆ ನೀಡುವ ಸಾಧ್ಯತೆ ಇದೆ. ಪ್ರಸಕ್ತ ಷೇರುಗಳಲ್ಲಿ ಹೂಡಿಕೆ ಮಾಡುವ ಮಿತಿ ಶೇ.15ರಷ್ಟಾಗಿದೆ. ಜುಲೈ 29 ಹಾಗೂ 30ರಂದು ಇಪಿಎಫ್‌ಒ ಟ್ರಸ್ಟಿಗಳ ಸಭೆ ನಡೆಯಲಿದೆ. ಅಲ್ಲಿ ಹೂಡಿಕೆ ಮಿತಿ ಹೆಚ್ಚಿಸುವ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

ಪ್ರಸಕ್ತ ಶೇ.5ರಿಂದ 15ರವರೆಗಿನ ಹಣವನ್ನು ಷೇರು ಹಾಗೂ ಷೇರು ಸಂಬಂಧಿಸಿದ ಯೋಜನೆಗಳಲ್ಲಿ ತೊಡಗಿಸಬಹುದಾಗಿದೆ ಎಂದವರು ಹೇಳಿದ್ದಾರೆ. ಇ.ಪಿ.ಎಫ್.ಒ.ದ ಸಲಹಾ ಸಮಿತಿಯಾದ ಹಣಕಾಸು ಲೆಕ್ಕಪರಿಶೋಧನೆ ಹಾಗೂ ಹೂಡಿಕೆಯ ಸಮಿತಿ ಈಗಾಗಲೇ ಪ್ರಸ್ತಾವನೆಗೆ ಒಪ್ಪಿಗೆ ನೀಡಿದೆ. ಸರ್ಕಾರದ ಗ್ಯಾರಂಟಿ ಇರದ ಯಾವುದೇ ಷೇರುಗಳಲ್ಲಿ ಇ.ಪಿ.ಎಫ್.ಒ. ನಿಧಿ ಹೂಡಿಕೆ ಮಾಡಬಾರದು ಎಂದು ಕಾರ್ಮಿಕ ಸಂಘಟನೆಗಳು ಒತ್ತಾಯಿಸಿದ್ದವು.

## ನಲ್ಲಿಯಲ್ಲಿ ಮದ್ಯ ಪೂರೈಕೆ ಸುಳ್ಳು ಸುದ್ದಿ

ನವದೆಹಲಿ, ಜು. 18 – ಕೊಳಾಯಿ ಮೂಲಕ ಮದ್ಯ ಪೂರೈಕೆ ಮಾಡಲಾಗುವುದು ಎಂಬುದು ಸುಳ್ಳು ಸುದ್ದಿ ಎಂದು ಕೇಂದ್ರ ಸರ್ಕಾರದ ಮಾಧ್ಯಮ ವಿಭಾಗ ಸ್ಪಷ್ಟಪಡಿಸಿದೆ.

ಟ್ವಿಟ್ಟರ್ ಮೂಲಕ ಹೇಳಿಕೆ ನೀಡಿರುವ ಪ್ರೆಸ್ ಇನ್ಫಾರ್ಮೇಷನ್ ಬ್ಯೂರೋ, ಸಮಾಧಾನ ಹುಡುಗರೇ, ನಿಮಗೆ ಅತಿ ಆಸೆ ಬೇಡ ಎಂದು ಹೇಳಿದೆ. ಪ್ರಧಾನ ಮಂತ್ರಿ ಕಚೇರಿಗೆ ತಿಂಗಳಿಗೆ 11 ಸಾವಿರ ರೂ. ಪಾವತಿಸಿದರೆ ನಿತ್ಯ ನಲ್ಲಿ ಮೂಲಕ ಮದ್ಯ ಪೂರೈಕೆಯಾಗಲಿದೆ ಎಂದು ಹೇಳುತ್ತಿರುವುದು ನಕಲಿ ಸುದ್ದಿ ಎಂದು ತಿಳಿಸಲಾಗಿದೆ.


www.sparshhospital.com

SPARSH HOSPITAL
THE TOUCH OF LIFE

ಹೆಮಟಾಲಜಿ ಕ್ಲಿನಿಕ್



ಡಾ. ಮಹೇಶ್ ರಾಜಶೇಖರಯ್ಯ
MBBS, MD (Internal Medicine), DM (Clinical Haematology),
MRCP (The UK), Fellowship in BMT & Leukemia (Vancouver)
**Head of Haematology and Bone Marrow Transplant Department**

ಈ ಕೆಳಗಿನ ಕಾಯಿಲೆಗಳಿಂದ ನರಳುತ್ತಿರುವವರು

- ಅನೀಮಿಯಾ, ರಕ್ತದ ಹೆಚ್ಚಳ, ಕಡಿಮೆ ಹಾಗೂ ಅಧಿಕ ಪ್ಲೇಟ್ಲೆಟ್ ಕೌಂಟ್, ಕಡಿಮೆ ಹಾಗೂ ಅಧಿಕ ಬಿಳಿ ರಕ್ತಕಣಗಳ ಕೌಂಟ್, ಲ್ಯೂಕೇಮಿಯಾ, ಲಿಂಫೋಮ, ಮಲ್ಟಿಪಲ್ ಮೈಲೋಮ, ರಕ್ತಸ್ರಾವ ಮತ್ತು ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆಗಳು
- ಮಕ್ಕಳಲ್ಲಿ ಕಂಡುಬರುವ ಎಲ್ಲಾ ರೀತಿಯ ಹೆಮಟೋಲೊಜಿ ಸಮಸ್ಯೆಗಳು ( ಥಲಸ್ಸೆಮಿಯ ಸೇರಿದಂತೆ), ರಕ್ತಸ್ರಾವದ ಸಮಸ್ಯೆಗಳು, ರಕ್ತಹೆಪ್ಪುಗಟ್ಟುವಿಕೆಯ ಸಮಸ್ಯೆಗಳು, ಇಮ್ಯುನೊಡಿಫಿಷಿಯನ್ಸಿ ಸಮಸ್ಯೆಗಳು , ಲ್ಯುಕೇಮಿಯಾ, ಲಿಂಫೋಮಾ ಇತರ ಅಂಗಾಂಗಗಳ ಕ್ಯಾನ್ಸರ್ ಹೊಂದಿರುವವರು.
- ಪುನರಾವರ್ತಿತ ಗರ್ಭಪಾತ ಸೇರಿದಂತೆ ಗರ್ಭಿಣಿಯರು ಮಹಿಳೆಯರಲ್ಲಿ ಕಂಡುಬರುವ ಎಲ್ಲಾ ರೀತಿಯ ಹೆಮಟಾಲೋಜಿ ಸಮಸ್ಯೆಗಳು, ಡಿವಿಟಿ, ಅನೀಮಿಯಾ, ಕಡಿಮೆ ಪ್ಲೇಟ್ಲೆಟ್ ಹೊಂದಿರುವವರು, ಮಹಿಳೆಯರಲ್ಲಿ ರಕ್ತಸ್ರಾವದ ಸಮಸ್ಯೆಗಳು, ಲ್ಯುಕೇಮಿಯಾ, ಲಿಂಫೋಮಾ, ಎಪಿ ಎಲ್‌ಎ ಸಿಂಡ್ರೋಮ್.

ನೋಂದಣಿಗಾಗಿ ಕರೆಮಾಡಿ: 89519 91304 / 081922 22292

ದಿನಾಂಕ : ಬುಧವಾರ, 20 ಜುಲೈ 2022
ಸ್ಥಳ : ಅನುಗ್ರಹ ಆಸ್ಪತ್ರೆ, ಎಂ ಸಿ ಸಿ, ಬಿ ಬ್ಲಾಕ್, ದಾವಣಗೆರೆ
ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ

ಸೂಚನೆ: ವೈದ್ಯರು ಪ್ರತೀ ತಿಂಗಳ ಮೂರನೇ ಬುಧವಾರ ತಪಾಸಣೆಗೆ ಲಭ್ಯರಿರುತ್ತಾರೆ


# ಭಾರತದ ನಿಜವಾದ ಸಂಪತ್ತು ಯುವ ಸಮೂಹ




**ದಾವಣಗೆರೆ ವಿ. ವಿ. ರಿಜಿಸ್ಟ್ರಾರ್ ಡಾ. ಶಿವಶಂಕರ್**

ದಾವಣಗೆರೆ,ಜು.18- ಜಗತ್ತಿನ ಜನಸಂಖ್ಯೆಯಲ್ಲಿ ಅತಿ ದೊಡ್ಡ ಮೊತ್ತದ ಯುವ ಶಕ್ತಿಯನ್ನು ಹೊಂದಿರುವ ಭಾರತ ದೇಶದ ನಿಜವಾದ ಸಂಪತ್ತು ಯುವ ಸಮೂಹವಾಗಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಡಾ. ಕೆ. ಶಿವಶಂಕರ್ ತಿಳಿಸಿದರು.

ನಗರದ ಬಾಪೂಜಿ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಮೊನ್ನೆ ಏರ್ಪಾಡಾಗಿದ್ದ ರಾಜ್ಯಮಟ್ಟದ ಅಂತರ ಕಾಲೇಜು ಸ್ಪರ್ಧೋತ್ಸವ ಆಗ್ಟಾಗಾನ್‌ನ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ಬಹುಮಾನ ಹಾಗೂ ಚಾಂಪಿಯನ್ ಶಿಪ್ ಟ್ರೋಫಿ ವಿತರಿಸಿ ಅವರು ಮಾತನಾಡುತ್ತಿದ್ದರು.

ಯುವ ಸಮೂಹವು ಅಭಿವೃದ್ಧಿಶೀಲ ಭಾರತ ಎನ್ನುವ ಹಣೆಪಟ್ಟಿಯನ್ನು ಹೋಗಲಾಡಿಸಿ ಅಭಿವೃದ್ಧಿ ಹೊಂದಿದ ರಾಷ್ಟ್ರ ಭಾರತ ಎನ್ನುವ ಮಟ್ಟಕ್ಕೆ ಕೊಂಡೊಯ್ಯಬೇಕು. ಇದಕ್ಕಾಗಿ ಹೊಸತನದ ಆವಿಷ್ಕಾರಗಳನ್ನು ನಡೆಸಬೇಕು. ಹೊಸತನದ ಆವಿಷ್ಕಾರಗಳಿಗೆ ಪ್ರೇರಣೆಯಾಗುವ ಇಂತಹ ಸ್ಪರ್ಧೆಗಳು ಉಪಯುಕ್ತವಾಗಿದ್ದು, ಇದರಿಂದ ವಿಕಾಸವಾಗಬೇಕು. ವಿಕಾಸವೇ ನಮ್ಮ ವಿಳಾಸವಾಗಬೇಕು. ನಾವು ಮಾತನಾಡುವುದಲ್ಲ, ನಮ್ಮ ಕಾರ್ಯಗಳೇ ಮಾತನಾಡುವಂತಾಗಬೇಕು ಎಂದರು.

ಕಾಲೇಜಿನ ನಿರ್ದೇಶಕ ಡಾ. ಸ್ವಾಮಿ ತ್ರಿಭುವನಾನಂದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಿರ್ವಹಣೆಯ ಬಗ್ಗೆ ವಿಶೇಷ ಅರಿವು ಉಂಟು ಮಾಡುವುದೇ ಈ ಸ್ಪರ್ಧೋತ್ಸವದ ಉದ್ದೇಶವಾಗಿದ್ದು, ಅದು ಇಲ್ಲಿ ಯಶಸ್ವಿಯಾಗಿದೆ. ಇದು ಬಹುಮಾನಕ್ಕಿಂತ ದೊಡ್ಡದು ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ. ನವೀನ್ ನಾಗರಾಜ್, ಬಾಪೂಜಿ ಹೈಟೆಕ್ ಕಾಲೇಜಿನ ಪ್ರಾಂಶುಪಾಲ ಡಾ. ಬಿ. ವೀರಪ್ಪ ಮುಂತಾದವರು ಉಪಸ್ಥಿತರಿದ್ದರು.

ಇಂಚರಾ ಮೂರ್ತಿ ಪ್ರಾರ್ಥಿಸಿದರು. ಮಹೇಂದ್ರ ಹಾಗೂ ಶ್ರೀರಕ್ಷಾ ನಿರೂಪಿಸಿದರು. ಕಾಲೇಜಿನ ವಿಭಾಗದ ಮುಖ್ಯಸ್ಥ, ಸ್ಪರ್ಧೋತ್ಸವದ ಮುಖ್ಯ ನಿರ್ವಾಹಕ ಡಾ. ಪ್ರಕಾಶ್ ಎಸ್. ಅಳಲಗೇರಿ ವಂದಿಸಿದರು. ಆಕ್ಟಾಗಾನ್ ನ ಚಾಂಪಿಯನ್‌ಶಿಪ್ ಫಲಕವನ್ನು ಸಹ ಇದೇ ಸಂದರ್ಭದಲ್ಲಿ ಪ್ರದಾನ ಮಾಡಲಾಯಿತು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte